ಸಂಪುಟ: 13 Volume | ಸಂಚಿಕೆ: 268 Issue | ಪುಟಗಳು 08 Pages | ಗುರುವಾರ 11 ಡಿಸೆಂಬರ್ 2025 | ₹6 | PRGINO.120927 (RNINO:KARKAN/2011/48371) | BDR/054/2026-2027 | mallammanudi@gmail.com | www.mallammanudi.in | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಜೀವನದಲ್ಲಿಗೆಲುವುತಾನೇಬರುವುದಿಲ್ಲ. ಸಮಾಜದಕುಲುಮೆಯಲ್ಲಿಪ್ರತಿಭಾವಂತನ ಪ್ರತಿಭೆ ಬೆಂದು ಮಾಣಿಕ್ಯವಾಗಿ ಹೊರಬರಬೇಕಾಗುತ್ತದೆ.ಇದಕ್ಕೆದೈವ ಬಲ, ಮಾತಾ ಪಿತೃಗಳ ಬಲವೂ ಪ್ರಮುಖವಾಗಿರುತ್ತದೆ.ಯಾವುದಕ್ಕೂ ಸದಾ ಪ್ರಯತ್ನ ಅಗತ್ಯ.

–ಕೌಟಿಲ್ಯ, ಅರ್ಥಶಾಸ್ತ್ರ ಪಂಡಿತ

ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರ ಕಲಿಸಿ 6 | ರಸ್ತೆ ಅಪಘಾತ: ಮೂವರ ಸಾವು 7 | ಗ್ಯಾರಂಟಿ ಯೋಜನೆಗಳ ಪರಿಶೀಲನಾ ಸಭೆ 8

## ಕರ್ನಾಟಕರಾಜ್ಯೋತ್ಸವರತ್ನಪ್ರಶಸ್ತಿ


**ಬೀದರ್:** ನಗರದ ಡಾ.ಚನ್ನಬಸವ ಪಟ್ಟದೇವರ ಜಿಲ್ಲಾ ರಂಗ ಮಂದಿರದಲ್ಲಿ ವೀರ ಕನ್ನಡಿಗರ ಸಂಸ್ಥೆ ಕರ್ನಾಟಕ, ವೀರ ಕನ್ನಡಿಗರ ಸೇನೆ ರಾಜ್ಯ ಘಟಕ ಮತ್ತು ಬೀದರ ಜಿಲ್ಲಾ ಘಟಕದ ವತಿಯಿಂದ ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ ಗಡಿ ಕನ್ನಡಿಗರ ಉತ್ಸವ ಹಾಗೂ 70 ನೇಯ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಪ್ರೊ ಶಾಂತರಸ ಎಸ್ ಹೊಸಮನಿ ಅವರಿಗೆ ರಾಜ್ಯ ಮಟ್ಟದ ಕರ್ನಾಟಕ ರಾಜ್ಯೋತ್ಸವ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಎಸ್ ಕಟ್ಟಿಮನಿ ಸೇರಿ ಸಹದ್ಯೋಗಿಗಳು, ಮಿತ್ರರು ಹರ್ಷ ವ್ಯಕ್ತಪಡಿಸಿದ್ದಾರೆ.

## ಕೈಗಾರಿಕೆಗೆ ೨೦೦೦ ಎಕರೆ

**ಕಲಬುರಗಿ:** ಕಲ್ಯಾಣ ಕರ್ನಾಟಕ ಪ್ರದೇಶದ 9000 ಎಕರೆ ಜಮೀನಿನಲ್ಲಿ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಪಡಿಸಲು 1522.49 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ ಎಂದು ಬೃಹತ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ, ಬೆಳಗಾವಿ ಚಳಿಗಾಲದ ವಿಧಾನ ಮಂಡಲ ಅಧಿವೇಶನದಲ್ಲಿ ವಿಧಾನ ಪರಿಶಷತ ಸದಸ್ಯ ಡಾ.ಬಿ.ಜಿ.ಪಾಟೀಲ ಅವರ ಪ್ರಶ್ನೆಗೆ ಉತ್ತರಿಸಿದ್ದಾರೆ. ಕಲ್ಯಾನ ಕರ್ನಾಟಕ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಾದ ಬಳ್ಳಾರಿ– 1554 ಎಕರೆ ಜನೀಮು ಕೈಗಾರಿಕಾ ಅಭಿವೃದ್ಧಿಗೆ 234 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ. ಅದರಂತೆ ವಿಜಯನಗರ ಜಿಲ್ಲೆಯ 110 ಎಕರೆಗೆ 9.30 ಕೋಟಿ, ಬೀದರ ಜಿಲ್ಲೆಗೆ 1616 ಎಕರೆಗೆ 186 ಕೋಟಿ, ಕಲಬುರಗಿ ಜಿಲ್ಲೆಯ 1535 ಎಕರೆಗೆ 255 ಕೋಟಿ, ಕೊಪ್ಪಳ ಜಿಲ್ಲೆಯ 205 ಎಕರೆಗೆ 72.51 ಕೋಟಿ, ರಾಯಚೂರ ಜಿಲ್ಲೆಯ 2010 ಎಕರೆಗೆ 336 ಕೋಟಿ, ಯಾದಗಿರ ಜಿಲ್ಲೆಯ 2057 ಎಕರೆಗೆ 426 ಕೋಟಿ ರೂ.ಗಳನ್ನು ಖರ್ಚು ಮಾಡಿ ಕೈಗಾರಿಕಾಭಿವೃದ್ಧಿ ಪಡಿಸಲಾಗಿದೆ ಎಂದಿದ್ದಾರೆ.

## ತಿರುಪತಿಯಲ್ಲಿ ರೇಷ್ಮೆಸೀರೆ ವಿವಾದ

**ತಿರುಪತಿ:** ಇಲ್ಲಿಯವರೆಗೂ ತಿರುಪತಿ ತಿಮ್ಮಪ್ಪನ ಪ್ರಸಿದ್ಧ ಪ್ರಸಾದ ಲಡ್ಡು ತಯಾರಿಕೆಗೆ ಬಳಸಿದ ತುಪ್ಪದ ವಿವಾದದ ಇನ್ನು ಬಗೆಹರಿಯದ ಬೆನ್ನಲ್ಲೇ ಮತ್ತೊಂದು ವಂಚನೆ ಜಾಲವನ್ನು ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ) ಬಯಲಿಗೆಳೆದಿದೆ. ಲಡ್ಡು ವಿವಾದ, ಭಕ್ತರ ಕಾಣಿಕೆ ಹುಂಡಿ ಎಣಿಕೆ ಕಾರ್ಯದ ವೇಳೆ ಹಣ ಕಳ್ಳತನ ಪ್ರಕರಣದ ನಂತರ 15,000 ರೇಷ್ಮೆ ದುಪ್ಪಟ್ಟಾ, ನಕಲಿಯದ್ದು ಎಂದು ಬಯಲಾಗಿದೆ. ಇದರಿಂದ ಟಿಟಿಡಿ ದೇವಸ್ಥಾನಕ್ಕೆ 54 ಕೋಟಿ ರೂ.ಗೂ ಹೆಚ್ಚು ನಷ್ಟ ಉಂಟಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.



## ಪತ್ರಕರ್ತ ಪ್ರಶಾಂತ್ ಮೇಲೆ ಹಲ್ಲೆ

**ಸೇಡಂ:** ಯಡ್ರಾಮಿ ತಾಲೂಕಿನ ಪತ್ರಕರ್ತ ಪ್ರಶಾಂತ ಚವ್ಹಾಣ ಅವರ ಮೇಲೆ ನಡೆಸಿರುವ ಆರೋಪಿಗಳನ್ನು ಕೂಡಲೇ ಬಂಧಿಸಿ ಕಠಿಣ ಶಿಕ್ಷೆ ನೀಡಬೇಕು ಎಂದು ಆಗ್ರಹಿಸಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಸೇಡಂ ವತಿಯಿಂದ ಮುಖ್ಯಮಂತ್ರಿಗಳಿಗೆ ಬರೆದ ಮನವಿ ಪತ್ರವನ್ನು ಸಹಾಯಕ ಆಯುಕ್ತರ ಕಚೇರಿಯ ತಹಸೀಲ್ದಾರ್ ಅವರ ಮೂಲಕ ಸಲ್ಲಿಸಲಾಗಿದೆ. ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾಗಿರುವ ಪತ್ರಿಕಾರಂಗದಲ್ಲಿ ಕೆಲಸ ಮಾಡುವವರಿಗೆ ಭಯರಹಿತ ವಾತಾವರಣ ಒದಗಿಸುವುದು ಆಡಳಿತದ ಹೊಣೆಗಾರಿಕೆಯಾಗಿದೆ. ಪತ್ರಕರ್ತ ಪ್ರಶಾಂತ ಚವ್ಹಾಣ ಅವರ ಮೇಲೆ ನಡೆದ ಹಲ್ಲೆ ಪ್ರಕರಣವು ಪತ್ರಿಕಾ ವಲಯ ಮತ್ತು ಸಾರ್ವಜನಿಕರಲ್ಲಿ ತೀವ್ರ ಆತಂಕ ಸೃಷ್ಟಿಸಿದ್ದು, ಕೂಡಲೇ ನ್ಯಾಯೊದಗಿಸಬೇಕು ಎಂದು ಒತ್ತಾಯಿಸಿದೆ.

# ಧರ್ಮಸ್ಥಳದ ವಿರುದ್ಧ ಪಿತೂರಿ

**ಬೆಳಗಾವಿ:** ಧರ್ಮಸ್ಥಳದ ವಿರುದ್ಧ ಪಿತೂರಿ ನಡೆಯುತ್ತಿದೆ. ಇಂತಹ ವಿವಾದಗಳು ಹಲವು ತಲೆಮಾರುಗಳಿಂದ ಉಳಿದುಕೊಂಡಿರುವ ಸಂಸ್ಥೆಗಳಿಗೆ ಹಾನಿ ಮಾಡಬಹುದು ಎಂದು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಬುಧವಾರ ಹೇಳಿದ್ದಾರೆ.



ಬೆಳಗಾವಿಯಲ್ಲಿ ಮಾತನಾಡಿ ಧರ್ಮಸ್ಥಳದ ವಿರುದ್ಧ ಪಿತೂರಿ ನಡೆಯುತ್ತಿದೆ ಎಂದು ನಾನು ವಿಧಾನಸಭೆಯಲ್ಲಿ ಬಹಿರಂಗವಾಗಿ ಹೇಳಿದ್ದೆ. ಆದರೆ, ಸತ್ಯ ಮೇಲುಗೈ ಸಾಧಿಸಿದೆ. ಕಾನೂನು ತನ್ನದೇ ಆದ ಹಾದಿಯನ್ನು ಹಿಡಿಯಬೇಕು. ಇಂತಹ ವಿವಾದಗಳು ಹಲವು ತಲೆಮಾರುಗಳಿಂದ ಜಾರಿಯಲ್ಲಿರುವ ಸಂಸ್ಥೆಗಳಿಗೆ ಹಾನಿ ಮಾಡಬಹುದು. ಆರ್‌ಎಸ್‌ಎಸ್ ಮತ್ತು ಬಿಜೆಪಿ ನಡುವೆ ದೊಡ್ಡ ವ್ಯತ್ಯಾಸವಿದೆ ಮತ್ತು ಅದು ಕೂಡ ಈ ವಿವಾದದಲ್ಲಿ ಆಳವಾಗಿ ಬೇರೂರಿದೆ ಎಂದು ತಿಳಿಸಿದ್ದಾರೆ.

ಇದಕ್ಕೂ ಮೊದಲು, ಆಗಸ್ಟ್ 31 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ಸಾಮೂಹಿಕ ಅಂತ್ಯಕ್ರಿಯೆ ಪ್ರಕರಣದ ಬಗ್ಗೆ ರಾಷ್ಟ್ರೀಯ ತನಿಖಾ ಸಂಸ್ಥೆ ತನಿಖೆಯನ್ನು ತಳ್ಳಿಹಾಕಿದರು. ವಿಶೇಷ ತನಿಖಾ ತಂಡ ಈ ವಿಷಯದ ಬಗ್ಗೆ ತನಿಖೆ ನಡೆಸುತ್ತಿದೆ ಎಂದಿದ್ದಾರೆ.

# ಷಡ್ಯಂತ್ರದ ರೂವಾರಿಗಳು ಯಾರ್?

**ಬೆಳಗಾವಿ:** ಬುರುಡೆ ಗ್ಯಾಂಗ್ ನವರು ಎಷ್ಟು ತಪ್ಪಿತಸ್ಥರೋ, ಅವರಿಗೆ ಹಣಕಾಸು ವ್ಯವಸ್ಥೆ ಮಾಡಿದವರು, ಈ ಷಡ್ಯಂತ್ರದ ರೂವಾರಿಗಳು, ಸೂತ್ರಧಾರಿಗಳ ಕುರಿತು ಬೆಳಕು ಚೆಲ್ಲಬೇಕು. ಈ ಸಂಬಂಧ ಎಸ್‌ಐಟಿ ತನಿಖಾ ವರದಿ ನೀಡಲಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ಆಗ್ರಹಿಸಿದ್ದಾರೆ.



ಮಾಧ್ಯಮಗಳ ಜೊತೆ ಇಂದು ಮಾತನಾಡಿ, ಬುರುಡೆ ಗ್ಯಾಂಗಿನಿಂದ ನಾಡಿನ ಧಾರ್ಮಿಕ ಶ್ರದ್ಧೆ ಕುರಿತು ಅನುಮಾನ ಹುಟ್ಟಿಸುವ ಕಾರ್ಯ ಆಗಿದೆ. ಇದೆಲ್ಲದರ ಬಗ್ಗೆ ರಾಜ್ಯ ಸರಕಾರವು ಎಸ್‌ಐಟಿ ತನಿಖೆ ನಡೆಯುತ್ತಿದೆ ಎಂದು ಕೈಕಟ್ಟಿ ಕೂತರೆ ಆಗುವುದಿಲ್ಲ ಎಂದು ಆಕ್ಷೇಪಿಸಿದ್ದಾರೆ,

ಧರ್ಮಸ್ಥಳದ ವಿಚಾರದಲ್ಲಿ ಪಾತ್ರಧಾರಿಗಳಷ್ಟೇ ಬಹಿರಂಗವಾಗಿದ್ದಾರೆ. ಆದರೆ, ಸೂತ್ರಧಾರಿಗಳ ಬಗ್ಗೆ ಏನು ಎಂಬುದಾಗಿ ರಾಜ್ಯದ ಜನರು ಕೇಳುತ್ತಿದ್ದಾರೆ. ಸೂತ್ರಧಾರಿಗಳು ಮುಖ್ಯಮಂತ್ರಿಗಳ ಸುತ್ತ ಇದ್ದಾರೆಯೇ ಎಂದು ಪ್ರಶ್ನಿಸಿದ್ದಾರೆ.

# ಉತ್ತರಕ್ಕೆ ಕಲಾಪ ತತ್ತರ

## ಉತ್ತರ ಕರ್ನಾಟಕ ಸಮಸ್ಯೆಗೆ ಅಧಿವೇಶನ ಬಿಸಿ | ಧ್ವನಿ ಎತ್ತಿದ ಪ್ರತಿಪಕ್ಷ | ಸರ್ಕಾರ ದಿಟ್ಟ ನಡೆ

• ಮಲ್ಲಮ್ಮ ನುಡಿ ಬೆಳಗಾವಿ

ಪ್ರತಿ ಬಾರಿ ಬೆಳಗಾವಿ ಅಧಿವೇಶನದಲ್ಲಿ ಉತ್ತರ ಕರ್ನಾಟಕ ಕುರಿತ ಚರ್ಚೆ ಕೊನೆಯ ಆದ್ಯತೆಯಾಗುತ್ತಿತ್ತು. ಆದರೆ ಈ ಬಾರಿಯ ಅಧಿವೇಶನದಲ್ಲಿ ಪ್ರತಿಪಕ್ಷ ಕೂಗಿಗೆ ಕಲಾಪವೇ ಕಾವೇರಿದೆ. ಬೆಳಗಾವಿ ಅಧಿವೇಶನ ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಚರ್ಚೆಗೆ ಆದ್ಯತೆ ನೀಡಬೇಕಾದ ವೇದಿಕೆಯಾಗಿದೆ.

**ವಿವಿಧ ಸಮಸ್ಯೆಗಳು:** ರೈತರ ಸಮಸ್ಯೆ, ಮೆಕ್ಕೆ ಜೋಳ ಖರೀದಿ, ಕಬ್ಬಿನ ಸಮಸ್ಯೆ, ನಿರುದ್ಯೋಗ ಸೇರಿ ಅನೇಕ ಜ್ವಲಂತ ಸಮಸ್ಯೆಗಳನ್ನು ಪ್ರತಿಪಕ್ಷ ನಾಯಕ ಆರ್ ಅಶೋಕ್ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಸಮರ್ಥವಾಗಿ ಸರ್ಕಾರದ ಮುಂದಿಟ್ಟಿದ್ದಾರೆ.

**ಶಾಲಿನಿ ದಿಟ್ಟಕ್ರಮ:** ದಶಕಗಳಿಂದ ನಡೆಯುತ್ತಿರುವ ಪ್ರಾದೇಶಿಕ ನಿರ್ಲಕ್ಷ್ಯವನ್ನು ನಿಭಾಯಿಸಲು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ದಿಟ್ಟ ಕ್ರಮ ಕೈಗೊಂಡಿದ್ದಾರೆ. ಎಲ್ಲಾ ಪ್ರಧಾನ ಕಾರ್ಯದರ್ಶಿಗಳು, ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಮತ್ತು ಇಲಾಖಾ ಮುಖ್ಯಸ್ಥರಿಗೆ ತುರ್ತು ಪತ್ರ ಬರೆದಿದ್ದಾರೆ.



### ದ್ವೇಷ ಭಾಷಣಕ್ಕೆ 10 ಕಾರಾಗೃಹ ಸಜೆ...

ದ್ವೇಷ ಭಾಷಣ ಮತ್ತು ಅಪರಾಧ ಎಸಗುವವರಿಗೆ ಕನಿಷ್ಠ ಒಂದು ವರ್ಷದಿಂದ 10 ವರ್ಷಗಳವರೆಗೆ ಕಾರಾಗೃಹ ಶಿಕ್ಷೆ, 50 ಸಾವಿರದಿಂದ ಒಂದು ಲಕ್ಷದವರೆಗೆ ಜುಲ್ಮಾನೆ ವಿಧಿಸುವ ಕಠಿಣ ಕಾನೂನನ್ನು ವಿಧಾನ ಮಂಡಲದಲ್ಲಿಂದು ಮಂಡಿಸಲಾಗಿದೆ. ಗೃಹ ಸಚಿವ ಡಾ.ಜಿ.ಪರಮೇಶ್ವರ್ ಪ್ರಶ್ನೋತ್ತರದ ಬಳಿಕ ವಿಧಾನಸಭೆಯಲ್ಲಿ 2025 ನೇ ಸಾಲಿನ ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಪ್ರತಿಬಂಧಕ ಮತ್ತು ನಿಯಂತ್ರಣ ವಿಧೇಯಕವನ್ನು ಮಂಡಿಸಿದ್ದು, ಇದಕ್ಕೆ ಪ್ರತಿಪಕ್ಷಗಳು, ಈ ಕಾಯ್ದೆ ಮಂಡನೆಗೆ ಅವಕಾಶ ನೀಡಬಾರದು ಎಂದು ಪಟ್ಟು ಹಿಡಿದಿದ್ದವು. ವಿರೋಧದ ನಡುವೆಯೂ ಸಭಾಧ್ಯಕ್ಷ ಖಾದರ್ ವಿಧೇಯಕ ಮಂಡನೆಗೆ ಅವಕಾಶ ಕಲ್ಪಿಸಿದ್ದು, ಮಂಡನೆಯಾಗಿರುವ ವಿಧೇಯಕದಲ್ಲಿ ದ್ವೇಷ ಭಾಷಣದ ಪ್ರಸರಣೆ, ಪ್ರಕಟಣೆ ಅಥವಾ ಪ್ರಚಾರ ನಿರ್ಬಂಧಿಸಲಾಗಿದೆ.

### ಸಮಸ್ಯೆಗೆ ಪರಿಹಾರ ಸಾಧ್ಯತೆ

ಮುಂದಿನ ಸಚಿವ ಸಂಪುಟ ಸಭೆಯು ಬೆಳಗಾವಿಯಲ್ಲಿ ನಡೆಯಲಿದೆ. ಚಳಿಗಾಲದ ಅಧಿವೇಶನ ಮಧ್ಯದಲ್ಲಿ ಮುಕ್ತಾಯಗೊಳ್ಳುವುದರಿಂದ ಫೈಲ್‌ಗಳನ್ನು ತ್ವರಿತವಾಗಿ ಪಟ್ಟಿ ಮಾಡಲು ಶಾಲಿನಿ ಸೂಚಿಸಿದ್ದಾರೆ. ಉತ್ತರ ಕರ್ನಾಟಕದ ದೀರ್ಘಕಾಲದಿಂದ ನಿರ್ಲಕ್ಷಿಸಲ್ಪಟ್ಟ ಬೇಡಿಕೆಗಳು ಈ ಬಾರಿ ಅಧಿವೇಶನದಲ್ಲಿ ಈಡೇರುವ ಸಾಧ್ಯತೆಯಿದೆ.

### ಶಾಸಕರ ಗ್ಯಾರೆಂಟಿ ಚರ್ಚೆ

ಕಾಂಗ್ರೆಸ್ ಶಾಸಕಾಂಗ ಪಕ್ಷ ಸಭೆಯಲ್ಲಿ (ಸಿಎಲ್‌ಪಿ) ಶಾಸಕರು ಗ್ಯಾರಂಟಿ ಯೋಜನೆಗಳನ್ನು ಮಾತ್ರ ನಂಬಿಕೊಂಡು ಇರುವ ಬದಲು ಅಭಿವೃದ್ಧಿ ಕೆಲಸಗಳಿಗೆ ಹೆಚ್ಚು ಒತ್ತು ನೀಡಬೇಕೆಂದು ಸಿಎಂ ಮತ್ತು ಡಿಸಿಎಂ ಅವರಿಗೆ ಮನವಿ ಮಾಡಿದ್ದಾರೆ ಎಂಬುದು ತಿಳಿದು ಬಂದಿದೆ. ಆದರೆ ಸಿಎಲ್‌ಪಿ ಸಭೆಯಲ್ಲಿ ಗ್ಯಾರಂಟಿ ಯೋಜನೆಗಳ ಪರಿಷ್ಕರಣೆ ಬಗ್ಗೆ ಚರ್ಚೆಯಾಗಿಲ್ಲ ಎಂದು ಕಾಂಗ್ರೆಸ್ ತಳ್ಳಿಹಾಕಿದೆ.

### ಕಪ್ಪುಪಟ್ಟಿ ಧರಿಸಿದ್ದ ಬೆಲ್ಲದ್

ಲಿಂಗಾಯತರ ಮೇಲಿನ ದೌರ್ಜನ್ಯ ಕುರಿತು ಚರ್ಚೆಗೆ ಅವಕಾಶ ನೀಡಬೇಕು. ತಮ್ಮ ಸಮುದಾಯದ ಮೇಲೆ ದೌರ್ಜನ್ಯ ವಿರುದ್ಧ ವಿಧಾನಸಭೆಯ ಪ್ರತಿ ಪಕ್ಷದ ಉಪನಾಯಕ ಅರವಿಂದ ಬೆಲ್ಲದ್ ತಮ್ಮ ತೋಳಿಗೆ ಧರಿಸಿದ್ದ ಕಪ್ಪು ಪಟ್ಟಿ ತೆಗೆಸಲು ಸಭಾಧ್ಯಕ್ಷರು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಜಂಟಿಯಾಗಿ ಮನ ವೊಲಿಸು ವಲ್ಲಿಯಶಸ್ವಿಯಾಗಿದ್ದಾರೆ.

### ಕುರ್ಚಿ ವಿಷಯ, ಎಲ್ರು ಸೈಲೆಂಟ್

ಅಧಿಕಾರ ಹಂಚಿಕೆಯ ಸದ್ದುಗದ್ದಲ ಮುಂದುವರಿದಿದೆ ಅಧಿಕಾರ ಹಂಚಿಕೆಯ ಸೂಕ್ಷ್ಮ ವಿಷಯದ ಬಗ್ಗೆ ಸಾರ್ವಜನಿಕ, ಆಂತರಿಕ ಹೇಳಿಕೆ ನೀಡದಂತೆ ಸಿಎಲ್‌ಪಿ ಸಭೆಯಲ್ಲಿ ಸಿಎಂ ಶಾಸಕರಿಗೆ ಎಚ್ಚರಿ ಸಿದ್ದಾರೆ. ಜನವರಿ ಬಳಿಕ ಹೈಕಮಾಂಡ್ ತೀರ್ಮಾನಿಸಲಿದೆ. ನಾವೇ ಕೆದುಕುವುದು ಬೇಡ ಅಂತ ಡಿಕೆಶಿ ಹೇಳಿದ್ದರಿಂದ ಅವರ ಬಣವೂ ಮೌನವಾಗಿದೆ.

## ದೇಶದಲ್ಲಿ ಹೂಡಿಕೆಗೆ ನಾಡು ಉತ್ತಮ ಸ್ಥಳ

**ಬೆಳಗಾವಿ:** ವಿವಿಧ ರಾಜ್ಯಗಳ ನಡುವಿನ ಸ್ಪರ್ಧೆಯನ್ನು ಪರಿಗಣಿಸಿ ಕರ್ನಾಟಕವು ದೇಶದಲ್ಲಿ ಹೂಡಿಕೆಗೆ ಅತ್ಯುತ್ತಮ ಸ್ಥಳವಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಹೇಳಿದ್ದಾರೆ.



ವಿಧಾನ ಪರಿಷತ್ತಿನಲ್ಲಿ ಎಂಎಲ್ಸಿ ಕೇಶವ ಪ್ರಸಾದ್ (ಬಿಜೆಪಿ) ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಹೂಡಿಕೆದಾರರನ್ನು ಆಕರ್ಷಿಸಲು ರಾಜ್ಯಗಳ ನಡುವಿನ ಕಠಿಣ ಸ್ಪರ್ಧೆಯನ್ನು ಪರಿಗಣಿಸಿ ರಾಜ್ಯ ಸರ್ಕಾರವು ಕೈಗಾರಿಕಾ ಅನುಮತಿಯ ಬಗ್ಗೆ ಗಂಭೀರವಾಗಿದೆ ಎಂದು ತಿಳಿಸಿದ್ದಾರೆ.

ಹೂಡಿಕೆಗಳನ್ನು ಉತ್ತೇಜಿಸಲು ಸರ್ಕಾರವು ಅತ್ಯುತ್ತಮ ನೀತಿಗಳನ್ನು ಅಳವಡಿಸಿಕೊಳ್ಳುತ್ತಿದೆ. ಹೂಡಿಕೆದಾರರನ್ನು ಆಕರ್ಷಿಸಲು ಸ್ಪರ್ಧೆ ಇದೆ. ಗುಜರಾತ್, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳು ಹೂಡಿಕೆದಾರರನ್ನು ಆಕರ್ಷಿಸಲು ಶ್ರಮಿಸುತ್ತಿವೆ ಮತ್ತು ನಾವು ಹಿಂದೆ ಸಹ ಹಿಂದೆ ಬಿದ್ದಿಲ್ಲ ಎಂದು ವಿವರಿಸಿದ್ದಾರೆ.

## ರಾಗಾ ಜರ್ಮನಿ ಪ್ರವಾಸಕ್ಕೆ ಬಿಜೆಪಿ ಕಿಡಿ

**ಹೊಸದಿಲ್ಲಿ:** ಸಂಸತ್ ಅಧಿವೇಶನ ನಡೆಯುತ್ತಿರುವಾಗಲೇ ಲೋಕಸಭೆಯ ಪ್ರತಿಪಕ್ಷದ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಜರ್ಮನಿ ಪ್ರವಾಸ ಕೈಗೊಂಡಿರುವುದಕ್ಕೆ ಬಿಜೆಪಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಚುನಾವಣಾ ಆಯೋಗದ ಮುಖ್ಯಸ್ಥರ ನೇಮಕ ವಿಚಾರವಾಗಿ ಕೇಂದ್ರ ಸರ್ಕಾರದ ವಿರುದ್ಧ ರಾಹುಲ್ ಗಾಂಧಿ ವಾಗ್ದಾಳಿ ನಡೆಸಿದ ಬೆನ್ನಲ್ಲೇ ಈ ಟೀಕೆಗಳು ವ್ಯಕ್ತವಾಗಿವೆ

ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಅವರು ರಾಹುಲ್ ಗಾಂಧಿಯನ್ನು ಎನ್‌ಐಆರ್ ರಾಜ–ಕಾರಣಿ ಎಂದು ಕರೆದರೆ, ಸಚಿವ ಪ್ರಹ್ಲಾದ್ ಜೋಶಿ ಅವರು, ಗಂಭೀರವಲ್ಲದ ನಾಯಕ ಎಂದು ಜರಿದಿದ್ದಾರೆ. ಇದಕ್ಕೆ ತಿರುಗೇಟು ನೀಡಿದ ಕಾಂಗ್ರೆಸ್, ಪ್ರಧಾನಿ ನರೇಂದ್ರ ಮೋದಿ ಅವರ ವಿದೇಶಿ ಪ್ರವಾಸಗಳ ಬಗ್ಗೆ ಪ್ರಶ್ನೆ ಎತ್ತಿದೆ.

## ಬಜರಂಗದಳ ನಿಷೇಧಕ್ಕೆ ಆಗ್ರಹ

• ಮಲ್ಲಮ್ಮ ನುಡಿ ಬೆಂಗಳೂರು

ಬಜರಂಗದಳವು ಅನೇಕ ಅಪರಾಧಗಳಲ್ಲಿ ಭಾಗಿಯಾಗಿದೆ. ಹೀಗಾಗಿ ಅದನ್ನು ರಾಜ್ಯದಲ್ಲಿ ನಿಷೇಧಿಸಬೇಕು ಎಂದು ಕಾಂಗ್ರೆಸ್ ವಿಧಾನ ಪರಿಷತ್ ಸದಸ್ಯ ಬಿ ಕೆ ಹರಿಪ್ರಸಾದ್ ಆಗ್ರಹಿಸಿದ್ದಾರೆ.

ತಮ್ಮ ಈ ಬೇಡಿಕೆಯನ್ನು ಈಡೇರಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದೇನೆ. ಏಕೆಂದರೆ ಬಜರಂಗದಳ ನಿಷೇಧ ಸಹ ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯ ಭಾಗವಾಗಿತ್ತು ಎಂದಿದ್ದಾರೆ.

ಬಜರಂಗದಳವನ್ನು ನಿಷೇಧಿಸಬೇಕೆಂದು ನಾನು ಮುಖ್ಯಮಂತ್ರಿಯನ್ನು ಒತ್ತಾಯಿಸಿದ್ದೇನೆ. ಅದು ನಮ್ಮ ಪ್ರಣಾಳಿಕೆಯಲ್ಲಿತ್ತು ಎಂದಿದ್ದಾರೆ.

ಬಜರಂಗದಳದ ಚಟುವಟಿಕೆಗಳು ಕರ್ನಾಟಕದಲ್ಲಿ ಹೊಸದಲ್ಲ. ನಮ್ಮ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಒಬ್ಬರಾದ ಗಣೇಶ್ ಗೌಡ ಅವರನ್ನು ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಾಡಲಾಯಿತು. ಅವರನ್ನು ಬಜರಂಗದಳ ಕಾರ್ಯಕರ್ತರೇ ಕೊಂದರು. ಬಜರಂಗದಳ ಕಾರ್ಯಕರ್ತರು ಹಲವಾರು



ಕೊಲೆ ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ ಎಂದು ಟೀಕಿಸಿದ್ದಾರೆ.

## ಕಮಲದಡಿ ನಾಯಕತ್ವದ ಕಿಡಿ

• ಮಲ್ಲಮ್ಮ ನುಡಿ ಬೆಂಗಳೂರು

ರಾಜ್ಯ ಕಾಂಗ್ರೆಸ್ ನಲ್ಲಿ ನಾಯಕತ್ವ ಬದಲಾವಣೆ ಗದ್ದಲ ಒಂದು ಕಡೆ–ಯಾದರೆ, ಬಿಜೆಪಿಯಲ್ಲೂ ಗೊಂದಲ ಮುಗಿದಿಲ್ಲ. ಬಿಜೆಪಿಯಲ್ಲಿನ ಆಂತರಿಕ ಭಿನ್ನಾಭಿಪ್ರಾಯ ಒಂದಲ್ಲಾ ಒಂದು ಸ್ವರೂಪದಲ್ಲಿ ಬಹಿರಂಗವಾಗ್ತಿದೆ. ಈ ನಡುವೆ ವಿಧಾನಸಭೆ ಮೊಗಸಾಲೆಯಲ್ಲಿರುವ ವಿಪಕ್ಷ ನಾಯಕ ಆರ್ ಅಶೋಕ್ ಕಚೇರಿಯಲ್ಲಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಜೊತೆಗೆ ಬಿಜೆಪಿಯ ಕೆಲವು ಶಾಸಕರು ಬಾಗಿಲು ಮುಚ್ಚಿ ಮಾತುಕತೆ ನಡೆಸಿರುವುದು ಕುತೂಹಲ ಕೆರಳಿಸಿದೆ. ಬುಧವಾರ ಭೋಜನ ವಿರಾಮದ ಬಳಿಕ ಶಾಸಕರಾದ ಬಸನಗೌಡ ಪಾಟೀಲ್ ಯತ್ನಾಳ್, ಸುನೀಲ್ ಕುಮಾರ್, ಬೈರತಿ ಬಸವರಾಜ್ ಸೇರಿದಂತೆ ಕೆಲವು ಶಾಸಕರು ಮಾತುಕತೆಯ ಸಂದರ್ಭದಲ್ಲಿ ಇದ್ದರು. ಶಾಸಕ ಶಿವರಾಜ್ ಪಾಟೀಲ್ ಕೂಡಾ ಇದೇ ವೇಳೆ ಉಪಸ್ಥಿತರಿದ್ದರು.

### ಬಾಗಿಲು ತೆರೆಯಲು ಯತ್ನಿಸಿದ್ದ ಮುನಿರತ್ನ

ಕಚೇರಿ ಬಾಗಿಲು ಮುಚ್ಚಿ ಯತ್ನಾಳ್ ಜೊತೆಗೆ ಬಿಜೆಪಿ ಶಾಸಕರು ಮಾತುಕತೆ ನಡೆಸುತ್ತಿದ್ದರು. ಈ ವೇಳೆ ಶಾಸಕ ಮುನಿರತ್ನ ಆಗಮಿಸಿದರು. ಬಾಗಿಲು ತೆರೆಯಲು ಅವರು ಯತ್ನಿಸಿದರು. ಬಳಿಕ ಶಿವರಾಜ್ ಪಾಟೀಲ್ ಬಾಗಿಲು ತೆರೆದರು. ಅವರು ಒಳಹೋದ ಮೇಲೆ ಮತ್ತೆ ಬಾಗಿಲು ಮುಚ್ಚಲಾಯಿತು.

## ಕಲ್ಬುರ್ಗಿ, ಬೀದರ್ ಗ್ರಾಮಗಳಿಗೆ ನೀರು ಕೊಡಿ

• ಮಲ್ಲಮ್ಮ ನುಡಿ ಕಲಬುರಗಿ

ಕಲಬುರಗಿ ಹಾಗೂ ಬೀದರ್ ಜಿಲ್ಲೆಗಳ ಗ್ರಾಮಗಳ ಸಮಗ್ರ ಕುಡಿಯುವ ನೀರಿನ ಯೋಜನೆಗೆ ಅನುಮೋದನೆ ಹಾಗೂ ಜೆಜೆಎಂ ಅಡಿಯಲ್ಲಿ ಶೇ 50 ಅನುದಾನ ಬಿಡುಗಡೆಗಾಗಿ ಪ್ರಧಾನಿಗೆ ರಾಜ್ಯಸಭೆ ವಿರೋಧಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಪತ್ರ.



**ಪ್ರಧಾನಿಗೆ ಕಾಂಗ್ರೆಸ್ ವರಿಷ್ಠ ಮಲ್ಲಿಕಾರ್ಜುನ ಖರ್ಗೆ ಪತ್ರ**

ಕಲಬುರಗಿ ಹಾಗೂ ಬೀದರ್ ಜಿಲ್ಲೆಗಳ ಸಮಗ್ರ ಬಹುಗ್ರಾಮ ಕುಡಿಯುವ ನೀರು ಒದಗಿಸುವ ಯೋಜನೆಗಾಗಿ ಅನುಮೋದನೆ ಹಾಗೂ ಜಲ್ ಜೀವನ್ ಮಿಷನ್ ಯೋಜನೆಯಡಿಯಲ್ಲಿ 50% ಕೇಂದ್ರ ಸರ್ಕಾರದ ಹೊಂದಾಣಿಕೆ ಅನುದಾನ ಬಿಡುಗಡೆ ಮಾಡುವಂತೆ ಪ್ರಧಾನ ಮಂತ್ರಿಗೆ ರಾಜ್ಯಸಭೆ ವಿರೋಧಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಕೋರಿದ್ದಾರೆ.

ಈ ಕುರಿತು ಡಿಸೆಂಬರ್ 9 ರಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿರುವ ಖರ್ಗೆ ಅವರು ಕಲಬುರಗಿ ಮತ್ತು ಬೀದರ್ ಜಿಲ್ಲೆಗಳ ಎಲ್ಲಾ ಗ್ರಾಮೀಣ ಜನವಸತಿಗಳಿಗೆ DBOT (Design, Build, Operation and Transfer – ಡಿಬಿಒಟಿ – ವಿನ್ಯಾಸ, ನಿರ್ಮಾಣ, ಕಾರ್ಯ ಹಾಗೂ ವರ್ಗಾವಣೆ) ಆಧಾರದ ಮೇಲೆ 7,200.00 ಕೋಟಿ ರೂ. ಅಂದಾಜು ಯೋಜನಾ ವೆಚ್ಚದಲ್ಲಿ ಸಮಗ್ರ ಬಹು–ಗ್ರಾಮ ನೀರು ಸರಬರಾಜು ಯೋಜನೆಯ ಪ್ರಸ್ತಾವನೆಗೆ ರಾಜ್ಯ ಸಚಿವ ಸಂಪುಟ ಅನುಮೋದನೆ ನೀಡಿದೆ.

ಲಾಕ್ಷಣಿಕ ಇಮ್ಮಡಿ ನಾಗವರ್ಮನ ಕಾವ್ಯಾವಲೋಕನದ ಅಲಂಕಾರ ಕೃತಿಯು ನಾಡಿನ ಸಾಹಿತ್ಯದ ಲೋಕದ ಅಮರ ಕೃತಿ

## ಡಿ.11 ರಂದು ಶ್ರೀ ಮೈಲಾರಲಿಂಗೇಶ್ವರ ದೇವಸ್ಥಾನ ಜಾತ್ರಾ ಉತ್ಸವ ಪೂರ್ವಭಾವಿ ಸಭೆಗೆ ಸೂಚನೆ

ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:

ಯಾದಗಿರಿ ಜಿಲ್ಲೆಯ ಯಾದಗಿರಿ ತಾಲೂಕಿನ ಮೈಲಾಪೂರ ಗ್ರಾಮದ ಶ್ರೀ ಮೈಲಾರಲಿಂಗೇಶ್ವರ ದೇವಸ್ಥಾನ ಜಾತ್ರಾ ಉತ್ಸವದ ಪೂರ್ವಭಾವಿ ಸಭೆಯು ಜಿಲ್ಲಾಧಿಕಾರಿ ಶ್ರೀ ಹರ್ಷಲ್ ಭೋಯರ್ ಅವರ ಅಧ್ಯಕ್ಷತೆಯಲ್ಲಿ 2025ರ ಡಿಸೆಂಬರ್ 11 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಸಭೆಯನ್ನು ಆಯೋಜಿಸಲಾಗಿದೆ ಎಂದು ಯಾದಗಿರಿ ಅಪರ ಜಿಲ್ಲಾಧಿಕಾರಿ ಶ್ರೀ ರಮೇಶ ಕೋಲಾರ ಅವರು ತಿಳಿಸಿದ್ದಾರೆ.

ಶ್ರಿ ಮೈಲಾರಲಿಂಗೇಶ್ವರ ದೇವಸ್ಥಾನ 2026ರ ಜನವರಿ 12 ರಿಂದ 18ರ ವರೆಗೆ ಜರಗುವ ಜಾತ್ರೆಯ ಮುಂಜಾಗ್ರತಾ ಕ್ರಮವಾಗಿ ಪೂರ್ವ ಸಿದ್ಧತೆ ಕಾರ್ಯಗಳ ಕುರಿತಂತೆ ಪೂರ್ವಭಾವಿ ಸಭೆಗೆ ಅಂದು ಸಂಬಂಧಪಟ್ಟ ಅಧಿಕಾರಿಗಳು ತಮ್ಮ ಪ್ರತಿನಿಧಿಯನ್ನು ಕಳುಹಿಸದೇ ತಾವೇ ಖುದ್ದಾಗಿ ತಪ್ಪದೇ ಉಪಸ್ಥಿತರಿರುವಂತೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪಡಿತರ ಆಹಾರ ಬಿಡುಗಡೆ

ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ :

ಯಾದಗಿರಿ ಜಿಲ್ಲೆಯ 2025ರ ಡಿಸೆಂಬರ್ ಮಾಹೆ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಪ್ರತಿ ಅಂತ್ಯೋದಯ (ಎಎವೈ) ಪಡಿತರ ಚೀಟಿಗೆ 35 ಕೆ.ಜಿ ಅಕ್ಕಿ ಮತ್ತು ಪಿ.ಹೆಚ್.ಹೆಚ್ (ಬಿಪಿಎಲ್) ಪಡಿತರ ಚೀಟಿಯಲ್ಲಿನ ಪ್ರತಿ ಫಲಾನುಭವಿಗೆ 5 ಕೆ.ಜಿ, ಉಚಿತವಾಗಿ ವಿತರಿಸುತ್ತಿದೆ ಎಂದು ಯಾದಗಿರಿ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಉಪ ನಿರ್ದೇಶಕರು ಶ್ರೀ ರಮೇಶ ಕೋಲಾರ ಅವರು ತಿಳಿಸಿದ್ದಾರೆ.

ರಾಜ್ಯ ಸರ್ಕಾರದ ಮಾರ್ಗಸೂಚಿಯಂತೆ ಏಕ ಸದಸ್ಯ, ದ್ವಿ ಸದಸ್ಯ ಮತ್ತು ತ್ರಿ ಸದಸ್ಯ ಎಎವೈ ಪಡಿತರ ಚೀಟಿಗಳನ್ನು ಹೊರತುಪಡಿಸಿ ನಾಲ್ಕು ಮತ್ತು ನಾಲ್ಕಕಿಂತ ಹೆಚ್ಚಿನ ಸದಸ್ಯರುಳ್ಳ ಅಂತ್ಯೋದಯ (ಎಎವೈ) ಪಡಿತರ ಚೀಟಿಯ ಫಲಾನುಭವಿಗೆ ಮತ್ತು ಪಿ.ಹೆಚ್. ಹೆಚ್(ಬಿಪಿಎಲ್) ಪಡಿತರ ಚೀಟಿಯಲ್ಲಿನ ಪ್ರತಿ ಫಲಾನುಭವಿಗೆ 5 ಕೆ.ಜಿ ಹೆಚ್ಚುವರಿ ಅಕ್ಕಿಯನ್ನು ಉಚಿತವಾಗಿ ವಿತರಿಸಲಾಗುವುದು.

ಒಂದು ರಾಷ್ಟ್ರ ಒಂದು ಪಡಿತರ ಚೀಟಿ (ಅಂತರ್ ರಾಜ್ಯ, ಅಂತರ್ ಜಿಲ್ಲೆ) ಪೋರ್ಟೆಬಿಲಿಟಿ ಜಾರಿಯಲ್ಲಿರುವುದರಿಂದ ಯಾವುದೇ ರಾಜ್ಯದ ಪಡಿತರ ಚೀಟಿದಾರರು ಯಾವುದೇ ವರ್ಗದ ಪಡಿತರ ಚೀಟಿದಾರರು ಯಾವುದೇ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರವನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಯಾವುದೇ ನ್ಯಾಯಬೆಲೆ ಅಂಗಡಿಕಾರರು ಕಡಿಮೆ ಪ್ರಮಾಣದ ಪಡಿತರವನ್ನು ವಿತರಣೆ ಮಾಡಿದ್ದಲ್ಲಿ, ಹಣ ಕೇಳಿದ್ದಲ್ಲಿ ಮತ್ತು ಇತರೆ ದೂರುಗಳಿಗೆ ನಿಶುಲ್ಕ ಸಹಾಯವಾಣಿ ಸಂಖ್ಯೆ 1967ಗೆ ಹಾಗೂ ತಾಲ್ಲೂಕಿನಲ್ಲಿರುವ ತಹಶೀಲ್ದಾರರ ಕಛೇರಿಗೆ ಅಥವಾ ಜಿಲ್ಲೆಯ ಉಪನಿರ್ದೇಶಕರ ಕಛೇರಿ ಇಲ್ಲಿಗೆ ದೂರನ್ನು ಸಲ್ಲಿಸಬೇಕು.

ಈ ಯೋಜನೆಯಡಿ ವಿತರಿಸಲಾದ ಆಹಾರ ಧಾನ್ಯಗಳನ್ನು ಹಣಕ್ಕಾಗಿ ಪಡಿತರ ಚೀಟಿದಾರರು ಮಾರಾಟ ಮಾಡುವುದಾಗಲಿ ಅಥವಾ ಸಂಗ್ರಹಣೆ ಮಾಡುವುದು ಕಂಡುಬಂದಲ್ಲಿ ಅಂತಹ ಪಡಿತರ ಚೀಟಿದಾರರಿಗೆ ವಿತರಿಸಲಾದ ಆಹಾರ ಧಾನ್ಯಗಳಿಗೆ ಮುಕ್ತ ಮಾರುಕಟ್ಟೆದರಕ್ಕೆ ದಂಡ ವಿಧಿಸಲಾಗುವುದು ಮತ್ತು ಸದರಿ ಪಡಿತರ ಚೀಟಿಯನ್ನು ಆರು ತಿಂಗಳ ಅವಧಿಗೆ ಅಮಾನತ್ತುಗೊಳಿಸಲಾವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪತ್ರಿಕೋದ್ಯಮ: ಅಪ್ರೆಂಟಿಸ್ ತರಬೇತಿಗೆ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಯಾದಗಿರಿ ಕಚೇರಿಯಿಂದ 2025-26ನೇ ಸಾಲಿನ ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿಗೆ ಸೇರಿದ ಪತ್ರಿಕೋದ್ಯಮ ಪದವೀಧರರಿಗೆ ಜಿಲ್ಲಾ ಕಚೇರಿಗಳಲ್ಲಿ ಮಾಧ್ಯಮ ಕ್ಷೇತ್ರಗಳಲ್ಲಿನ ಕಾರ್ಯನಿರ್ವಹಣೆ ಕುರಿತು ಒಂದು ವರ್ಷ ಅವಧಿಯ ಅಪ್ರೆಂಟಿಸ್ ತರಬೇತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಯಾದಗಿರಿ ಕಚೇರಿಯ ಹಿರಿಯ ಸಹಾಯಕ ನಿರ್ದೇಶಕ ಸುಲೈಮಾನ್ ಡಿ. ನದಾಫ್ ಅವರು ತಿಳಿಸಿದ್ದಾರೆ.

ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿಯ ಇಬ್ಬರು ಅಭ್ಯರ್ಥಿಯನ್ನು ಮೆರಿಟ್ ಹಾಗೂ ಸಂದರ್ಶನದ ಮೂಲಕ ಆಯ್ಕೆ ಮಾಡಿಕೊಳ್ಳಲಾಗುವುದು. ಆಯ್ಕೆಯಾದ ಪ್ರತಿ ಅಪ್ರೆಂಟಿಸ್ ಅಭ್ಯರ್ಥಿಗೆ ಮಾಹೆಯಾನ 15,000 ರೂ. ಸ್ಟೈಫಂಡ್ ನೀಡಲಾಗುವುದು

ಅಭ್ಯರ್ಥಿಯು ಪತ್ರಿಕೋದ್ಯಮದಲ್ಲಿ ಪದವಿ/ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಪಡೆದಿರಬೇಕು.

ಕಂಪ್ಯೂಟರ್ ಜ್ಞಾನ ಹೊಂದಿದ್ದು, ಕನ್ನಡ ಭಾಷೆ ಬಳಕೆಯಲ್ಲಿ ಪ್ರಬುದ್ಧತೆ ಇರಬೇಕು. ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಗಳ ವಯಸ್ಸು 35 ವರ್ಷ ಮೀರಿರಬಾರದು.

ಈಗಾಗಲೇ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ಮಾಧ್ಯಮ ಅಕಾಡೆಮಿಯಿಂದ ಇದೇ ರೀತಿಯ ಅಪ್ರೆಂಟಿಸ್ ತರಬೇತಿ ಪಡೆದವರು ಮತ್ತು ಅಂಕಪಟ್ಟಿ ನಿರೀಕ್ಷಿಸಿ ಅರ್ಜಿ ಸಲ್ಲಿಸುವಂತಿಲ್ಲ.

ಸುಳ್ಳು ಮಾಹಿತಿ ನೀಡಿ ಅರ್ಜಿ ಸಲ್ಲಿಸಿದಲ್ಲಿ ಅಂತಹವರ ವಿರುದ್ಧ ಕ್ರಿಮಿನಲ್ ಮೊಕದಮ್ಮೆ ಹೂಡಲಾಗುವುದು.

ಅರ್ಹ ಅಭ್ಯರ್ಥಿಗಳು ಅರ್ಜಿ ನಮೂನೆಯನ್ನು ಹಿರಿಯ ಸಹಾಯಕ ನಿರ್ದೇಶಕರ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಮೊದಲನೇ ಮಹಡಿ, ಜಿಲ್ಲಾಡಳಿತ ಭವನ, ಯಾದಗಿರಿ-585202 ಇವರಿಂದ ಪಡೆದು ಭರ್ತಿ ಮಾಡಿ ಅದರೊಂದಿಗೆ ದೃಢೀಕೃತ ಎಸ್.ಎಸ್.ಎಲ್.ಸಿ. ಅಂಕಪಟ್ಟಿ, ಪತ್ರಿಕೋದ್ಯಮ ಪದವಿ/ ಸ್ನಾತಕೋತ್ತರ ಪದವಿ ಪ್ರಮಾಣಪತ್ರ, ಜಾತಿ ಪ್ರಮಾಣ ಪತ್ರ, ಆಧಾರ್ ಕಾರ್ಡ್ ಪ್ರತಿ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಹಾಗೂ ಇನ್ನಿತರ ಪೂರಕ ದಾಖಲೆಗಳನ್ನು ಲಗತ್ತಿಸಿ ಇದೇ ಕಚೇರಿಗೆ 2025ರ ಡಿಸೆಂಬರ್ 24 ರೊಳಗೆ ಸಲ್ಲಿಸಬೇಕು.

ತದನಂತರ ಬರುವ ಅರ್ಜಿಗಳನ್ನು ಪರಿಗಣಿಸುವುದಿಲ್ಲ. ಹೆಚ್ಚಿನ ಮಾಹಿತಿಗೆ ಮೇಲ್ಕಂಡ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

## ಅಂತರಾಷ್ಟ್ರೀಯ ವಾಣಿಜ್ಯ ಮೇಳ ಸಿರಿಧಾನ್ಯ ಖಾದ್ಯಗಳ ಸ್ಪರ್ಧೆ



ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:

"ಅಂತರಾಷ್ಟ್ರೀಯ ವಾಣಿಜ್ಯ ಮೇಳ-2026"ರ ಅಂಗವಾಗಿ ಸಿರಿಧಾನ್ಯಗಳ ಮಹತ್ವ & ಆಹಾರ ಪದ್ಧತಿಗಳಲ್ಲಿ ಸಿರಿಧಾನ್ಯಗಳ ಬಳಕೆ ಉತ್ತೇಜಿಸಲು ಸಿರಿಧಾನ್ಯ ಬಳಸಿ, ಆರೋಗ್ಯ ಉಳಿಸಿ ಎಂಬ ಧ್ಯೇಯ ವಾಕ್ಯದೊಂದಿಗೆ ಜಿಲ್ಲಾ ಮಟ್ಟದ "ಸಿರಿಧಾನ್ಯ ಮತ್ತು ಮರೆತು ಹೋದ ಖಾದ್ಯಗಳ ಪಾಕ ಸ್ಪರ್ಧೆ"ಯನ್ನು ಜಂಟಿ ಕೃಷಿ ನಿರ್ದೇಶಕರ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮವನ್ನು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಯಾದಗಿರಿ ರವರು ಉದ್ಘಾಟಿಸಿದರು. ಸ್ಪರ್ಧೆಯ ತೀರ್ಪುಗಾರರಾಗಿ ಡಾ॥ ಜಯಪ್ರಕಾಶ ನಾರಾಯಣ, ಮುಖ್ಯಸ್ಥರು, ಖಅಂಖ, ಕೃಷಿ ವಿಜ್ಞಾನ ಕೇಂದ್ರ, ಕವಡಿಮಟ್ಟಿ, ಡಾ॥ ಶಶಿಕಲಾ ರೂಳಿ, ಸಹಾಯಕ ಪ್ರಾಧ್ಯಾಪಕರು, ತೋಟಗಾರಿಕೆ ವಿಸ್ತಿರಣಾ ಘಟಕ, ಯಾದಗಿರಿ ಮತ್ತು ಶ್ರೀಮತಿ ಸ್ನೇಹಲ್, ಸಹಾಯಕ ಪ್ರಾಧ್ಯಾಪಕರು, (ಗೃಹ ವಿಜ್ಞಾನ) ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿ ರವರು ಭಾಗವಹಿಸಿದರು. ಈ ಸ್ಪರ್ಧೆಯಲ್ಲಿ ಜಿಲ್ಲೆಯ ವಿವಿಧ ಗ್ರಾಮಗಳಿಂದ ಒಟ್ಟು 34 ಸ್ಪರ್ಧಾಳುಗಳು ಭಾಗವಹಿಸಿದ್ದರು.

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸ್ಪರ್ಧಾಳುಗಳನ್ನು ಉದ್ದೇಶಿಸಿ ಮಾತನಾಡುತ್ತಾ, ಹೆಚ್ಚು ರಾಸಾಯನಿಕ ಬಳಸುವುದರಿಂದ ಅನಾರೋಗ್ಯ ಉಂಟಾಗುತ್ತದೆ. ಆದ್ದರಿಂದ ಮಹಿಳೆಯರಾದ ತಾವು ದಿನ ನಿತ್ತದ ಆಹಾರ ಪದ್ಧತಿಯಲ್ಲಿ ಸಿರಿಧಾನ್ಯಗಳನ್ನು ಬಳಸಿ ಆರೋಗ್ಯವಂತರಾಗಿರಿ ಎಂದು ಉಪದೇಶ ಹೇಳಿದರು.

ತೀರ್ಪುಗಾರರ ಅಂತಿಮ ತೀರ್ಪಿನ ಮೇರೆಗೆ ಖಾರಾ ಖಾದ್ಯಗಳಲ್ಲಿ ಶ್ರೀಮತಿ. ಮನ್‌ಪ್ರೀತ್, ಯಾದಗಿರಿ (ನವಣೆ ಟಿಕ್ಕಿ - ಪ್ರಥಮ), ಶ್ರೀಮತಿ. ಅರ್ಚನಾ. ಪಿ. ಸುರೇಶ, ಸೈದಾಪೂರ (ರಾಗಿಡೋಕ್ಲಾ - ದ್ವಿತೀಯ) ಮತ್ತು ಶ್ರೀಮತಿ. ವಿಮಲಾ ಗಂಡ ಅರ್ಜುನ ಹೊಸಮನಿ, ಯಡಳ್ಳಿ (ನವಣೆ ಕಿಚಡಿ- ತೃತೀಯ) ಸ್ಥಾನವನ್ನು ಪಡೆದಿರುತ್ತಾರೆ.

ಸಿಹಿ ಖಾದ್ಯಗಳಲ್ಲಿ ಶ್ರೀಮತಿ. ನಿರೂಪ ಎಸ್ ಪಾಟೀಲ್, ಯಾದಗಿರಿ (ರಾಗಿ ಸ್ಮೂದಿ-ಪ್ರಥಮ), ಶೋಭಾ, ಹತ್ತಿಗೂಡುರು (ರಾಗಿ ಜಾಮೂನ್- ದ್ವಿತೀಯ) ಮತ್ತು ಶ್ರೀಮತಿ. ಸರೋಜನಿ ಗಂಡ ಗುರುಲಿಂಗಪ್ಪ, ಸುರಪೂರ (ನವಣೆ ಪಾಯಸ- ತೃತೀಯ) ಸ್ಥಾನವನ್ನು ಪಡೆದಿರುತ್ತಾರೆ.

ಮರೆತು ಹೋದ ಖಾದ್ಯಗಳಲ್ಲಿ ಶ್ರೀಮತಿ. ಶರಣಮ್ಮ ಗಂಡ ಶರಣಪ್ಪ, ಮೈಲಾಪೂರ (ಜೋಳದ ಮುಟ್ಟಗಿ-ಪ್ರಥಮ), ರೇಷ್ಮ ತಂದೆ ಚಾಂದ್ ಪಾಷಾ, ಐಕೂರ(ಸಜ್ಜೆ ಕಡಬು-ದ್ವಿತೀಯ) ಮತ್ತು ಶ್ರೀಮತಿ. ಗಂಗಮ್ಮ, ಹತ್ತಿಗೂಡುರು (ಸಿರಿಧಾನ್ಯ ತಂಬಿಟ್ಟು- ತೃತೀಯ) ಸ್ಥಾನವನ್ನು ಪಡೆದಿರುತ್ತಾರೆ.

ಸ್ಪರ್ಧೆಯ ವಿಜೇತರಿಗೆ ಕೃಷಿ ಇಲಾಖೆಯು ಪ್ರಥಮ ಸ್ಥಾನ ಪಡೆದವರಿಗೆ ರೂ. 5,000 ದ್ವಿತಿಯ ಸ್ಥಾನ ಪಡೆದವರಿಗೆ ರೂ. 3,000 ತೃತಿಯ ಸ್ಥಾನ ಪಡೆದವರಿಗೆ ರೂ. 2,000 ನಗದು ಬಹುಮಾನ ನೀಡಿ ಪ್ರೋತ್ಸಾಹಿಸುತ್ತಿದೆ.

## ಬೆಳೆ ಪರಿಹಾರ ಹಣವನ್ನು ಸಾಲದ ಖಾತೆಗೆ ಜಮೆ ಬೇಡ

ಮಲ್ಲಮ್ಮ ನುಡಿ ವಾರ್ತೆ ಬೀದರ:

ಜಿಲ್ಲೆಯಲ್ಲಿ 2025-26 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಅತಿ ವೃಷಿಯಿಂದ ಬೆಳೆಹಾನಿಯಾದ ರೈತರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ನೀಡಲಾಗುತ್ತಿರುವ ಬೆಳೆ ಹಾನಿ ಪರಿಹಾರ (Input Subsidy) ಹಣವು ರೈತರಿಗೆ ಆರ್ಥಿಕ ಪುನಶ್ಚೇತನ ನೀಡಿ ಮುಂದಿನ ಬೆಳೆಗೆ ಬೇಕಾಗುವ ಕೃಷಿ ಪರಿಕರಗಳನ್ನು ಖರೀದಿಸಿ ಬೆಳೆ ಬೆಳೆಯಲು ಸಹಕಾರಿಯಾಗುತ್ತಿದೆ. ಆದರೆ ಬೆಳೆ ಹಾನಿ ಪರಿಹಾರ ಹಣವನ್ನು (Input Subsidy) ಸಾಲದ ಖಾತೆಗೆ (Loan Account) ಹೊಂದಾಣಿಕ ಮಾಡಬಾರದೆಂದು ಭಾರತ ಸರ್ಕಾರದ ನಿರ್ದೇಶನವಿರುತ್ತದೆ. ಸದರಿ ನಿರ್ದೇಶನವನ್ನು ಪಾಲಿಸಿಕೊಂಡು ಬಂದಿರುವ ಬೆಳೆ ಹಾನಿ ಪರಿಹಾರವನ್ನು ರೈತರಿಗೆ ವಿತರಿಸಲು ಹಾಗೂ ಯಾವುದೇ ಕಾರಣಕ್ಕು ಬ್ಯಾಂಕ ಸಾಲದ ಖಾತೆಗೆ (Loan Account) ಹೊಂದಾಣಿಕೆ ಮಾಡಿಕೊಳ್ಳದಂತೆ ಕ್ರಮ ಜರುಗಿಸಲು ಸೂಚಿಸಿದೆ. ಹಾಗೂ ಈ ಸೂಚನೆಯನ್ನು ಉಲ್ಲಂಘಿಸಿ ಯಾವುದೇ ಬ್ಯಾಂಕ್ ನವರು ಬೆಳೆ ಹಾನಿ ಪರಿಹಾರದ ಮೊತ್ತವನ್ನು ಸಾಲಕ, ಜಮೆ ಮಾಡಿಸಿಕೊಂಡಲ್ಲಿ ಅಂತಹ ಬ್ಯಾಂಕ್ ಮ್ಯಾನೆಜಗಳ ಮೇಲೆ ಕ್ರಮ ಜರುಗಿಸಲು SLBC ಗೆ ಶಿಫಾರಸ್ಸು ಮಾಡಲಾಗುವುದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಎಚ್ಚರಿಸಿದ್ದಾರೆ.

### ಸೌಹಾರ್ದ ತರಬೇತಿ ಕೇಂದ್ರ ಇಎಸ್‌ಎಂ ಎಂಎಸ್‌ಎಂಇ

## ಕೈಗಾರಿಕೆಗಳ ಕಾರ್ಯಕ್ಷಮತೆ ಹೆಚ್ಚಿಸಲು ಅರಿವು ಮೂಡಿಸುವ ಕಾರ್ಯಕ್ರಮ



ಮಲ್ಲಮ್ಮ ನುಡಿ ವಾರ್ತೆ ಬೀದರ:

ಬೀದರ: ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಎಂ.ಎಸ್.ಎಂ.ಇ ನಿರ್ದೇಶನಾಲಯ ಬೆಂಗಳೂರು ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್ತು ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ದಿನಾಂಕ 14-10-2025ರಂದು ಬೆಳಿಗ್ಗೆ 11-00 ಗಂಟೆಗೆ ಸೌಹಾರ್ದ ತರಬೇತಿ ಕೇಂದ್ರ, ನೌಬಾದ, ಬೀದರಿನಲ್ಲಿ ರ್‍ಯಾಂಪ್ ಯೋಜನೆಯಡಿ "ಇಎಸ್‌ಎಂ" ಎಂ.ಎಸ್. ಎಂ.ಇ. ಕೈಗಾರಿಕೆಗಳ ಕಾರ್ಯಕ್ಷಮತೆ ಹೆಚ್ಚಿಸುವುದು ಮತ್ತು ವೇಗಗೊಳಿಸುವುದು ಒಂದು ದಿವಸದ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಬೀದರ ಛೇಂಬರ್ ಆಫ್ ಕಾಮರ್ಸ್ ಬಿ.ಜಿ.ಶೆಟಕಾರ ಅವರು ಕಾರ್ಯಕ್ರಮ ಉದ್ಘಾಟಿಸಿ ನಂತರ ಬಗ್ಗೆ ಮಾತನಾಡಿದರು.

ಬೀದರ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಕರಾದ ಸುರೇಖಾ ಮುನೋಳಿ ಅವರು ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ವಹಿಸಿದರು. ಅಧ್ಯಕ್ಷರು,

ಈ ಕಾರ್ಯಕ್ರಮದಲ್ಲಿ ಫಾರ್ಮಾ ಅಶೋಸಿಯೇಷನ್, ಅಧ್ಯಕ್ಷರು, ಎಸ್.ಸಿ/ಎಸ್.ಎಸ್‌ಟಿ ಅಶೋಸಿಯೇಷನ್ ಬೀದರ ಇವರು ಅಧ್ಯಕ್ಷರು, ಸಣ್ಣ ಕೈಗಾರಿಕೆಗಳ ಸಂಘ, ಬೀದರ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಆಯೋಗದ ಅಧ್ಯಕ್ಷರ ಜಿಲ್ಲಾ ಪ್ರವಾಸ

ಮಲ್ಲಮ್ಮ ನುಡಿ ವಾರ್ತೆ ಬೀದರ:-

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರಾದ ಶಶಿಧರ್ ಕೋಸಂಬೆ ಅವರು ಡಿಸೆಂಬರ್.12 ಮತ್ತು 13 ರಂದು ಬೀದರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿರುತ್ತಾರೆ.

ಅವರು ಡಿ.12 ರಂದು ಬೆಳಿಗ್ಗೆ 11 ಗಂ-ಟೆಗೆ ಬೀದರ್ ತಾಲ್ಲೂಕಿನ ಜನವಾಡ ಗ್ರಾಮದ ಗುರುನಾನಕ್ ಪಬ್ಲಿಕ್

ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ 8 ವರ್ಷದ ಬಾಲಕಿ ಶಾಲಾ ಬಸ್‌ಗೆ ಸಿಲುಕಿ ಮೃತಪಟ್ಟಿರುವ ಪ್ರಕರಣ ಕುರಿತು ಶಾಲೆಗೆ ಮತ್ತು ಬಾಲಕಿಯ ಮನೆಗೆ ಭೇಟಿ ನೀಡಲಿದ್ದಾರೆ. ನಂತರ ಬೀದರನಲ್ಲಿಯೇ ವಾಸ್ತವ್ಯ ಮಾಡಲಿದ್ದಾರೆ.

ಡಿ.13 ರಂದು ಭಾಲ್ಕಿಯ ವಸತಿ ನಿಲಯ, ಶಾಲೆ, ಅಂಗನವಾಡಿ, ಪೊಲೀಸ್ ಠಾಣೆ ಮತ್ತು ಮಕ್ಕಳ ಪಾಲನಾ ಸಂಸ್ಥೆಗಳೀಗೆ ಭೇಟಿ ಮತ್ತು ಪರಿಶೀಲನೆ ನಡೆಸಲಿದ್ದಾರೆ ನಂತರ ಭಾಲ್ಕಿಯಲ್ಲಿ ವಾಸ್ತವ್ಯ ಹೂಡಲಿದ್ದಾರೆಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಾಲಕಾರ್ಮಿಕ ರಕ್ಷಣೆಯ ಕಾರ್ಯಾಚಾರಣೆ 02 ಕಿಶೋರ ಕಾರ್ಮಿಕ ಮಕ್ಕಳ ಪತ್ತೆ



ಮಲ್ಲಮ್ಮ ನುಡಿ ವಾರ್ತೆ ಬೀದರ:

ಕಾರ್ಮಿಕ ಆಯುಕ್ತರು ಬೆಂಗಳೂರು ಹಾಗೂ ಜಿಲ್ಲಾಧಿಕಾರಿಯವರ ಆದೇಶದಂತೆ ಮಂಗಳವಾರ ಭಾಲ್ಕಿ ತಹಶೀಲ್ದಾರ ಅಧ್ಯಕ್ಷತೆಯಲ್ಲಿ ಬಾಲ ಕಾರ್ಮಿಕ ಹಾಗೂ ಕಿಶೋರ್ ಕಾರ್ಮಿಕ ಪದ್ಧತಿ ನಿರ್ಮೂಲನೆ ಕುರಿತ 2 ನೇ ತ್ರೈಮಾಸಿಕ ಕಾರ್ಯ ಪಡೆ ಸಮಿತಿ ಸಭೆ ಮತ್ತು ಕಾರ್ಯಕಾರಿಣಿ ಸಮಿತಿ ಹಾಗೂ ಪುನರ್ವಸತಿ ಸಮಿತಿ ಸಭೆಗಳನ್ನು ಆಯೋಜಿಸಲಾಗಿತ್ತು. ಸಭೆಯ ನಂತರ ಹಠಾತ್ ದಾಳಿಯನ್ನು ಅಂಬೇಡ್ಕರ್ ವೃತ್ತದಿಂದ ಬಸ್ ನಿಲ್ದಾಣದವರೆಗೆ ಇರುವ ಅಂಗಡಿ, ಗ್ಯಾರೇಜ್, ಹೋಟೆಲ್ ,ಬೇಕರಿ ಮತ್ತು ಬಸ್ ನಿಲ್ದಾಣದ ಒಳಗಿರುವ ಅಂಗಡಿಗಳಿಗೆ ತಪಾಸಣೆ ಮಾಡಿ ಬಾಲಕಾರ್ಮಿಕರನ್ನು ಮತ್ತು ಕಿಶೋರ ಕಾರ್ಮಿಕರನ್ನು ನೇಮಿಸಿಕೊಳ್ಳಬಾರದೆಂದು ಅರಿವು ಮೂಡಿಸಲಾಯಿತು ಮತ್ತು ಕರ ಪತ್ರ ಹಂಚಲಾಯಿತು. ಸದರಿ ದಾಳಿಯಲ್ಲಿ 2 ಕಿಶೋರ ಕಾರ್ಮಿಕ ಕಂಡುಬಂದಿದ್ದು ಅವರ ಶಾಲಾ ದಾಖಲಾತಿಯನ್ನು ಪರಿಶೀಲಿಸಿ ಅಂಗಡಿ ಮಾಲೀಕರ ವಿರುದ್ಧ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಕಾರ್ಮಿಕ ಅಧಿಕಾರಿಗಳು ಹಆಗೂ ಜಿಲ್ಲಾ ಬಾಲಕಾರ್ಮಿಕ ನಿರ್ಮೂಲನಾ ಯೋಜನೆಯ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಭಾಲ್ಕಿ ಕಾರ್ಮಿಕ ನಿರೀಕ್ಷಕರು ಹಾಗೂ ಯೋಜನಾ ನಿರ್ದೇಶಕರು ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ಕಾರ್ಮಿಕ ಇಲಾಖೆ ಬೀದರ್, ಭಾಲ್ಕಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸರ್ವ ಶಿಕ್ಷಣ ಅಭಿಯಾನದ ಅಧಿಕಾರಿಗಳು ಸಾರ್ವಜನಿಕ ಶಿಕ್ಷಣ ಇಲಾಖೆ ಭಾಲ್ಕಿ, ಮುಖ್ಯಾಧಿಕಾರಿಗಳು ಪುರಸಭೆ ಭಾಲ್ಕಿ, ತಾಲೂಕು ಸಮಾಜ ಕಲ್ಯಾಣ ಅಧಿಕಾರಿಗಳು ಭಾಲ್ಕಿ, ವಿಸ್ತರಣಾಧಿಕಾರಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ತಾಲೂಕು ಆರೋಗ್ಯ ಅಧಿಕಾರಿ ಆರೋಗ್ಯ ಇಲಾಖೆ, ಪೊಲೀಸ್ ಠಾಣೆ ಅಧಿಕಾರಿ ವೃತ್ತ ನಿರೀಕ್ಷಕರು ಭಾಲ್ಕಿ, ಮಕ್ಕಳ ಸಹಾಯವಾಣಿ ಸಿಬ್ಬಂದಿ ಮಕ್ಕಳ ಕ್ಷೇತ್ರ ಕಾರ್ಯ ನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆ ಸೇವಕರು ಭಾಲ್ಕಿ ಸೇರಿದಂತೆ ಇತರರು ಭಾಗವಹಿಸಿದ್ದರು.

## ಸಂಚಾರಕ್ಕೆ ಅಡ್ಡಿ: ಅನಧಿಕೃತ ಅಂಗಡಿ, ವಾಹನ ತೆರವು



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ: ಪಟ್ಟಣದ ಹಳೆ ಬಸ್ ನಿಲ್ದಾಣದಿಂದ ನೆಹರು ವೃತ್ತದವರೆಗೆ ಸಂಚಾರಕ್ಕೆ ತೊಂದರೆಯಾಗುವಂತೆ ಅನಧಿಕೃತವಾಗಿ ನೆಲೆಸಿದ್ದ ಬೀದಿಬದಿ ತಳ್ಳುಗಾಡಿ ಅಂಗಡಿಗಳು ಹಾಗೂ ರಸ್ತೆಯಲ್ಲಿ ನಿಲ್ಲಿಸಿದ್ದ ದ್ವಿಚಕ್ರ ವಾಹನಗಳನ್ನು ಪೊಲೀಸರು ತೆರವುಗೊಳಿಸಿದರು. ಬಸವೇಶ್ವರ ವೃತ್ತ, ಗಾಂಧಿ ವೃತ್ತದಲ್ಲಿ ಗೋಬಿ ಮಂಚೂರಿ, ಪಾನಿಪುರಿ, ತರಕಾರಿ, ಎಲೆ ವ್ಯಾಪಾರಿಗಳು ಸೇರಿ ವಿವಿಧ ತಳ್ಳುಗಾಡಿ ಅಂಗಡಿಗಳು ಮತ್ತು ಬೇಕಾ ಬಿಟ್ಟಿಯಾಗಿ ಬೈಕ್, ಇನ್ನಿತರೆ ವಾಹನ ನಿಲುಗಡೆಯಿಂದ ಸಾರ್ವಜನಿಕ ಸಂಚಾರಕ್ಕೆ ಅಡ್ಡಿಯಾಗುತ್ತಿದೆ ಬುಧವಾರ ಪಿಎ ಬಸಲಿಂಗಪ್ಪ ಎಂ. ಗೋಧಿಹಾಳ ನೇತೃತ್ವದಲ್ಲಿ ಪೊಲೀಸ್ ಸಿಬ್ಬಂದಿ ವರ್ಗದವರು ಮತ್ತು ಪುರಸಭೆ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಅನಧಿಕೃತವಾಗಿ ರಸ್ತೆ ಮೇಲೆ ತಳ್ಳುಗಾಡಿ ಅಂಗಡಿಗಳು ತೆರವು ಕಾರ್ಯಾಚರಣೆ ಕೈಗೊಂಡಿದರು. ನೋಪಾರ್ಕಿಂಗ್ ಪ್ರದೇಶದಲ್ಲಿ ಮತ್ತೆ ಅಂಗಡಿ ಅಥವಾ ವಾಹನಗಳನ್ನು ನಿಲ್ಲಿಸಿದರೆ ದಂಡ ವಿಧಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ತೆರವು ಕಾರ್ಯಾಚರಣೆಯಲ್ಲಿ ಪುರಸಭೆ ಹಿರಿಯ ಆರೋಗ್ಯ ನಿರೀಕ್ಷಕ ರವಿಕುಮಾರ್ ಸ್ವಾಮಿ, ವೈಶಾಲಿ, ಎಎಗಳಾದ ಭೀಮರಾವ ರಾಠೋಡ, ಆಕಾಶ ರೆಡ್ಡಿ, ದಾಮಲ್ಲಾ, ವಿಜಯಕುಮಾರ್ ಬರ್ಮಾ, ಈಶ್ವರ, ಪ್ರೇಮ ರಾಠೋಡ, ಮೂಗಳಪ್ಪ ಸೇರಿದಂತೆ ಪುರಸಭೆ ಮತ್ತು ಪೊಲೀಸ್ ಇಲಾಖೆ ಸಿಬ್ಬಂದಿ ವರ್ಗದವರು ಇದ್ದರು.

## ಕನ್ನಡ ಇಂಗ್ಲಿಷ್ ಮಾಧ್ಯಮದಂತೆ ಉರ್ದು ಮಾಧ್ಯಮದ ವಿದ್ಯಾರ್ಥಿಗಳಿಗೂ ಎಸ್.ಎಸ್.ಎಲ್.ಸಿ ಮಾದರಿ ಪ್ರಶ್ನೆಪತ್ರಿಕೆ ಪ್ರಕಟಿಸುವಂತೆ ಐಟಾ ಮನವಿ

ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು:

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ (KSEAB) ತನ್ನ ಅಧಿಕೃತ ಜಾಲತಾಣದಲ್ಲಿ 2025-26ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಸಂಬಂಧಿಸಿದಂತೆ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮಗಳಿಗಾಗಿ ಮಾತ್ರ ಮಾದರಿ ಪ್ರಶ್ನೆಪತ್ರಿಕೆ, ಬ್ಲೂಪ್ರಿಂಟ್ ಪ್ರಕಟಿಸಿದ್ದು, ಉರ್ದು ಮಾಧ್ಯಮದ ಸಾವಿರಾರು ವಿದ್ಯಾರ್ಥಿಗಳು ಈ ಸೌಲಭ್ಯದಿಂದ ಸಂಪೂರ್ಣ ವಂಚಿತರಾಗಿರುವುದನ್ನು ಆಲ್ ಇಂಡಿಯಾ ಐಡಿಯಲ್ ಟೀಚರ್ಸ್ ಅಸೋಸಿಯೇಶನ್ (ರಿ.) AIITA ಕರ್ನಾಟಕ ರಾಜ್ಯ ಶಾಖೆ ಗಂಭೀರವಾಗಿ ಗಮನಿಸಿದೆ. AIITA ಕರ್ನಾಟಕದ ಅಧ್ಯಕ್ಷ ಮುಹಮ್ಮದ್ ರಝಾ ಮಾನ್ವಿ ಅವರು ನಿರ್ದೇಶಕರಿಗೆ ಸಲ್ಲಿಸಿದ ಮನವಿಯಲ್ಲಿ, "ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದ ವಿದ್ಯಾರ್ಥಿಗಳಿಗೆ ಲಭ್ಯವಾಗುತ್ತಿರುವ ಶೈಕ್ಷಣಿಕ ನೆರವು ಉರ್ದು ಮಾಧ್ಯಮಕ್ಕೆ ಲಭ್ಯವಾಗದೇ ಇರುವುದು ಶೈಕ್ಷಣಿಕ ಸಮಾನತೆಯ ಮೇಲೆ ಗಂಭೀರ ಪ್ರಭಾವ ಬೀರುತ್ತಿದೆ. ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಅನ್ಯಾಯಕ್ಕೆ ಒಳಗಾಗುತ್ತಿದ್ದಾರೆ" ಎಂದು ತಿಳಿಸಿದ್ದಾರೆ

ಉರ್ದು ಮಾಧ್ಯಮದಲ್ಲಿ ಆಡಳಿತಾತ್ಮಕ ನಿರ್ಲಕ್ಷ್ಯ ಕಂಡುಬರುತ್ತಿರುವುದರಿಂದ ವಿದ್ಯಾರ್ಥಿಗಳು ಹಾಗೂ ಪಾಲಕರಲ್ಲಿ ಆತಂಕ ಮತ್ತು ಅಸಮಾಧಾನ ವ್ಯಕ್ತವಾಗುತ್ತಿದೆ. ರಾಜ್ಯದಲ್ಲಿ ಪ್ರತಿ ವರ್ಷ ಗಣನೀಯ ಸಂಖ್ಯೆಯಲ್ಲಿ ಉರ್ದು ಮಾಧ್ಯಮದ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾಗುತ್ತಿದ್ದು, ಸಮಾನ ಕಲಿಕಾ ಸಂಪನ್ಮೂಲಗಳ ಕೊರತೆಯಿಂದ ಇವರ ಸಿದ್ಧತೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ ಎಂದು ಆಲ್ ಇಂಡಿಯಾ ಐಡಿಯಲ್ ಟೀಚರ್ಸ್ ಅಸೋಸಿಯೇಶನ್ ಕರ್ನಾಟಕ ರಾಜ್ಯಾಧ್ಯಕ್ಷ ಮುಹಮ್ಮದ್ ರಝಾ ಮಾನ್ವಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. AIITA ಕರ್ನಾಟಕ ಎಸ್.ಎಸ್.ಎಲ್.ಸಿ. ಪರೀಕ್ಷಾ ಮಂಡಳಿಗೆ ಸಲ್ಲಿಸಿರುವ ಮುಖ್ಯ ಬೇಡಿಕೆಗಳು:

ಉರ್ದು ಮಾಧ್ಯಮದ ವಿದ್ಯಾರ್ಥಿಗಳಿಗೆ ತಕ್ಷಣ ಮಾದರಿ ಪ್ರಶ್ನೆಪತ್ರಿಕೆ, ಬ್ಲೂಪ್ರಿಂಟ್, ಪ್ರಶ್ನೆಕೋಶ (Question Bank) ಇವುಗಳನ್ನು ಏಖಇಂಃ ಜಾಲತಾಣದಲ್ಲಿ ಪ್ರಕಟಿಸುವುದು.

ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದಂತೆ ಉರ್ದು ಮಾಧ್ಯಮಕ್ಕೂ ಸಮಾನ ಶೈಕ್ಷಣಿಕ ಸಂಪನ್ಮೂಲ ಲಭ್ಯವಾಗುವಂತೆ ಮಾರ್ಗಸೂಚಿಗಳನ್ನು ಜಾರಿಗೊಳಿಸುವುದು.

ಈ ಕ್ರಮವನ್ನು ತುರ್ತಾಗಿ ಕೈಗೊಂಡು ರಾಜ್ಯದ ಉರ್ದು ಮಾಧ್ಯಮದ ವಿದ್ಯಾರ್ಥಿಗಳಿಗೆ ಸಮಾನ ಅವಕಾಶ ಕಲ್ಪಿಸುವುದು.

AIITA ಕರ್ನಾಟಕ, ರಾಜ್ಯ ಶಿಕ್ಷಣ ಇಲಾಖೆ ಎಲ್ಲಾ ಭಾಷಾ ಮಾಧ್ಯಮಗಳಿಗೂ ಸಮಾನ ಶಿಕ್ಷಣ ಮತ್ತು ಸಮಾನ ಅವಕಾಶ ನೀಡಬೇಕೆಂದು ಸರ್ಕಾರವನ್ನು ಆಗ್ರಹಿಸಿದೆ.

**ಅಬ್ದುಲ್ ಕದೀರ್ ಬೇಗ್**
**ಮಾಧ್ಯಮ ಕಾರ್ಯದರ್ಶಿ ಐಟಾ ಕರ್ನಾಟಕ**
contact: **9886455416**

# ಉಪ್ಪಾರ ಅಭಿವೃದ್ಧಿ ನಿಗಮಕ್ಕೆ ಅನುದಾನ ಬಿಡುಗಡೆ ಮಾಡುವಂತೆ ಆಗ್ರಹ : ಅಮರೇಶ ಆದೋನಿ



ಮಲ್ಲಮ್ಮ ನುಡಿ ವಾರ್ತೆ ರಾಯಚೂರು:
ಹಿಂದುಳಿದ ವರ್ಗಗಳಲ್ಲಿ ಬರುವ ಉಪ್ಪಾರ ಅಭಿವೃದ್ಧಿ ನಿಗಮ ಮಂಡಳಿಗೆ 25 ಕೋಟಿ ಅನುದಾನ ಬಿಡುಗಡೆ ಮಾಡುವಂತೆ ಹಾಗೂ ನಿಗಮ ಮಂಡಳಿಗೆ ಪದಾಧಿಕಾರಿಗಳ ನೇಮಕ ಮಾಡುವಂತೆ ಶ್ರೀ ಮಹರ್ಷಿ ಭಗೀರಥ ಟ್ರಸ್ಟ್ ನ ಅಧ್ಯಕ್ಷರಾದ ಅಮರೇಶ ಆದೋನಿಯವರು ಅವರು ಹೇಳಿದರು.

ಅವರಿಂದುನಗರದಸುದ್ದಿಗಾರರೊಂದಿಗೆಮಾತನಾಡಿ, ಉಪ್ಪಾರ ಸಮಾಜದಲ್ಲಿ ಪುಟ್ಟರಂಗಶೆಟ್ಟಿಯವರನ್ನು ಹೊರತು ಪಡಿಸಿ ಯಾವುದೇ ಒಬ್ಬರು ಮುಖ್ಯ ಸ್ಥಾನದಲ್ಲಿ ಇಲ್ಲ ಈಗಾಗಿ ನಿಗಮ ಮಂಡಳಿಗೆ ಸಮಾಜದ ಮುಖಂಡರನ್ನು ನೇಮಿಸಬೇಕೆಂದು ಕೋರಿದರು. ಅಲ್ಲದೇ ರಾಯಚೂರಿನ ಉಪ್ಪಾರ ಸಮಾಜಕ್ಕೆ ಜಮೀನು ಮಂಜೂರು ಮಾಡಲು ಈಗಾಗಲೇ ಅರ್ಜಿ ಸಲ್ಲಿಸಿದ್ದು ಅದನ್ನು ಮಂಜೂರು ಮಾಡುವಂತೆ ಅಲ್ಲದೇ ಕಾಂಗ್ರೆಸ್ ಪಕ್ಷಕ್ಕಾಗಿ ಜೀವನಪೂರ್ತಿ ದುಡಿದ ನಿಷ್ಠಾವಂತ ಕಾರ್ಯಕರ್ತರನ್ನು ಗುರುತಿಸಿ ಸ್ಥಾನಿಕ ಸಂಸ್ಥೆಗಳಲ್ಲಿ ನಾಮನಿರ್ದೇಶನ ಮಾಡುವ ಮೂಲಕ ಸಮಾಜಕ್ಕೆ ನ್ಯಾಯ ಒದಗಿಸಬೇಕೆಂದು ಕೋರಿದರು.

ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷರಾದ ಆದಿರಾಜ ಆದೋನಿ, ಪ್ರಧಾನ ಕಾರ್ಯದರ್ಶಿಗಳಾದ ಎಂ.ನಾರಾಯಣ ಗಟ್ಟು ವೆಂಕಟೇಶ್ , ಎಂ.ಸುಭಾಷಚಂದ್ರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಜಮೀನಿನಲ್ಲಿ ಅತಿಕ್ರಮ ಪ್ರವೇಶ : ಬೆಳೆ ಕಳವು ಜೀವ ಬೆದರಿಕೆ : ವಿಜಯ ರಾಣಿ



ಮಲ್ಲಮ್ಮನುಡಿವಾರ್ತೆರಾಯಚೂರು
: ದೇವದುರ್ಗ ತಾಲೂಕಿನ ಜಾಗಟಗಲ್ ಸೀಮಾದಲ್ಲಿರುವ ಒಟ್ಟು 15 ಎಕರೆ 37 ಗುಂಟೆಗಳ ಕೃಷಿಭೂಮಿಯಲ್ಲಿ ಸಿರವಾರ ತಾಲೂಕಿನ ಮಾಡಗಿರಿ ಕ್ಯಾಂಪಿನ ನಿವಾಸಿ ರಾಜಗೋಪಾಲರಾವ್ ಹಾಗೂ ಅವರ ಸಂಬಂಧಿಕರಾದ ಅಂಧ್ರಪ್ರದೇಶದ ಗುಡಿವಾಡ ತಾಲೂಕಿನ ಸೀರಿವೇಲಪುರದ ಮಾಟೂರು ಶೇಶಾದ್ರಿ ಅಕ್ರಮ ಪ್ರವೇಶ, ಬೆಳ ಕಳವು ಮಾಡಿ ಜಮೀನು ಮಾಲೀಕರಾದ ಬಸ್ಸಮ್ಮ ಗಂಡ ಬಸವರಾಜ ಅವರಿಗೆ ಜೀವ ಬೆದರಿಕೆಯನ್ನು ಹಾಕಿದ್ದಾರೆಂದು ದಲಿತ ಸೇನೆ ಅಧ್ಯಕ್ಷೆ ವಿಜಯ ರಾಣಿ ಆರೋಪಿಸಿದರು.

ನಗರದ ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿಯಲ್ಲಿಮಾತನಾಡಿ,ದೂರು ಪ್ರಕಾರ, ಸರ್ವೆ ನಂ. 84/2, 84/3 ಹಾಗೂ 84/2 ರ 7 ಎಕರೆ ಸೇರಿ ಅನೇಕ ಭಾಗಗಳನ್ನು ರಾಜಗೋಪಾಲರಾವ್ ಮತ್ತು ಶೇಶಾದ್ರಿ ಕಾನೂನುಬದ್ಧವಾಗಿ ಖರೀದಿ ಮಾಡಿಕೊಂಡಿದ್ದು, ಕಳೆದ ವರ್ಷ ದೇವದುರ್ಗ ಉಪನೊಂದಣಿ ಕಚೇರಿಯಲ್ಲಿ ಅಗ್ರಿಮೆಂಟ್ ನೋಂದಾಯಿಸಿದ್ದರೂ, ಮ್ಯೂಟೇಷನ್ ಸಮಯದಲ್ಲಿ ರಾಚಪ್ಪ ಎಂಬಾತನು ಅರಕೇರಾ ನಾಡ ಕಚೇರಿಯಲ್ಲಿ ತಕರಾರು ದಾಖಲಿಸಿದ್ದರಿಂದ ದಾಖಲೆಗಳು ತಾತ್ಕಾಲಿಕವಾಗಿ ನಿಲ್ಲಿಸಲ್ಪಟ್ಟಿವೆ. ಬೀಳು ಬಿದ್ದಿದ್ದ ಜಮೀನನ್ನು ಸ್ವಚ್ಛಗೊಳಿಸಿ ಈ ವರ್ಷ ಭತ್ತ ಬೆಳೆದಿದ್ದರು.ಆದರೆ ದಿನಾಂಕ 22–11–2025 ರಂದು ರಾಚಪ್ಪ ಎಂಬಾತನು ರಾಜಗೋಪಾಲರಾವ್ ಅವರ ಮನೆಗೆ ಬಂದು "ಇಂದಿನ ಸಾಗುವಳಿ ಕಾಲಂನಲ್ಲಿ ಹಿಂದೆ ನನ್ನ ಹೆಸರು ಇತ್ತು, ಜಮೀನು ನನಗೆ ಸೇರಬೇಕು, ಈ ಹೋಲಿನ ಭತ್ತವನ್ನು ನಾವೇ ಕೊಯ್ಯುತ್ತೇವೆ" ಎಂದು ಬೆದರಿಕೆ ಹಾಕಿದ್ದಾನೆ.ಮುಂದಾಗಿ, ದಿನಾಂಕ 30–11–2025 ರಂದು ರಾತ್ರಿ 10.30ಕ್ಕೆ ರಾಚಪ್ಪ, ಕಾಸಲಯ್ಯ, ಶಿವಪ್ಪ, ಸಣ್ಣ ಶಿವಪ್ಪ, ಮೂಕಪ್ಪ ಹಾಗೂ ಮಲ್ಲಪ್ಪ ಸೇರಿ ಆರು ಮಂದಿ ಭತ್ತ ಕೊಯ್ಯುವ ಯಂತ್ರದೊಂದಿಗೆ ಬಂದು, ಜಮೀನಿನಲ್ಲಿ ಬೆಳೆದಿದ್ದ ಭತ್ತವನ್ನು ಅಕ್ರಮವಾಗಿ ಕಟ್ ಮಾಡಿಕೊಂಡು ಹೋಗಿರುವುದು ಲೀಜುದಾರರಾದ ಶ್ರೀನಿವಾಸ ಮತ್ತು ಮೌನೇಶ ಇವರ ಹೇಳಿಕೆಯ ಮೂಲಕ ದೃಢಪಟ್ಟಿದೆ. ನಂತರ ಸ್ಥಳಕ್ಕೆ ತೆರಳಿದ ಮಾಲೀಕರು ಜಮೀನಿನಲ್ಲಿದ್ದ ಬೆಳೆ ಪೂರ್ಣವಾಗಿ ಕಳವಾಗಿರುವುದನ್ನು ಕಂಡಿದ್ದಾರೆ. ವಿಚಾರಿಸಲು ಹೋದಾಗ "ನಾವು ನಾಯಕ ಜನಾಂಗದವರು: ನಿಮ್ಮ ಮೇಲೆ ಆಟ್ರೋಸಿಟಿ ಕೇಸ್ ಹಾಕುತ್ತೇವೆ" ಎಂಬ ಜೀವ ಬೆದರಿಕೆ ಹಾಕಲಾಗಿದೆ.ಒಟ್ಟು ರೂ. 4,80,000 ಮೌಲ್ಯದ ಬೆಳೆ ನಷ್ಟವಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ದಲಿತ ಸೇನೆ ರಾಜ್ಯ ಸಂಘಟನಾ ಕಾರ್ಯದರ್ಶಿ ಡಾ.ಜಾವೀದ್ ಖಿಸನ್ ಮಾತನಾಡಿ ಈ ಘಟಕ ಸಾಮಾನ್ಯ ಜಮೀನು ವಿವಾದವಲ್ಲ ಇದು ಕಾನೂನು ಬಾಹಿರ ಅತಿಕ್ರಮ ಪ್ರದೇಶ, ಕೃಷಿ ಉತ್ಪಾದನೆಯ ನೇರ ಕಳವು ಮತ್ತು ಸಮುದಾಯ ಹೆಸರಿನಲ್ಲಿ ಬೆದರಿಕೆ–ಎಲ್ಲಾ ಒಂದೇ ಪ್ರಕರಣದಲ್ಲಿ ಕಂಡುಬರುತ್ತವೆ. ಕೃಷಿಕನ ರಕ್ತ ಬೆವರಿನ ಬೆಳೆ ಕಳವು ಮಾಡುವುದು ಗಂಭೀರ ಅಪರಾಧ ದೂರು ನೀಡಿದರು ಪೋಲೀಸಗ ಇಲಾಖೆ ವಿಳಂಭ ಧೋರಣೆ ಅನುಸರಿಸುತ್ತಿರುವುದು ಮತ್ತಷ್ಟು ಆತಂಕಕಾರಿ ವಿಷುವಾಗಿದೆ ಎಂದರು. ತಕ್ಷಣ ಜಮೀನನಲ್ಲಿ ಅಕ್ರಮ ಪ್ರವೇಶ, ಬೆಳ ಕಳವು ಮಾಡಿ ಜಮೀನು ಮಾಲೀಕರಿಗೆ ಜೀವ ಬೆದರಿಕೆ ಹಾಕಿದವರ ವಿರುದ್ಧ ಕಾನೂನು ಕ್ರಮ ಕೈಗೊಂಡು ಮಾಲೀಕರಿಗೆ ಜಮೀನನಲ್ಲಿ ಕಟವು ಮಾಡಲು ಅನುಕೂಲ ಕಲ್ಪಿಸಬೇಕೆಂದು ಒತ್ತಾಯಿಸಿದರು.ಕಾನೂನು ಎಲ್ಲರಿಗೂ ಸಮಾನ ಪೀಡಿತರಿಗೆ ನ್ಯಾಯ ದೊರೆಯುವವರೆಗೆ ದಲಿತ ಸೇನೆ ಮತ್ತು ಸಹಭಾಗಿತ್ಯ ಸಂಘಟನೆಗಳು ಹೋರಾಟ ಮುದುವರಿಸುತ್ತವೆ. ಇಂತಹ ಕೃತ್ಯಗಳನ್ನು ಸಮಾಜದಲ್ಲಿ ಮನ್ನಿಸಲು ಅವಕಾಶವಿಲ್ಲವೆಂದರು. ಈ ಸಂದರ್ಭದಲ್ಲಿ ದಲಿತ ಸೇನೆಯ ಜಿಲ್ಲಾಧ್ಯಕ್ಷ ಮಾರುತಿ ಚಿಕ್ಕಸೂಗೂರು, ಕ್ರಷ್ಣಮಾರ್ಚಲ್, ಸಾಜೀದ್ ಹುಸೇನ್ ರೈತ ಮುಖಂಡರು ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು, ರೈತ ಮುಖಂಡರು, ಪ್ರಗತಿಪರ ಸಾಮಾಜಿಕ ಹೋರಾಟಗಾರರು ಉಪಸ್ಥಿತರಿದಗದರು.

# ವೈಭವದಿಂದ ಜರುಗಿದ ಶ್ರೀಗುತ್ತಿ ಬಸವೇಶ್ವರ ರಥೋತ್ಸವ





ಮಲ್ಲಮ್ಮನುಡಿವಾರ್ತೆಚಿಟಗುಪ್ಪ:
ತಾಲೂಕಿನ ನಿರ್ಣಾ ಗ್ರಾಮದ ಹೊರವಲಯದಲ್ಲಿರುವ ಶ್ರೀ ಗುತ್ತಿ ಬಸವೇಶ್ವರ ದೇವರ ಜಾತ್ರಾ ಮಹೋತ್ಸವ ಪ್ರಯುಕ್ತ ಮಂಗಳವಾರ ರಾತ್ರಿ 12 ಘಂಟೆಗೆ ಅದ್ದೂರಿಯಾಗಿ ರಥೋತ್ಸವ ಜರುಗಿತ್ತು. ದೇವಸ್ಥಾನ ಸಮಿತಿ ಅಧ್ಯಕ್ಷ ರಾಜಕುಮಾರ ತೆಳಮನಿ, ಲಕ್ಷ್ಮೀಕಾಂತ ಪರಿಟ್, ಚಂದ್ರಶೇಖರ ಪಾಟೀಲ್ ಬನ್ನಳ್ಳಿ ಮಾತನಾಡಿ, ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಸೊಂತ ನರನಾಳದ ಶ್ರೀ ಶಿವಕುಮಾರ ಶಿವಾಚಾರ್ಯರ ಸಾನಿಧ್ಯದಲ್ಲಿ ಪಲ್ಲಕ್ಕಿ ಮತ್ತು ರಥೋತ್ಸವ ವೈಭವದಿಂದ ಜರುಗಲಿದೆ. ಶ್ರೀಗುತ್ತಿ ಬಸವೇಶ್ವರ ದೇವಸ್ಥಾನ ಅತ್ಯಂತ ಪುರಾತನವಾಗಿದ್ದು, ಬಸವಕಲ್ಯಾಣದಲ್ಲಿ ಕಲ್ಯಾಣ ಕ್ರಾಂತಿಯಾದ ನಂತರ ಎಲ್ಲ ಶರಣರು ಈ ಸ್ಥಳಕ್ಕೆ ಬಂದು ಸಮಾಲೋಚನೆ ನಡೆಸಿ ವಿವಿಧ ಕಡೆ ಹೋಗುವ ನಿರ್ಣಯ ಕೈಗೊಂಡಿದ್ದರು.

ಹೀಗಾಗಿ ಶರಣರು ಇಲ್ಲಿ ಕೈಗೊಂಡ ನಿರ್ಣಯದಿಂದ ನಿರ್ಣಾ ಗ್ರಾಮ ಎಂಬ ಹೆಸರು ಬಂದಿದೆ. ಜಾತ್ರಾ ಮಹೋತ್ಸವಕ್ಕೆ ಕರ್ನಾಟಕ ಸೇರಿದಂತೆ ತೆಲಂಗಾಣ, ಆಂಧ್ರಪ್ರದೇಶ, ಮಹಾರಾಷ್ಟದಿಂದ ಸಾವಿರಾರು ಭಕ್ತರು ಆಗಮಿಸಿ, ದೇವರಲ್ಲಿ ತಮ್ಮ ಕಷ್ಟಗಳು ನಿವಾರಿಸುವಂತೆ ಹರಕೆ ಹೊತ್ತಿ ಹೋಗುತ್ತಾರೆ, ಕಷ್ಟಗಳು ನಿವಾರಣೆ ಆದ ಮೇಲೆ ದೇವಸ್ಥಾನಕ್ಕೆ ಬಂದು ಹರಕೆ ತೀರಿಸುತ್ತಾರೆ ಎಂದರು. ಡಿಸೆಂಬರ್ 10 ರಂದು ಬೆಳಗ್ಗೆ 8ಕ್ಕೆ ಜಂಗಿ ಕುಸ್ತಿ, 12ಕ್ಕೆ ಸೊಂತದ ಶ್ರೀ ಬಾಲಯೋಗಿ ಅಭಿನವ ಶರಣ ಶಂಕರಲಿಂಗ ಮಹಾರಾಜರ ಆಶೀರ್ವಚನ, ಮಧ್ಯಾಹ್ನ 4ಕ್ಕೆ ಪಶುಗಳ ಪ್ರದರ್ಶನ, ಸಂಜೆ 6ಕ್ಕೆ ಭಜನೆ, ಕಲಗಿತುರಾಯಿ ನಡೆಯಲಿದೆ. 11ರಂದು ಬೆಳಗ್ಗೆ 6ಕ್ಕೆ ರುದ್ರಾಭಿಷೇಕ ಪೂಜೆ ಮತ್ತು ಸಂಜೆ ದರ್ಬಾರ್ ಕಲಗಿ ತುರಾಯಿ ಜರುಗುವುದು.

11ರಂದು ಬೆಳಗ್ಗೆಯಿಂದ ಓಪನ್ ಟೂ ಆಲ್ ಅಂತಾರಾಜ್ಯ ವಾಲಿಬಾಲ್ ಪಂದ್ಯಾವಳಿ ಆಯೋಜಿಸಲಾಗಿದೆ. ಪ್ರಥಮ ಬಹುಮಾನ 25,000 ರೂ., ದ್ವಿತೀಯ ಬಹುಮಾನ 15,000ರೂ., ತೃತೀಯ ಬಹುಮಾನ 11,000 ರೂ ನೀಡಲಾಗುತ್ತಿದ್ದು ಈ ಮೂರು ಬಹಮಾನ ನ್ಯಾಯವಾದಿ ರವಿಕಾಂತ ತೆಲವಾಡೆ ಹಾಗೂ ಟ್ರೋಫಿ ಅಶೋಕರೆಡ್ಡಿ ಲಚ್ಚ–ಣಗಾರ ವಿತರಿಸಲಿದ್ದಾರೆ. ಸಂಜೆ 6ಕ್ಕೆ ದೇವಸ್ಥಾನದಿಂದ ಮಠದವರೆಗೆ ದೇವರ ಪಲ್ಲಕ್ಕಿ ಉತ್ಸವ ನಡೆಯುತ್ತದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸಮಿತಿ ಉಪಾಧ್ಯಕ್ಷ ಅನೀಲರೆಡ್ಡಿ ಲಚನಗಾರ, ಶೈಲೇಂದ್ರ ಪೊಲೀಸ್ ಪಾಟೀಲ್, ವೈಜಿನಾಥ, ಸಿದ್ದಣ್ಣ ಮೈಲುರ್, ಶರಣು ಪೊಲೀಸ್ ಪಾಟೀಲ್, ಬಸವರಾಜ ಭದ್ರಪ್ಪನೂರ್, ಲಕ್ಷ್ಮಣರಾವ ಸಾತನೂರ್, ಡಾ. ರವಿ ಸ್ವಾಮಿ ನಿರ್ಣಾ, ಗುರು ಸ್ವಾಮಿ ಮಠ, ಸುಪ್ರೀತ ನಾಗವಾರ, ಸುಬಣ್ಣ ಧರಗೊಂಡ, ನಾಗಣ್ಣ, ಓಂಕಾರ ಮಠಪತಿ, ಬಸಯ್ಯ ಪೂಜಾರಿ, ರೇವಣ್ಣಯ್ಯಾ ಸ್ವಾಮಿ, ಭೀಮರಾವ ಬೇಲೂರ್, ವೀರಬಸಪ್ಪ ಮಲ್ಲಪ್ಪನೋರ್ ರಮೇಶ ಧೂಳ, ಭರತ್ ರೆಡ್ಡಿ ಚಿಟ್ನಳ್ಳಿ, ಅಶೋಕ ಕಾಗೆ ಸೇರಿದಂತೆ ಅಪಾರ ಭಕ್ತಾಧಿಗಳು ಇದ್ದರು.

# ಶ್ರೀನಿವಾಸ ರಾಮನುಜನ್ ಗಣಿತ ಉದ್ಯಾನ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಲಿ– ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ



ಮಲ್ಲಮ್ಮ ನುಡಿ ವಾರ್ತೆ
ಬೀದರ: 3900 ಕ್ಕೂ ಹೆಚ್ಚು ಗಣಿತ ಸೂತ್ರಗಳು ರಚಿಸುವ ಮೂಲಕ ಶ್ರೀನಿವಾಸ್ ರಾಮಾನುಜನ್ ಅವರು ಜಾಗತಿಕ ಗಣಿತ ಲೋಕಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಸರಳ ಪದ್ಧತಿಯ ಮೂಲಕ ಲೆಕ್ಕ ಮಾಡುವುದನ್ನು ಕಲಿಸಿದ ರಾಮಾನುಜನ್ ಗಣಿತವನ್ನು ಸರಳೀಕರಿಸದರು. ಅವರ ಹೆಸರಿನ ಮೇಲೆ ನಿರ್ಮಿಸಲಾದ ಈ ಗಣಿತ ಉದ್ಯಾನ ವಿದ್ಯಾರ್ಥಿಗಳಿಗೆ ದೊಡ್ಡ ಪ್ರೇರಣೆಯಾಗಲಿ ಎಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ನುಡಿದರು.

ಅವರು ಬುಧವಾರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಬಗದಲ್‌ನಲ್ಲಿ ಶ್ರೀನಿವಾಸ ರಾಮಾನುಜನ್ ಗಣಿತ ಉದ್ಯಾನ ಉದ್ಘಾಟಿಸಿ ಅವರು ಮಾತನಾಡಿದರು. ಗಣಿತ ಕ್ಲೀಷ್ಟಕರವಲ್ಲ ಬದಲಾಗಿ ಅತಿ ಸರಳ ಎನ್ನುವುದನ್ನು ವಿನ್ಯಾಸಗಳ ಮೂಲಕ ಈ ಗಣಿತ ಉದ್ಯಾನ ಕಲಿಸಿಕೊಡುತ್ತದೆ.

ಇದನ್ನು ಅರ್ಥೈಸಿಕೊಂಡು ಮಕ್ಕಳು ಗಣಿತ ಮತ್ತು ಇತರೆ ವಿಷಯಗಳಲ್ಲಿ ಅತಿ ಹೆಚ್ಚು ಅಂಕ ಪಡೆದು ಕೀರ್ತಿ ತರಬೇಕು. ಬಗದಲ್ ಮೊರಾರ್ಜಿ ದೇಸಾಯಿ ವಸತಿ ಶಾಲೆ ನಿರಂತರ ಶತ ಪ್ರತಿಶತ ಫಲಿತಾಂಶ ನೀಡುತ್ತಿರುವುದು ಶ್ಲಾಘನೀಯ. ಈ ವರ್ಷ 10 ರಲ್ಲಿ 3 ರ್‍ಯಾಂಕ್ ನೀಡಲು ಪ್ರಯತ್ನಿಸಬೇಕು ಎಂದು ಹೇಳಿದರು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಸುನೀತಾ ಪಟವಾಡಿ ಮಾತನಾಡಿ, ಗಣಿತ ಅತ್ಯಂತ ಕಠಿಣ ಅನ್ನುವ ತಪ್ಪು ಕಲ್ಪನೆ ಜನಜನಿತವಾಗಿದೆ. ಗಣಿತವನ್ನು ಪ್ರೀತಿಸದರೆ ಅದರಷ್ಟು ಸರಳ ವಿಷಯ ಮತ್ತೊಂದಿಲ್ಲ. ಜೀವನದ ಸಂಕೀರ್ಣ ಸಮಸ್ಯೆ ಬಿಡಿಸುವ ಮನೋಬಲ ತುಂಬುವ ಗಣಿತವನ್ನು ಆಸಕ್ತಿಯಿಂದ ಕಲಿಯಬೇಕೆನ್ನುವ

ಕಿವಿಮಾತು ಹೇಳಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ಪ್ರಾಚಾರ್ಯ ಚೆನ್ನಬಸವ ಹೇಡೆ ಗಣಿತ ಉದ್ಯಾನದ ಮೂಲಕ ಕಠಿಣ ಪರಿಕಲ್ಪನೆ ಸರಳೀಕರಣಗೊಳಿಸುವ ಕಾರ್ಯ ಮಾಡಲಾಗಿದೆ.

ಅಧ್ಯಯನದಲ್ಲಿ ಆಸಕ್ತಿ ಹೆಚ್ಚಿಸಲು ಇದು ಪೂರಕವಾಗಿದೆ. ಈ ಉದ್ಯಾನದ ಸದುಪಯೋಗ ಮಕ್ಕಳು ಪಡೆದು–ಕೊಂಡರೆ ಉದ್ಯಾನ ನಿರ್ಮಿಸಿದಕ್ಕೂ ಸಾರ್ಥಕವಾಗುತ್ತದೆಯೆಂದು ಹೇಳಿದರು. ಕಾರ್ಯಕ್ರಮದಲ್ಲಿ ವಸತಿ ಶಾಲೆಯಿಂದ ವರ್ಗವಣೆ ಹೊಂದಿದ ಗಣಿತ ಶಿಕ್ಷಕಿ ನಜಿಮಾ ಪರವಿನ್ ಹಾಗೂ ಉಪ ಪ್ರಾಂಶುಪಾಲರಾಗಿ ನಿಯುಕ್ತರಾದ ಗೌತಮ ಕುದರೆ ಅವರನ್ನು ಸನ್ಮಾನಿಸಲಾಯಿತು. ಹಾಗೂ ಉದ್ಯಾನ ಲೋಕಾರ್ಪಣೆ ಪ್ರಯುಕ್ತ ವಿದ್ಯಾರ್ಥಿಗಳು ತಯ್ಯಾರಿಸಿದ 25 ಗಣಿತ ಮಾದರಿಗಳ ಪ್ರದರ್ಶನ ಮತ್ತು ವಿವರಣೆ ನಡೆಸಿಕೊಡಲಾಯಿತು.

ಈ ಸಂದರ್ಭದಲ್ಲಿ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ಸಂಗೀತಾ ಬಿರಾದಾರ, ಕ್ರೈಸ್ ಜಿಲ್ಲಾ ಸಮನ್ವಯ ಅಧಿಕಾರಿ ಶರಣಪ್ಪ ಬಿರಾದಾರ ಪ್ರಾಂಶುಪಾಲ ಗೋವಿಂದ ತಾಮಗೋಳೆ, ವೀರಭದ್ರಪ್ಪ ಮಾಶೆಟ್ಟಿ, ವಿಜಯಕುಮಾರ ಅಕ್ಕಣ್ಣ, ಹಾವಪ್ಪ ಅಬ್ಬೆಂದೆ, ಪ್ರದೀಪ ನಿಡೋದೆ, ಸಿದ್ಧಲಿಂಗಯ್ಯ ಮಠಪತಿ, ಅಶೋಕ ರಾಠೋಡ, ಮಾಣಿಕ ಸಾಗರ, ಮುದಾಸ್ಸಿರ ಅಲಿ, ಶ್ರೀದೇವಿ ಸಾಲಿಮಠ, ಸವಿತಾ ಮಾಶೆಟ್ಟಿ, ವೈಭವಿ ಮಾಣೀಕ, ಶ್ರಾವಂತಿ ಅಂಬೆಸಂಗೆ, ಶಿವರಾಜ ನಳಗೀರೆ ವಸಂತ ರಾಠೋಡ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಮಹಿಳಾ ಫಲಾನುಭವಿಗಳಿಗೆ 12 ದಿನಗಳ

## ಉದ್ಯಮಶೀಲತಾ ತರಬೇತಿ ಹೆಸರು ನೋಂದಣಿಗೆ ಮನವಿ

ಮಲ್ಲಮ್ಮನುಡಿವಾರ್ತೆಬೀದರ್: ಡಿ 10: ಕೌಶಲಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ, ಕರ್ನಾಟಕ ಸರ್ಕಾರ ಅವರ ಪ್ರಾಯೋಜಕತ್ವದಲ್ಲಿ ಕರ್ನಾಟಕ ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರ (ಸಿಡಾಕ್), ಬೀದರ್ ಇವರ ವತಿಯಿಂದ ಜಿಲ್ಲೆಯ ಯುವನಿಧಿ ಮಹಿಳಾ ಫಲಾನುಭವಿಗಳಿಗಾಗಿ 12 ದಿನಗಳ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಈ ತರಬೇತಿ ಕಾರ್ಯಕ್ರಮದಲ್ಲಿ ಸ್ವಂತ ಉದ್ಯಮ ಆರಂಭಿಸಲು ಬೇಕಾದ ಕ್ರಮಗಳು, ಸರ್ಕಾರದ ಸ್ವಂತ ಉದ್ಯೋಗ ಯೋಜನೆಗಳ ಮಾಹಿತಿ, ಬ್ಯಾಂಕ್ ವ್ಯವಹಾರಗಳ ವಿಧಾನ, ಸಾಲ ಸೌಲಭ್ಯ ಪಡೆಯುವ ಪ್ರಕ್ರಿಯೆ, ಯೋಜನಾ ವರದಿ ತಯಾರಿಸುವ ವಿಧಾನ, ಮಾರುಕಟ್ಟೆ ಸಮೀಕ್ಷೆ, ಜಿಎಸ್‌ಟಿ ನೋಂದಣಿ ಹಾಗೂ ತೆರಿಗೆ ಸಂಬಂಧಿತ ಮಾಹಿತಿಯನ್ನು ತಜ್ಞರಿಂದ ನೀಡಲಾಗುವುದು. ವಿಶೇಷವಾಗಿ ಯುವನಿಧಿ ಮಹಿಳಾ ಫಲಾನುಭವಿಗಳಿಗಾಗಿ ಬ್ಯೂಟಿ ಪಾರ್ಲರ್, ಫ್ಯಾಶನ್ ಡಿಸೈನಿಂಗ್ ಸೇರಿದಂತೆ ವಿವಿಧ ಟೆಕ್ನಿಕಲ್ ಇನ್ಪುಟ್ಸ್ ಕುರಿತು ತರಬೇತಿ ನೀಡಲಾಗುತ್ತದೆ. ಪದವಿ, ಡಿಪ್ಲೋಮಾ ಹಾಗೂ ಸ್ನಾತಕೋತ್ತರ ಪದವೀಧರ ಅಭ್ಯರ್ಥಿಗಳು ಈ ತರಬೇತಿಯಲ್ಲಿ ಭಾಗವಹಿಸಬಹುದು. ಆಸಕ್ತರು ಡಿ.15ರೊಳಗೆ ಸಿಡಾಕ್, ಬೀದರ್ ಕಚೇರಿಗೆ ಭೇಟಿ ನೀಡಿ ಅಥವಾ ಮೊಬೈಲ್ ಸಂಖ್ಯೆ 7847846784 ಗೆ ಕರೆ ಅಥವಾ ಸಂದೇಶದ ಮೂಲಕ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ ಎಂದು ಸಿಡಾಕ್‌ನ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

# ಮಾಹಿತಿ ಹಕ್ಕು 11 ವರ್ಷದ ಬಳಿಕ ವಿಚಾರಣೆ ಪತ್ರ: ಅಳ್ಳಪ್ಪ



ಮಲ್ಲಮ್ಮ ನುಡಿ ವಾರ್ತೆ ರಾಯಚೂರು:
ಕರ್ನಾಟಕ ಮಾಹಿತಿ ಆಯೋಗಕ್ಕೆ ಅರ್ಜಿ ಸಲ್ಲಿಸಿ 11 ವರ್ಷಗಳ ನಂತರ ಕಲ್ಬುರ್ಗಿ ಪೀಠದಿಂದ ವಿಚಾರಣೆಗೆ ಕರೆಯಲಾಗಿದೆ ಎಂದು ಸಾಮಾಜಿಕ ಕಾರ್ಯಕರ್ತ ಅಳ್ಳಪ್ಪ ಅವರು ಹೇಳಿದರು.

ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡುತ್ತಾ, ದೇವದುರ್ಗ ಪುರಸಭೆ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಜಮೀನುಗಳ ಮಾಹಿತಿ ನೀಡುವಂತೆ 2015ಜನವರಿ 23 ರಂದು ಮಾಹಿತಿ ಹಕ್ಕು ಮೂಲಕ ಅರ್ಜಿ ಸಲ್ಲಿಸಲಾಗಿತ್ತು. ಆದರೆ ಬರೋಬ್ಬರಿ 11 ವರ್ಷದ ಬಳಿಕ ವಿಚಾರಣೆ ಕರೆಯಲಾಗಿದೆ ಎಂದರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಂದು ಮಾಹಿತಿ ಪಡೆಯಲು 11 ವರ್ಷ ಕಾಯುವ ದುಸ್ಥಿತಿ ನಿರ್ಮಾಣವಾಗಿದೆ ಎಂದರು. ಪ್ರಥಮ ಮೇಲ್ಮನವಿ ಸಲ್ಲಿಸಿದರು ಯಾವುದೇ ಪ್ರತಿಕ್ರಿಯೆ ದೊರಯಲಿಲ್ಲ. ನಂತರ ದ್ವಿತೀಯ ಮೇಲ್ಮನವಿ ಕರ್ನಾಟಕ ಮಾಹಿತಿ ಆಯೋಗ ಬೆಂಗಳೂರಿಗೆ ಸಲ್ಲಿಸಲಾಗಿತ್ತು. ನಾನು ಅರ್ಜಿ ಸಲ್ಲಿಸಿ 11 ವರ್ಷದ ಬಳಿಕ ಕಲಬುರ್ಗಿ ಮಾಹಿತಿ ಆಯೋಗ ಪೀಠದಿಂದ ಇಲ್ವಾಳಿಕೆ ಪತ್ರ ಬಂದಿದೆ ಎಂದರು. ಆರ್‌ಟಿಐ ಅಡಿಯಲ್ಲಿ ಅರ್ಜಿ ಸಲ್ಲಿಸಿದವರೆಗೆ ಸಂಬಂಧಿಸಿದ ಅಧಿಕಾರಿಗಳು 30 ದಿನಗಳಲ್ಲಿ ಮಾಹಿತಿ ನೀಡಲು ನಿಯಮವಿದೆ. ಆದರೆ ಅಧಿಕಾರಿಗಳು ಮಾಹಿತಿ ನೀಡಲು ಸಂಪೂರ್ಣ ಕಾಲಹರಣ ಮಾಡುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಬಸವಕಲ್ಯಾಣ :– ತಾಲೂಕಿನ ಬೇಟಬಾಲಕುಂದಾ ಸಮಿಪ ಇರುವ ಶ್ರೀ ದತ್ತಾತ್ರೇಯ ದೇವಸ್ಥಾನ ಆವರಣದಲ್ಲಿ ಶ್ರೀ ದತ್ತಾತ್ರೇಯ ಜಯಂತ್ಯುತ್ಸವದ ಕಾರ್ಯಕ್ರಮದಲ್ಲಿ ಮಲ್ಲಮ್ಮ ನುಡಿ ಪ್ರಾದೇಶಿಕ ಕನ್ನಡ ದಿನಪತ್ರಿಕೆ ವರದಿಗಾರರಾದ ಡಿ. ಕೆ. ಪ್ರಹ್ಲಾದ ಯವರಿಗೆ ಸಸ್ತಾಪುರ ಬೇಟಬಾಲಕುಂದಾ ಪೂಜ್ಯ ಶ್ರೀ ಸದಾನಂದ ಅಪ್ಪಗಳ ಸನ್ಮಾನಿಸಿದರು. ಈ ಸಂದರ್ಭದಲ್ಲಿ ದತ್ತಾತ್ರೇಯ ದೇವಸ್ಥಾನದ ಪೂಜ್ಯಶ್ರೀ ಬಸವರಾಜ ಮಹಾರಾಜರು. ಅಂಬಾರಾಯ ಸೈದಾಪೂರೆ. ಸೇರಿದಂತೆ ಅನೇಕರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ).

# ಶ್ರೀ ಗುತ್ತಿ ಬಸವೇಶ್ವರ ಜಾತ್ರಾ ಮಹೋತ್ಸವ ಪ್ರಯುಕ್ತ ಗ್ರಾಪಂ ವತಿಯಿಂದ ಅನ್ನ ದಾಸೋಹ



ಮಲ್ಲಮ್ಮ ನುಡಿ ವಾರ್ತೆ
ಚಿಟಗುಪ್ಪ:– ತಾಲೂಕಿನ ನಿರ್ಣಾ ಗ್ರಾಮದ ಹೊರವಲಯದಲ್ಲಿರುವ ಶ್ರೀ ಗುತ್ತಿ ಬಸವೇಶ್ವರ ಜಾತ್ರಾ ಮಹೋತ್ಸವದ ಪ್ರಯುಕ್ತ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ನಿರ್ಣಾ ಗ್ರಾಮ ಪಂಚಾಯತ್ ವತಿಯಿಂದ ಅನ್ನ ದಾಸೋಹ ಏರ್ಪಡಿಸಲಾಯಿತು. ಅನ್ನ ದಾಸೋಹಕ್ಕೆ ಗ್ರಾಮ ಪಂಚಾಯತ್ ಅಧ್ಯ–ಕ್ಷೆ ಗೀತಾ ಮಂಜುನಾಥ್ ಜೋಗಣಿ, ಉಪಾಧ್ಯಕ್ಷ ಸಂಜೀವಕುಮಾರ ಎಸ್. ಕಿರಣ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ದೇವಸ್ಥಾನ ಸಮಿತಿ ಅಧ್ಯಕ್ಷ ರಾಜಕುಮಾರ ತೆಳಮನಿ, ಉಪಾಧ್ಯಕ್ಷ ಅನೀಲರೆಡ್ಡಿ ಲಚನಗಾರ, ಗ್ರಾಮ ಪಂಚಾಯತ್ ಸದಸ್ಯರಾದ ಲಕ್ಷ್ಮಣರಾವ ಸಾತನೋರ್, ಸತೀಶ ತೆಳಮನಿ, ಮಹೇಶ ಜೋಗಣಿ, ಗೋಪಾಲ್ ಜೋಗಣಿ, ಬಾಬು ಅಳಿಗಿಡ್ಡ, ಪ್ರಮುಖರಾದ ಡಾ. ರವಿ ಸ್ವಾಮಿ ನಿರ್ಣಾ, ಮಂಜುನಾಥ್ ಜೋಗಣಿ, ವಿಜಯಕುಮಾರ ವಿಜಾಪುರೆ, ಶಿವು ಅಂಬಾಡಿ, ಶರಣು ಪೊಲೀಸ್ ಪಾಟೀಲ್, ಲೋಕೇಶ, ರಮೇಶ ಧೂಳ ವಾಜೀದ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ : ನೀಲಕಂಠ ರಾಠೋಡ.




ಮಲ್ಲಮ್ಮ ನುಡಿ ವಾರ್ತೆ
ಬಸವಕಲ್ಯಾಣ :– ತಮ್ಮ ತಮ್ಮ ಇಲಾಖೆಯ ಮಾರ್ಗಸೂಚಿ ಮತ್ತು ನಿಯಮಗಳ ಪ್ರಕಾರ ಗ್ಯಾರಂಟಿ ಯೊಜನೆಗಳ ಸೌಲಭ್ಯ ಸಮರ್ಪಕವಾಗಿ ನೀಡುವ ಮೂಲಕ ಗ್ಯಾರಂಟಿ ಯೊಜನೆಗಳು ಯಶಸ್ವಿಗೊಳಿಸಬೇಕೆಂದು ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅಧ್ಯಕ್ಷರಾದ ನೀಲಕಂಠ ರಾಠೋಡ ಹೇಳಿದರು.

ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಬುಧವಾರ ತಾಲ್ಲೂಕು ಮಟ್ಟದ ಗ್ಯಾರಂಟಿ ಯೊಜನೆಗಳ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿ ಎಸ್.ಪಿ.ಟಿ.ಪಿ ಯೋಜನೆಯಡಿ ತಾಂಡಾಗಳಲ್ಲಿ ಜೆಸ್ಕಾಂ ಇಲಾಖೆಯಿಂದ ಕೈಗೊಳ್ಳಬೇಕಾದ ಕಾಮಗಾರಿಗಳನ್ನು ಶೀಘ್ರವಾಗಿ ಮುಗಿಸಬೇಕು ಮತ್ತು ಬಟಗೇರಾ ಗ್ರಾಮಕ್ಕೆ ಒಂದು ಲೈನಮ್ಯಾನ ಸಿಬ್ಬಂದಿ ನಿಯೋಜನೆ ಮಾಡಬೇಕು ಎಂದು ತಿಳಿಸಿದರು.

ನಾರಾಯಣಪೂರ ಗ್ರಾಮಕ್ಕೆ ಮಂಜೂರಾದ ಪವರ ಸ್ಟೇಷನ್ ಯಾವುದೇ ಕಾರಣಕ್ಕೂ ಕಳೆದುಕೊಳ್ಳ ಬಾರದು ಅದಕ್ಕೆ ಸಂಬಂಧ ಪಟ್ಟ ತಹಶೀಲ್ದಾರ, ಇಒ ಮತ್ತು ಪಿಡಿಒ ಅವರ ಜೊತೆ ಚರ್ಚಿಸಿ ನಿಮಗೆ ಸರಕಾರಿ ಭೂಮಿಯನ್ನು ಮಂಜೂರು ಮಾಡಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತವೆ ಎಂದು ಜೇಸ್ಕಾಂ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರು.

ನ್ಯಾಯ ಬೆಲೆ ಅಂಗಡಿಗಳ ಬಗ್ಗೆ ಬಹಳಷ್ಟು ದೂರು ಬರುತ್ತಿವೆ. ಆದರೂ ಸಂಬಂಧ ಪಟ್ಟ ಇಲಾಖೆ ಅಧಿಕಾರಿಗಳು ಗಮನಕ್ಕೆ ಹರಿಸುತ್ತಿಲ್ಲ. ಹೀಗಾಗಿ ಮುಂದಿನ ಗ್ಯಾರಂಟಿ ಸಭೆಗೆ ಬರುವಾಗ ಸಂಪೂರ್ಣ ವರದಿಯೊಂದಿಗೆ ಬರಬೇಕು ಮತ್ತು ಯುವನಿಧಿ ಗಾಗಿ ಸಲ್ಲಸಿಸಿದ ಬಾಕಿ ಇರುವ ಅರ್ಜಿಗಳನ್ನು ಸಂಬಂಧ ಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಬಗೆಹರಿಸಿ ವಿದ್ಯಾರ್ಥಿಗಳ ಇದರ ಲಾಭ ಸಿಗುವಂತೆ ಮಾಡಬೇಕು ಎಂದರು.

ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ರಮೇಶ ಸುಲ್ಫಿ ಅವರು ಮಾತನಾಡಿ, ನ್ಯಾಯ ಬೆಲೆ ಅಂಗಡಿಯಲ್ಲಿ ಕಡ್ಡಾಯವಾಗಿ ಗ್ಯಾರಂಟಿ ಯೋಜನೆಗಳ ಮಾಹಿತಿವುಳ್ಳ ಬೋರ್ಡ್ ಅಳವಡಿಸಬೇಕು ಮತ್ತು ಸಂಬಂಧ ಪಟ್ಟ ಇಲಾಖೆ ಅಧಿಕಾರಿಗಳೂ ಅನುಪಾಲನ ವರದಿಯನ್ನು ಸಲ್ಲಿಸಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ತಾ.ಪಂ.ವ್ಯವಸ್ಥಾಪಕ ರಾಜರೆಡ್ಡಿ ಪಾಟೀಲ್, ಪ್ರ.ದ.ಸ.ಶಶಿಕಾಂತ ರಾಸೂರೆ, ಐಇಸಿ ಸಂಯೋಜಕ ವೀರಾರೆಡ್ಡಿ ಹಾಗೂ ಗ್ಯಾರಂಟಿ ಯೋಜನೆ ಸದಸ್ಯರಾದ ಎಂ.ಡಿ.ಖತ್ಸೋದ್ದಿನ್, ದಸರಥ ಶಿವಪ್ಪಾ, ಸಂಜುಕುಮಾರ, ಅನೀಲ ಮನೋಹರ, ದಿನೇಶ, ಮಾಧವ, ಯುವರಾಜ, ಪ್ರೀತೇಶ ಸೇರಿದಂತೆ ಪಂಚ ಗ್ಯಾರಂಟಿ ಯೋಜನೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಮಾರುತಿ ದೇವರ ಕಾರ್ತಿಕ ಮಹೋತ್ಸವ, ವಿಶೇಷ ಪೂಜೆ



ಮಲ್ಲಮ್ಮ ನುಡಿ ವಾರ್ತೆ

ಯಲಬುರ್ಗಾ:ತಾಲೂಕಿನವಜ್ರಬಂಡಿ ಗ್ರಾಮದಲ್ಲಿ ಶ್ರೀ ಮಾರುತಿ ದೇವರ ಕಾರ್ತಿಕ ಮಹೋತ್ಸವ ನಿಮಿತ್ತ, ಲಕ್ಷ ದೀಪೋತ್ಸವ ಹಾಗೂ ಮಹಾ ರಥೋತ್ಸವ ವಿಜೃಂಭಣೆಯಿಂದ ನೆರವೇರಿತು.ಬೆಳಿಗ್ಗೆದೇವಾಲಯದಲ್ಲಿ ಶ್ರೀ ಹನುಮಂತ ದೇವರಿಗೆ ವಿಶೇಷ ಪೂಜೆ,ಪಂಚಾಮೃತಾಭಿಷೇಕ,ವಿಶೇಷ ಅಲಂಕಾರ,ಮಹಾ ನೈವೇದ್ಯ,ಮಹಾ ಮಂಗಳಾರತಿ ಸೇರಿದಂತೆ ವಿವಿಧ ಪೂಜೆಗಳು ವಿಜೃಂಭಣೆಯಿಂದ ನಡೆದವು. ಬೆಂಗಳೂರು, ಹುಬ್ಬಳ್ಳಿ, ಹೈದ್ರಾಬಾದ್ ಸೇರಿದಂತೆ ನಾನಾ ಕಡೆಯಿಂದ ಆಗಮಿಸಿದ ಭಕ್ತರು ದೇವರಿಗೆ ವಿಶೇಷ ಪೂಜೆ, ಅರ್ಚನೆ ಸಲ್ಲಿಸಿ ಭಕ್ತಿ ಸಮರ್ಪಿಸಿದರು. ಎಲ್ಲ ಭಕ್ತರಿಗೂ ತೀರ್ಥ ಪ್ರಸಾದ ವಿತರಿಸಲಾಯಿತು. ಸಂಜೆ ಸ್ಥಳೀಯ ಸೇರಿದಂತೆ ನಾನಾ ಕಡೆಯಿಂದ ಆಗಮಿಸಿದ ಭಕ್ತರಿಂದ ದೀಪೋತ್ಸವ ಕಾರ್ಯಕ್ರಮ ನಡೆಯಿತು. ಮಹಿಳೆಯರು, ಮಕ್ಕಳು ದೇವರ ದರ್ಶನ ಪಡೆದು, ಕೈಯಲ್ಲಿ ದೀಪ ಹಿಡಿದು ಫೋಟೋ ಕ್ಲಿಕ್ಕಿಸಿಕೊಂಡರು. ಮರಿ ಕಾರ್ತಿಕ ದಿನದಂದು ಬೆಳಿಗ್ಗೆ ಗ್ರಾಮದ ಅಧಿದೇವತೆ ಶ್ರೀ ದ್ಯಾಮವ್ವನ ಗುಡಿ ಬಳಿ ಸುಮಂಗಲೆಯರಿಗೆ ಗ್ರಾಮದ ವತಿಯಿಂದ ಪ್ರಸಾದ ವಿತರಿಸಲಾಯಿತು.

ನಂತರ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ನಡೆಯಿತು. ಸಂಜೆ ನಡೆದ ಮಹಾ ರಥೋತ್ಸವದಲ್ಲಿ ಸಾವಿರಾರು ಭಕ್ತರು ಭಾಗವಹಿಸಿ, ಹೂವು, ಬಾಳೆ ಹಣ್ಣು, ಉತ್ತತ್ತಿ ರಥೋತ್ಸವಕ್ಕೆ ಎಸೆದು ಭಕ್ತಿ ಸಮರ್ಪಿಸಿದರು. ನಂತರ ವಿವಿಧ ಭಜನಾ ಮಂಡಳಿ

ಸದಸ್ಯರು, ಭಕ್ತರಿಂದ ಸಾಮೂಹಿಕ ಭಜನೆ ನಡೆಯಿತು. ಈ ಸಂದರ್ಭದಲ್ಲಿ ಬಂಡೆರಾವ್ ದೇಸಾಯಿ,ರಾಘವೇಂದ್ರ ದೇಸಾಯಿ,ರಾಮರಾವ್ ದೇಸಾಯಿ, ಅನಿಲ್ ಕುಮಾರ್ ದೇಸಾಯಿ, ಹನುಮೇಶ ಆಚಾರ ಜೋಶಿ, ಭೀಮಸೇನ್ ದೇಸಾಯಿ,ಹನುಮೇಶ,

ಪವನ್ ಕುಮಾರ್ ಕನ್ಯಾರಮಡವು, ವಿಜಯಿಂದ್ರ ದೇಸಾಯಿ, ಸು-ರೇಂದ್ರಾಚಾರ ಜೋಶಿ, ಕಿರಣ್ ಬೆಂಗಳೂರು,ಶ್ರೀನಿವಾಸ್ ಶಿವನಗುತ್ತಿ, ಲಕ್ಷ್ಮಣ್ ರಾವ್ ದೇಸಾಯಿ,ಅನಂತರಾವ್ ದೇಸಾಯಿ,ಗುರುರಾಜ್ ದೇಸಾಯಿ, ಅಡವಾಚರ ಜೋಶಿ, ವೆಂಕಟೇಶ್ ದಿಗ್ಗಾವಿ, ವಿಜಯ ಕುಮಾರ್ ಶೆಟ್ಟಿ ಸೇರಿದಂತೆ ಇತರರಿದ್ದರು.

# ಸಾರ್ವಜನಿಕರು ಬಾಕಿ, ರಾಜಿಯಾಗಬಹುದಾದ ವ್ಯಾಜ್ಯಗಳನ್ನು ಇತ್ಯರ್ಥಪಡಿಸಿಕೊಳ್ಳಿ: ಕೆ.ಜಿ.ಶಾಂತಿ



ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:ರಾಷ್ಟ್ರ ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಗಳ ನಿರ್ದೇಶನದಂತೆ, ಬಳ್ಳಾರಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ಇದೇ ಡಿ.13 ರಂದು ಈ ವರ್ಷದ ಕೊನೆಯ ರಾಷ್ಟ್ರೀಯ ಲೋಕ್ ಅದಾಲತ್ ನಡೆಯಲಿದ್ದು, ಸಾರ್ವಜನಿಕರು ಬಾಕಿ ಇರುವ ಮತ್ತು ರಾಜಿಯಾಗಬಹುದಾದಂತಹ ತಮ್ಮ ವ್ಯಾಜ್ಯಗಳನ್ನು ಇತ್ಯರ್ಥಪಡಿಸಿಕೊಳ್ಳಬೇಕು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಕೆ.ಜಿ.ಶಾಂತಿ ಅವರು ಹೇಳಿದರು.

ನಗರದ ತಾಳೂರು ರಸ್ತೆಯ ನೂತನ ಜಿಲ್ಲಾ ನ್ಯಾಯಾಲಯ ಸಂಕೀರ್ಣದ ಮೊದಲನೇ ಮಹಡಿಯ ವಿಡೀಯೋ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ರಾಷ್ಟ್ರೀಯ ಲೋಕ್ ಅದಾಲತ್ ನ್ಯಾಯಾಂಗದ ಒಂದು ಭಾಗ. ಉಭಯ ಕಕ್ಷಿದಾರರ ಪರಸ್ಪರ ಹೊಂದಾಣಿಕೆಗಾಗಿ ಮತ್ತು ತ್ವರಿತ ನ್ಯಾಯಕ್ಕಾಗಿಯೂ ರಾಷ್ಟ್ರೀಯ ಲೋಕ್ ಅದಾಲತ್ ಸಹಕಾರಿಯಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಅದಾಲತ್ ದಿನದಂದು 15 ಬೆಂಚ್ ಗಳಲ್ಲಿ ಅದಾಲತ್ ನಡೆಯಲಿದ್ದು, ಅಂದು ಬಗೆಹರಿಸಬಹುದಾದ ವಿವಿಧ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಳ್ಳಬಹುದು ಹಾಗೂ ನ್ಯಾಯಾಲಯದ ಶುಲ್ಕವನ್ನು ಮರು ಪಾವತಿಸಲಾಗುತ್ತದೆ ಎಂದು ಹೇಳಿದರು.

ವೈವಾಹಿಕ, ಕೌಟುಂಬಿಕ, ಮೋಟಾರು ಅಪಘಾತ, ಚೆಕ್ ಅಮಾನ್ಯದ, ವಾಣಿಜ್ಯ, ಸೇವಾ ಪ್ರಕರಣಗಳು ಮತ್ತು ರಾಜೀಯಾಗಬಲ್ಲ, ಗ್ರಾಹಕ ವ್ಯಾಜ್ಯ, ಡಿಆರ್ ಟಿ, ಪಾಲುದಾರಿಕೆ, ಸಾರಿಗೆ ಹಾಗೂ ಇತರೇ ಸಿವಿಲ್ ಪ್ರಕರಣಗಳು ಸೇರಿದಂತೆ ಎಲ್ಲಾ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥ ಪಡಿಸಿಕೊಳ್ಳಬಹುದಾಗಿದೆ. ಇದರಿಂದ ಹಣ, ಸಮಯ ಉಳಿತಾಯವಾಗಲಿದ್ದು, ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗಲಿದೆ ಎಂದರು.

ಲೋಕ್ ಅದಾಲತ್ ನಲ್ಲಿ ಜನರಿಗೆ ಸುಲಭವಾಗಿ, ವೇಗವಾಗಿ ಮತ್ತು ಕಡಿಮೆ ಖರ್ಚಿನಲ್ಲಿ ನ್ಯಾಯ ಒದಗಿಸಲಾಗುತ್ತದೆ. ಇದರಿಂದ ನ್ಯಾಯಾಲಯದ ಮೇಲಿನ ಹೊರೆ ಇಳಿಕೆಯಾಗಲಿದೆ. ಅಧಿಕ ಕಾಲದಿಂದ ಬಾಕಿ ಇರುವ ಪ್ರಕರಣಗಳ ಮೇಲೆ ಗಮನ ಕೇಂದ್ರೀಕರಿಸಲಾಗಿದೆ ಎಂದು ಹೇಳಿದರು.

ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು 35,533 ಬಾಕಿ ಪ್ರಕರಣಗಳಲ್ಲಿ ಡಿ.13 ರಂದು ನಡೆಯಲಿರುವ ರಾಷ್ಟ್ರೀಯ ಲೋಕ್ ಅದಾಲತ್ ನಲ್ಲಿ 8,961 ಪ್ರಕರಣಗಳನ್ನು ರಾಜಿ ಸಂಧಾನಕ್ಕೆ ಗುರುತಿಸಲಾಗಿದೆ. ಅದರಲ್ಲಿ 4,178 ಪ್ರಕರಣಗಳ ಉಭಯ ಕಕ್ಷಿದಾರರು ರಾಜಿ ಮಾತುಕತೆಯ ಮೂಲಕ ಇತ್ಯರ್ಥಕ್ಕೆ ಒಪ್ಪಿಕೊಂಡಿದ್ದಾರೆ ಎಂದು ತಿಳಿಸಿದರು.

**ದಂಡ ಮೊತ್ತದಲ್ಲಿ ಶೇ.50 ರಷ್ಟು ರಿಯಾಯಿತಿ:**

ರಾಜ್ಯ ಸರ್ಕಾರವು ಪೊಲೀಸ್ ಇಲಾಖೆಯ ಪೊಲೀಸ್ ಇಲಾಖೆಯ ಸಂಚಾರಿ ಇ-ಚಲನ್ ನಲ್ಲಿ ದಾಖಲಾಗಿರುವ ಬಾಕಿ ಪ್ರಕರಣಗಳು ಹಾಗೂ ಸಾರಿಗೆ ಇಲಾಖೆಯಲ್ಲಿ 1991-92 ರಿಂದ 2019-20 ರ ಅವಧಿಯಲ್ಲಿ ದಾಖಲಾಗಿ ಪಾವತಿಗೆ ಬಾಕಿ ಇರುವ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇ.50 ರಷ್ಟು ರಿಯಾಯಿತಿ ನೀಡಿದ್ದು, ಡಿ.12 ರ ವರೆಗೆ ಈ ರಿಯಾಯಿತಿ ಸೌಲಭ್ಯವು ಇರಲಿದೆ. ಡಿಸೆಂಬರ್ 13 ರಂದು ನಡೆಯಲಿರುವ ರಾಷ್ಟ್ರೀಯ ಲೋಕ್ ಅದಾಲತ್ ಪ್ರಯುಕ್ತ ಈ ರಿಯಾಯಿತಿ ನೀಡಲಾಗಿದೆ. ಸಾರ್ವಜನಿಕರು ಈ ಸೌಲಭ್ಯವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ ಸೇರಿದಂತೆ ಜಿಲ್ಲಾ ನ್ಯಾಯಾಲಯದ ಅಧಿಕಾರಿಗಳು, ಸಿಬ್ಬಂದಿ ಹಾಜರಿದ್ದರು.

# ಮಕ್ಕಳಿಗೆ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರ ಕಲಿಸಿಕೊಡಬೇಕು : ಪಟೇಲ್



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಇಂದಿನ ಮಕ್ಕಳೇ ಈ ನಾಡಿನ ಬಾವಿ ಪ್ರಜೆಗಳಾಗಿದ್ದು ಅವರ ಭವಿಷ್ಯ ಉಜ್ವಲ ಗೊಳ್ಳಲು ಅವರಿಗೆ ಉತ್ತಮ ಗುಣಮಟ್ಟದ ಶಿಕ್ಷಣದ ಜೊತೆಗೆ ಒಳ್ಳೆಯ ಸಂಸ್ಕಾರ ವನ್ನು ಕಲಿಸಿಕೊಡಬೇಕು ಎಂದು ಕೊಪ್ಪಳ ನಗರಸಭೆಯ ಅಧ್ಯಕ್ಷ ಅಮ್ಜದ್ ಪಟೇಲ್ ಹೇಳಿದರು, ಅವರು ಮಂಗಳವಾರ ನಗರದ ಮಿಲ್ಲತ್ ಪಬ್ಲಿಕ್ ಶಾಲೆ ಆವರಣದಲ್ಲಿ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮತ್ತು ಸಮನ್ವಯ ಅಧಿಕಾರಿಗಳ ಕಾರ್ಯಾಲಯ ಹಾಗೂ ಮಿಲ್ಲತ್ ಶಿಕ್ಷಣ ಮತ್ತು ಕಲ್ಯಾಣ ಸಂಸ್ಥೆ ಇವುಗಳ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ ಕೊಪ್ಪಳ ಉರ್ದು ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ 2025 26 ನೇ ಸಾಲಿನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು, ಮುಂದುವರಿದು ಮಾತನಾಡಿ ಶಿಕ್ಷಣದಿಂದ ಮಾತ್ರ ಸಮಗ್ರ ಅಭಿವೃದ್ಧಿ ಕಾಣಲು ಸಾಧ್ಯವಾಗಿದೆ ಮೊದಲು ನಾವು ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಬೇಕು ,ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಕೊಡಬೇಕು, ಮಕ್ಕಳಲ್ಲಿ ದೇಶಾಭಿಮಾನ ಮೂಡಿಸುವಂತಹ ಕೆಲಸ ಮಾಡಬೇಕು ಅವರ ಭವಿಷ್ಯ ಉಜ್ವಲ ಗೊಳಿಸಬೇಕು ಇದರಲ್ಲಿ ಶಿಕ್ಷಕರ ಮತ್ತು ಪಾಲಕರ ಜವಾಬ್ದಾರಿ ಹೆಚ್ಚಾಗಿದೆ ,ಪ್ರತಿಯೊಬ್ಬರು ತಮ್ಮ ತಮ್ಮ ಪಾಲಿನ ಜವಾಬ್ದಾರಿ ನಿಭಾಯಿಸಬೇಕು, ಈ ಭಾಗದ ಶೈಕ್ಷಣಿಕ ವಿಷಯಕ್ಕೆ ಸಂಬಂಧಿಸಿದಂತೆ ಅದರಲ್ಲೂ ವಿಶೇಷವಾಗಿ ಅಲ್ಪಸಂಖ್ಯಾತ ಸಮುದಾಯದ ಉರ್ದು ಶಾಲೆಯ ಸರ್ವತೋಮುಖ ಅಭಿವೃದ್ಧಿಗಾಗಿ ಹೆಚ್ಚಿನ ಮುತುವರ್ಜಿ ವಹಿಸಿ ಕೆಲಸ ಮಾಡುವುದು ಅವಶ್ಯಕತೆ ಇದೆ ಈ ದಿಶೆಯಲ್ಲಿ ಪ್ರಮಾಣಿಕ ಪ್ರಯತ್ನ ಮಾಡುವದಾಗಿ ಕೊಪ್ಪಳ ನಗರಸಭೆಯ ಅಧ್ಯಕ್ಷ ಅಮ್ಜದ್ ಪಟೇಲ್ ಅಭಿಪ್ರಾಯ ಪಟ್ಟರು, ಸಮಾರಂಭದ ಉದ್ಘಾಟನೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತಪ್ಪ ಹೆಚ್ ರವರು ನೆರವೇರಿಸಿ ಮಾತನಾಡಿ ಪ್ರತಿಭಾ ಕಾರಂಜಿ ಮೂಲಕ ವಿದ್ಯಾರ್ಥಿಗಳಲ್ಲಿ ಅಡಗಿರುವ ಉತ್ತಮ ಪ್ರತಿಭೆಗಳನ್ನು ಬೆಳಕಿಗೆ ತರುವ ಪ್ರಯತ್ನ ಈ ಕಾರ್ಯಕ್ರಮದ ಮೂಲಕ ಮಾಡಲಾಗುವುದು ಎಂದು ಹೇಳಿದರು,

ಈ ಸಂದರ್ಭದಲ್ಲಿ ಶರಣಬಸವನಗೌಡ ಪಾಟೀಲ್, ಬೀರಪ್ಪ ಅಂಡಗಿ ಅಕ್ಷರದಾಸೋಹ ಅಧಿಕಾರಿ ಮಲ್ಲಿಕಾರ್ಜುನ, ಬಿ ಆರ್ ಸಿ ಸಂಯೋಜಕ ಮಹಿಬೂಬ್ ಹುಸೇನ್, ಸಿ ಆರ್ ಪಿ ಮೈನುದ್ದೀನ್ ಅತ್ತಾರ್, ನಫೀಸ ಪಠಾನ್ ,ಹೋಳಿ ಬಸಯ್ಯ ವಾಹಿದಾ ಬೇಗಂ, ಕೆ ಎಮ್ ಅಲಿ, ಶರಣಪ್ಪ ರೆಡ್ಡಿ ಹನುಮರೆಡ್ಡಿ ರೇವಣಸಿದ್ದಪ್ಪ ಸೈಲಾನಿ ಬಾಷಾ, ಉರ್ದು ಸಾಹಿತಿ ಅನ್ವರ್ ಹುಸೇನ್ ಹಿರಿಯ ಸಮಾಜ ಸೇವಕ ಎಮ್ ಎ ಮಾಜಿದ, ಹಾಗೂ ಇನ್ನಿತರರು ಇದ್ದರು.

# ಹಿರಿಯ ಪತ್ರಕರ್ತ ಯಾವಗಲ್ ಮಠ ಹಾಗೂ ಲೋಕಾಯುಕ್ತ ಪಂಚಾಕ್ಷರಿ ಹಿರೇಮಠ ಅವರಿಗೆ ಶ್ರದ್ಧಾಂಜಲಿ

ಮಲ್ಲಮ್ಮ ನುಡಿ ವಾರ್ತೆ

ಕುಕನೂರ : ನಮ್ಮ ಹಿರಿಯರು ನಡೆದು ಬಂದ ದಾರಿಯಲ್ಲಿ ಸಾಗಿದಾಗ ಮಾತ್ರ ನಮಗೆ ಯಶಸ್ಸು ದೊರೆಯುತ್ತದೆ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಗೌರವ ಅಧ್ಯಕ್ಷ ಮಹೇಶ ಕಲ್ಮಠ ಹೇಳಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಇತ್ತೀಚಿಗೆ ಇಹಲೋಕ ತ್ಯಜಿಸಿದ ಹಿರಿಯ ಪತ್ರಕರ್ತ ಸಂಗಯ್ಯ ಯಾವಗಲ್ ಮಠ ಹಾಗೂ ಲೋಕಾಯುಕ್ತ ಪೊಲೀಸ್ ಅಧಿಕಾರಿ ಪಂಚಾಕ್ಷರಿ ಹಿರೇಮಠ ಅವರಿಗೆ ಶ್ರದ್ಧಾಂಜಲಿ ಅರ್ಪಿಸಿ ಮಾತನಾಡುತ್ತಾ ಸಂಗಯ್ಯ ಯಾವಗಲಮಠ ಒಬ್ಬ ಅದ್ಭುತ ಬರಹಗಾರರಾಗಿದ್ದು ತಮ್ಮ ಬರಹದೊಂದಿಗೆ ಅನೇಕ ಸಾಮಾಜಿಕ ಒಳಿತನ್ನು ಮಾಡಿದ್ದು ಅದ್ಭುತ ಅಂಕಣ-ಕಾರರು ಸಹ ಆಗಿದ್ದರು. ಕಿರಿಯ ಪತ್ರಕರ್ತರಿಗೆ ಸದಾ ಮಾರ್ಗದರ್ಶನ ನೀಡುತ್ತಾ ಪತ್ರಕರ್ತರ ಜೀವನದ ಏರಿಳಿತವನ್ನು ತಿಳಿಸುತ್ತಾ ಸದಾ ಸಮಾಜ ಮುಖಿಯಾಗಿ ಬಾಳಿದ ಅವರ ಜೀವನ ನಮ್ಮೆಲ್ಲರಿಗೂ ಮಾರ್ಗದರ್ಶನವಾಗಿದ್ದು ಅಂತಹ ಮಹನೀಯರು ಸಾಗಿ ಬಂದ ಮಾರ್ಗವನ್ನು ಅನುಸರಿಸಿ ಜೀವನದಲ್ಲಿ ಯಶಸ್ಸು ಕಂಡುಕೊಳ್ಳೋಣ ಎಂದು ತಿಳಿಸಿದರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಕುಕನೂರು ತಾಲೂಕ ಸಮಿತಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸದಸ್ಯರೆಲ್ಲರೂ ಸೇರಿ ಮೌನಚರಣೆ ಆಚರಿಸುವುದರೊಂದಿಗೆ ಇಹಲೋಕ ತ್ಯಜಿಸಿದ ಜೀವಗಳಿಗೆ ಗೌರವ ಸಮರ್ಪಿಸಿದರು. ಈ ವೇಳೆಯಲ್ಲಿ ತಾಲೂಕ ಅಧ್ಯಕ್ಷರಾದ ಚಂದ್ರು ಆರ್ ಬಾನಾಪುರ, ಪ್ರಧಾನ ಕಾರ್ಯದರ್ಶಿ ವೀರಯ್ಯ ಹಿರೇಮಠ, ವೀರಯ್ಯ ಕುರ್ತಕೋಟಿ, ಭೀಮಾಶಂಕರ ಪಾಣೆಗಾವ್, ವಿಶ್ವನಾಥ ಅಂಗಡಿ, ಸುನಿಲಕುಮಾರ ಮಠದ, ಮುತ್ತಯ್ಯ ತೋಂಟದಾರ್ಯ ಮಠ, ಮಲ್ಲಯ್ಯ ಗದಗಿನ ಹಾಗೂ ಅಲ್ಲಬೇಗಂ ಪಾಲ್ಗೊಂಡಿದ್ದರು

# ಅಂತರ್ಜಲ ಸಂಬಂಧಿತ ಸಮಸ್ಯೆಗಳು ಮತ್ತು ಅಂತರ್ಜಲ ನಿರ್ವಹಣೆ ಕುರಿತು ತರಬೇತಿ ಕಾರ್ಯಕ್ರಮ



ಬಳ್ಳಾರಿ:

ಕೇಂದ್ರ ಸರ್ಕಾರದ ಜಲಶಕ್ತಿ ಮಂತ್ರಾಲಯದಡಿ ಕಾರ್ಯನಿರ್ವಹಿಸುವ ಕೇಂದ್ರೀಯ ಅಂತರ್ಜಲ ಮಂಡಳಿ, ನೈರುತ್ಯ ಕ್ಷೇತ್ರ, ಬೆಂಗಳೂರು ಹಾಗೂ ಸಿವಿಲ್ ಎಂಜಿನಿಯರಿಂಗ್ ವಿಭಾಗ, ಬಳ್ಳಾರಿ ತಾಂತ್ರಿಕ ಶಿಕ್ಷಣ ಮತ್ತು ನಿರ್ವಹಣಾ ಸಂಸ್ಥೆ (ಬಿಐಟಿಎಂ) ಇವರ ಸಂಯುಕ್ತಾಶ್ರಯದಲ್ಲಿ ಸಂಸ್ಥೆಯ ಸಭಾಂಗಣದಲ್ಲಿ ಮಂಗಳವಾರ "ಜಲಧರೆಗಳ ನಕಾಶಿಕೆ, ಅಂತರ್ಜಲ ಸಂಬಂಧಿತ ಸಮಸ್ಯೆಗಳು ಮತ್ತು ಅಂತರ್ಜಲ ನಿರ್ವಹಣೆ" ಎಂಬ ವಿಷಯ ಕುರಿತು ಒಂದು ದಿನದ ತರಬೇತಿ ಕಾರ್ಯಾಗಾರ ನಡೆಯಿತು.

ಕೇಂದ್ರೀಯ ಅಂತರ್ಜಲ ಮಂಡಳಿಯ ಪ್ರಾದೇಶಿಕ ನಿರ್ದೇಶಕ ಜಿ.ಕೃಷ್ಣಮೂರ್ತಿ, ಅವರು ಕಾರ್ಯಾಗಾರ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ರಾಜ್ಯ ಕೇಂದ್ರ ಅಂತರ್ಜಲ ಇಲಾಖೆಗಳ ಅಧಿಕಾರಿಗಳು, ಶೈಕ್ಷಣಿಕ ವಲಯ, ಸಂಶೋಧಕರು ಮತ್ತು ವಿದ್ಯಾರ್ಥಿಗಳಿಗೆ ಅಂತರ್ಜಲ ವಿಜ್ಞಾನದಲ್ಲಿ ನಡೆಯುತ್ತಿರುವ ತಾಂತ್ರಿಕ ಅಭಿವೃದ್ಧಿಗಳು ಹಾಗೂ ಸವಾಲುಗಳ ಕುರಿತು ಅರಿವು ಮೂಡಿಸುವುದು ಇದರ ಉದ್ದೇಶವಾಗಿದೆ ಎಂದರು.

ಬಳ್ಳಾರಿ ತಾಂತ್ರಿಕ ಶಿಕ್ಷಣ ಮತ್ತು ನಿರ್ವಹಣಾ ಸಂಸ್ಥೆ (ಬಿಐಟಿಎಂ) ಯ ಪ್ರಾಂಶುಪಾಲರಾದ ಡಾ.ಯಡವಳ್ಳಿ ಬಸವರಾಜ್ ಅವರು ಕಾರ್ಯಾಗಾರದ ಅಧ್ಯಕ್ಷತೆ ವಹಿಸಿದ್ದರು. 'ಕರ್ನಾಟಕದಲ್ಲಿನ ಕೇಂದ್ರೀಯ ಅಂತರ್ಜಲ ಮಂಡಳಿಯ ಚಟುವಟಿಕೆಗಳು' ಕುರಿತು ಜಿ. ಕೃಷ್ಣಮೂರ್ತಿ, 'ಬಳ್ಳಾರಿ ಜಿಲ್ಲೆಯ ಎನ್ಎಕ್ಯೂಐಎಂ ಅಧ್ಯಯನಗಳು' ಕುರಿತು ಸಹಾಯಕ ಜಲವಿಜ್ಞಾನಿ ಡಾ.ದಮೇರ ಆಂಜನೇಯುಲು, 'ಕರ್ನಾಟಕ ರಾಜ್ಯದಲ್ಲಿನ ನೀರಿನ ಮಟ್ಟ ಮತ್ತು ನೀರಿನ ಗುಣಮಟ್ಟದ ಮೇಲೆ ಹವಾಮಾನ ವ್ಯತ್ಯಾಸ ಮತ್ತು ಅದರ ಪ್ರಭಾವ' ಕುರಿತು ಡಾ.ಎಂ. ಗೋಬಿನಾಥ್ ಮತ್ತು 'ಸುಸ್ಥಿರ ಅಂತರ್ಜಲಕ್ಕಾಗಿ ಗ್ರಾಮ ಮಟ್ಟದಲ್ಲಿ ಅಂತರ್ಜಲ ಮೂಲಗಳ ಮೌಲ್ಯಮಾಪನ ನಿರ್ವಹಣೆ' ಕುರಿತು ಡಾ.ಜೆ.ದವಿತುರಾಜ್ ವಿಶೇಷ ಉಪನ್ಯಾಸ ನೀಡಿದರು.

ಈ ವೇಳೆ ಬಳ್ಳಾರಿ ತಾಂತ್ರಿಕ ಶಿಕ್ಷಣ ಮತ್ತು ನಿರ್ವಹಣಾ ಸಂಸ್ಥೆ (ಬಿಐಟಿಎಂ) ಯ ಉಪ ಪ್ರಾಂಶುಪಾಲ ಮತ್ತು ಡೀನ್ ಡಾ.ಬಿ.ಎಸ್. ಖೇಣೇಡ್, ಅಂತರ್ಜಲ ನಿರ್ದೇಶನಾಲಯದ ಹಿರಿಯ ಭೂವಿಜ್ಞಾನಿ ವಿ.ಬಸಂತ್, ವಿಜ್ಞಾನಿ ಡಿ ಡಾ. ಜೆ. ದವಿತುರಾಜ್, ವಿಜ್ಞಾನಿ ಸಿ ಡಾ.ಎಂ.ಗೋಬಿನಾಥ್, ಸಹ ಪ್ರಾಧ್ಯಾಪಕ ಡಾ.ಮೊಹಮ್ಮದ್ ಖಾಲಿದ್.ಎಸ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಕಾರ್ಯಾಗಾರದಲ್ಲಿ ಅಂತರ್ಜಲ ವಿಜ್ಞಾನ ಮತ್ತು ನಿರ್ವಹಣೆಯ ವಿವಿಧ ಅಂಶಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ತರಬೇತಿಗಳ ಉಪನ್ಯಾಸ ಕಾರ್ಯಕ್ರಮ ಜರುಗಿದವು. ನಂತರ ಪ್ರಶಿಕ್ಷಣಾರ್ಥಿಗಳ ಪ್ರತಿಕ್ರಿಯೆ ಹಾಗೂ ಸಂವಾದ ನಡೆಯಿತು.

# ಹಳೇಪೇಟೆ ವೀರಭದ್ರೇಶ್ವರ ಕಾರ್ತಿಕೋತ್ಸವ ಸಂಪನ್ನ



ಮಲ್ಲಮ್ಮ ನುಡಿ ವಾರ್ತೆ

ಮುಗದಲ್ ; ಹಳೇಪೇಟೆಯಲ್ಲಿ ಆರಾಧ್ಯ ದೇವ ಶ್ರೀ ವೀಭದ್ರೇಶ್ವರ ಕಾರ್ತಿಕ ಮಹೋತ್ಸವ ಮಂಗಳವಾರ ವಿಜೃಂಭಣೆಯಿಂದ ಜರುಗಿತು.

ಬೆಳಿಗ್ಗೆ ಬ್ರಾಹ್ಮಿ ಮೂಹೂರ್ತದಲ್ಲಿ ಶ್ರೀ ವೀರಭದ್ರೇಶ್ವರ ಮೂರ್ತಿಗೆ ಕ್ಷೀರಾಭಿಷೇಕ, ರುದ್ರಾಭಿಷೇಕ, ಬಿಲ್ವಾರ್ಚನೆ, ಸೇರಿದಂತೆ ವಿವಿಧ ದಾರ್ಮಿಕ ಪೂಜಾ ವಿದಿ ವಿಧಾನಗಳು ಜರುಗಿದವು. ಶ್ರೀ ವೀರಭದ್ರದೇವರ ಕಳಸ ಮೆರಣಿಗೆಯಲ್ಲಿ ಪುರವಂತಿಕೆ ಸೇವೆ ಹಾಗೂ ವಿವಿಧ ಮಂಗಳ ವಾದ್ಯ ಮೇಳಗಳೊಂದಿಗೆ ದೇವರ ಬಾವಿಯಲ್ಲಿ ಗಂಗಾ ಪೂಜೆ ಕಾರ್ಯಕ್ರಮ ಜರುಗಿತು. ಅದೇ ಮೆರವಣಿಗೆಯಿಂದ ದೇವಸ್ಥಾನಕ್ಕೆ ಆಗಮಿಸಿ ಭಕ್ತರಿಂದ ಕಳಸಾ ರೋಹಣಾ ನೆರವೇರಿಸಲಾಯಿತು. ಸಂಜೆ ಕಾರ್ತಿಕೋತ್ಸವದ ದೀಪಾಲಂಕಾರ ಮಾಡುವುದರೊಂದಿಗೆ ಕಾರ್ತಿಕೋತ್ಸವ ಸಂಪನ್ನಗೊಂಡಿತು. ಈ ವೇಳೆ ಈರಣ್ಣ ಗುಡೂರು, ರಾಚಪ್ಪ ಗುಡೂರು, ಮಹಾಂತೇಶ ಬನ್ನಿಗೋಳ, ಉಮೇಶ ಯರ್ಾವಳ ಮಠ, ಮಹೇಶ ವಂದಾಲಿ. ಶರಣ ಗೌಡ, ಶಶಿ ವಂದಾಲಿ, ಮುದ್ದಯ್ಯ ಸ್ವಾಮಿ, ನಾಗರಾಜ ಯಾಳಗಿ. ಶಶಿಧರ ಕಂಚಿ ಮಠ, ಮಹಾಂತೇಶ ಕಂಚಿಮಠ. ಚಂದ್ರಕಾಂತ ಪತ್ತಾರ, ಮಹಿಳೆಯರು ಸೇರಿದಂತೆ ಸ್ಥಳೀಯ ಹಾಗೂ ಇತರ ಭಾಗದ ಭಕ್ತಾಧಿಗಳು ಇದ್ದರು.

# ಶಿರಗುಂಜಿ ಗ್ರಾಮ ರೈತ ಸಮ್ಮೇಳನ ಅರಣ್ಯ ಭೂಮಿ ಹಕ್ಕು ಪತ್ರ ನೀಡಿಲು ಆಗ್ರಹ




ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ : ಕರ್ನಾಟಕ ಪ್ರಾಂತ ರೈತ ಸಂಘ ಅಂಕೋಲಾ ತಾಲೂಕು ಸಮಿತಿ ನೇತ್ರತ್ವದಲ್ಲಿ ಶಿರಗುಂಜಿ ಗ್ರಾಮದ ರೈತ ಸಮ್ಮೇಳನ ಇಂದು ನಡೆಯಿತು. ಸಮ್ಮೇಳನವನ್ನು ಉದ್ಘಾಟಿಸಿ ಜಿಲ್ಲಾ ಅಧ್ಯಕ್ಷ ಶಾಂತಾರಾಮ ನಾಯಕ ಮಾತನಾಡಿ, ತಲಾತಲಾಂತರಗಳಿಂದ ಅರಣ್ಯ ಭೂಮಿಯಲ್ಲಿ ಸಾಗುವಳಿ ಮಾಡಿಕೊಂಡು ಬರುತ್ತಿರುವ ರೈತರಿಗೆ ಹಕ್ಕುಪತ್ರ ನೀಡಲು ಕೇಂದ್ರ ಮತ್ತು ರಾಜ್ಯ ಸರಕಾಗಳು ಯೋಗ್ಯ ಕ್ರಮ ತೆಗೆದುಕೊಳ್ಳಬೇಕು. ಈ ಬಗ್ಗೆ ಮಾನ್ಯ ಸಂಸದರಾದ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಚಳಿಗಾಲ ಅಧಿವೇಶನದಲ್ಲಿ ಸರಕಾರದ ಗಮನ ಸೆಳೆಯಬೇಕೆಂದು ಒತ್ತಾಯಿಸಿದರು. ರಾಜ್ಯ ಸರಕಾರದ ಅರಣ್ಯ ಇಲಾಖೆ ಅರಣಯವಾಸಿಗಳಿಗೆ ಯಾವುದೇ ತೊಂದರೆ ನೀಡಬಾರದೆಂದು ಸಭೆಯಲ್ಲಿ ಆಗ್ರಹಿಸಿದರು.

ತಾಲೂಕ ಸಮಿತಿ ಅಧ್ಯಕ್ಷ ಗೌರೀಶ ನಾಯಕ ಮಾತನಾಡಿ, ರೈತರು ಸಂಘಟಿತರಾಗಲು ಕರೆ ನೀಡಿದರು. ಊರಿನ ಹಿರಿಯ ರೈತ ಮುಖಂಡ ಕೇಶವ ಜಿ. ನಾಯಕ ಅಧ್ಯಕ್ಷತೆ ವಹಿಸಿದ್ದರು.

ಸಮಿತಿ ಆಯ್ಕೆ: ಸಮ್ಮೇಳನದಲ್ಲಿ ಗ್ರಾಮ ಸಮಿತಿ ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಕೇಶವ ಡಿ. ನಾಯಕ, ಉಪಾಧ್ಯಕ್ಷರಾಗಿ ಅನಂತ ಎನ್. ಗೌಡ, ಕಾರ್ಯದರ್ಶಿಯಾಗಿ ಚಂದ್ರ ಬಿ.ಗೌಡ, ಸಹಕಾರ್ಯದರ್ಶಿಯಾಗಿ ದಯಾನಂದ ಎಸ್. ನಾಯಕ ಆಯ್ಕೆಯಾದರು. ಸಮಿತಿ ಸದಸ್ಯರಾಗಿ ಕೇಶವ ಜಿ. ನಾಯಕ, ಗಣಪತಿ ಮಾಬ್ಲು ಗೌಡ, ದೇವಣ್ಣ ಎಸ್. ನಾಯಕ, ಅನಂತ ಎಚ್. ಗೌಡ, ಪರಶುರಾಮ, ಗಜಾನನ ಬಿ. ನಾಯಕ, ಸವಿತಾ ವಿ. ನಾಯಕ, ರಾಜೇಶ್ವರಿ ಎಸ್. ನಾಯಕ ಆಯ್ಕೆಯಾದರು.

# ಪತ್ರಿಕೋದ್ಯಮ ಅಪ್ರೆಂಟಿಸ್ ತರಬೇತಿಗೆ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

ಬಳ್ಳಾರಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಪತ್ರಿಕೋದ್ಯಮ ಪದವೀಧರರಿಗೆ ಮಾಧ್ಯಮ ಕ್ಷೇತ್ರದಲ್ಲಿ ಮತ್ತು ಮಾಧ್ಯಮ ಚಟುವಟಿಕೆಗಳ ಕಾರ್ಯನಿರ್ವಹಣೆ ಕುರಿತು 12 ತಿಂಗಳ ಅವಧಿಯ ಅಪ್ರೆಂಟಿಸ್ ತರಬೇತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ವಿಶೇಷ ಘಟಕ ಯೋಜನೆಯಡಿ ಹಾಗೂ ಗಿರಿಜನ ಉಪಯೋಜನೆಯಡಿ ನೀಡುವ 12 ತಿಂಗಳ ಅಪ್ರೆಂಟಿಸ್ ತರಬೇತಿಗಾಗಿ ಪತ್ರಿಕೋದ್ಯಮದಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಪೂರ್ಣಗೊಳಿಸಿರುವ ಹಾಗೂ ಕಂಪ್ಯೂಟರ್ ಜ್ಞಾನವಿರುವ, ಕನ್ನಡ ಭಾಷೆ ಬಳಸಲು ಪ್ರಬುದ್ಧತೆ ಇರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಗಳಿಗೆ 35 ವರ್ಷ ಮೀರಿರಬಾರದು. ಅರ್ಜಿ ಲಕೋಟೆಯ ಮೇಲೆ ಕಡ್ಡಾಯವಾಗಿ ವಿಶೇಷ ಘಟಕ ಯೋಜನೆಯಡಿ ಹಾಗೂ ಗಿರಿಜನ ಉಪಯೋಜನೆಯಡಿ 'ಪರಿಶಿಷ್ಟಜಾತಿ/ಪರಿಶಿಷ್ಟಪಂಗಡದ ಅಭ್ಯರ್ಥಿಗಳಿಗೆ ನೀಡುವ ಅಪ್ರೆಂಟಿಸ್ ತರಬೇತಿಗಾಗಿ ಅರ್ಜಿ' ಎಂದು ನಮೂದಿಸಬೇಕು.

# ಒಳ ಮೀಸಲಾತಿ ಮರು ಪರಿಶೀಲನೆಗೆ ಗೋರ ಸೇನಾ ರಾಜ್ಯ ಪ್ರಧಾನ ಕಾರ್ಯದರ್ಶಿ ಸುರೇಶ ಬಳೂಟಗಿ ಆಗ್ರಹ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಕಾಂಗ್ರೆಸ್ ಸರಕಾರ ರಾಜ್ಯದಲ್ಲಿ ಒಳಮೀಸಲಾತಿ ಜಾರಿಮಾಡಿದ ನಂತರ ಬಂಜಾರ, ಭೋವಿ, ಕೊರಚ, ಕೊರಮ ಸಮುದಾಯಗಳಿಗೆ ಅನ್ಯಾಯವಾಗಿದ್ದು, ಡಿ.8 ರಿಂದ ನಡೆಯುವ ಬೆಳಗಾವಿ ಚಳಿಗಾಲದ ಅಧಿವೇಶನದಲ್ಲಿ ಈ ಅನ್ಯಾಯ ಸರಿಪಡಿಸಲು ರಾಜ್ಯ ಸರಕಾರ ಮುಂದಾಗ ಬೇಕು ಎಂದು ಗೋರ ಸೇನಾ ರಾಜ್ಯ ಪ್ರಧಾನ ಕಾರ್ಯದರ್ಶಿ ಸುರೇಶ ಬಳೂಟಗಿ ಆಗ್ರಹಿಸಿದರು.

ಇಂದು ಕುಕನೂರಿನಲ್ಲಿ ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಮಾಜಕಲ್ಯಾಣ ಸಚಿವ ಒಳಮೀಸಲಾತಿಯಿಂದ ಪರಿಶಿಷ್ಟ ಜಾತಿಯ 101 ಸಮುದಾಯಗಳಿಗೆ ಅನ್ಯಾಯವಾಗದಂತೆ ನೋಡಿಕೊಳ್ಳುತ್ತೇವೆ ಎಂದು 2023 ರಲ್ಲಿ ವಿಧಾನ ಸಭಾ ಚುನಾವಣೆ ಸಮಯದಲ್ಲಿ ಭರವಸೆ ನೀಡಿದ್ದರು. ಇದನ್ನು ನಂಬಿದ ನಮ್ಮ ಬಂಜಾರ ಸಮುದಾಯದ ಜನರು ಅವರಿಗೆ ಬಹುಮತ ಬರುವ ಹಾಗೆ ಮತ ಚಲಾಯಿಸಿದರು. ಆದರೆ ಇದನ್ನು ಮರೆತ ಸಿದ್ಧರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಒಳಮೀಸಲಾತಿಯಲ್ಲಿ ನಮ್ಮ ಸಮಾಜಕ್ಕೆ ಬಹುದೊಡ್ಡ ಅನ್ಯಾಯ ಮಾಡಿದೆ. ಸರಕಾರಿ ಹುದ್ದೆಗಳ ನೇಮಕದ ರೋಸ್ಟರ್ ಬಿಡುಗಡೆಯಾದ ಬಳಿಕ ನಮಗೆ ಅವಕಾಶಗಳು ಕಡಿಮೆಯಾಗಿವೆ ಎಂದು ಆರೋಪಿಸಿದರು. ಈ ವಿಷಯ ಸರಕಾರಿ ನೇಮಕಾತಿಯಲ್ಲಿ ಬೆಳಕಿಗೆ ಬಂದಿದೆ ಹಿಂದೆ 100 ಹುದ್ದೆಗಳಲ್ಲಿ ಶೇ.17 ರಷ್ಟು ಮೀಸಲಾತಿ ಅನ್ವಯ ಪರಿಶಿಷ್ಟ ಜಾತಿಯ ಎಲ್ಲರಿಗೂ 17-18 ಹುದ್ದೆಗಳಿಗೆ ಸ್ಪರ್ಧಿಸುವ ಅವಕಾಶವಿತ್ತು. ಆದರೆ, ಹೊಸ ರೋಸ್ಟರನಂತೆ 100 ಹುದ್ದೆಗಳಲ್ಲಿ 1 ರಿಂದ 2 ಹುದ್ದೆಗಳು ಮಾತ್ರ ಸಿಗುತ್ತಿವೆ. ಇದು ಘೋರ ಅನ್ಯಾಯ. ಇದೇ ಸಮಸ್ಯೆ ಇತರೆ ಹುದ್ದೆಗಳು ಹಾಗೂ ಬ್ಯಾಂಕಿಂಗ್ ಹುದ್ದೆಗಳ ನೇಮಕದಲ್ಲೂ ನಡೆಯುತ್ತಿದೆ ಎಂದರು. ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಎಂಪರಿಕಲ್ ದತ್ತಾಂಶವನ್ನು ಪರಿಗಣಿಸಿಲ್ಲ, ಬಂಜಾರ ಸಮುದಾಯದ ಜನಸಂಖ್ಯೆಯನ್ನು 11 ಲಕ್ಷ ಎಂದು ತೋರಿಸಲಾಗಿದೆ. ಆದರೆ, ವಾಸ್ತವದಲ್ಲಿ ಒಟ್ಟು 30 ರಿಂದ 35 ಲಕ್ಷ ಬಂಜಾರರಿದ್ದಾರೆ. ತಪ್ಪು ದತ್ತಾಂಶದ ಆಧಾರದಲ್ಲಿ ಮೀಸಲು ಹಂಚಿಕೆ ಮಾಡಿರುವುದು ಸರಿಯಲ್ಲ ಎಂದು ತಿಳಿಸಿದರು.

ಶಿಕ್ಷಣ ಮತ್ತು ಉದ್ಯೋಗದಲ್ಲಿ ಗುಂಪು-ಸಿ ಬದಲಿಗೆ, ರೋಸ್ಟರವನ್ನು ಮಾರ್ಪಡಿಸಿ ಎಲ್ಲರಿಗೂ ಸಮಾನ ಅವಕಾಶ ಸಿಗುವಂತೆ ಏಕ ಗವಾಕ್ಷಿ ಪದ್ಧತಿ ಜಾರಿಗೊಳಿಸಬೇಕು. ಅಲೆಮಾರಿ ಸಮುದಾಯದವರಿಗೆ ಪ್ರತ್ಯೇಕವಾಗಿ ಶೇ.1 ರಷ್ಟು ಮೀಸಲು ನೀಡಬೇಕು. ಹಿಂದಿನ ಬಿಜೆಪಿ ಸರಕಾರ ಒಳಮೀಸಲು ವಿಷಯದಲ್ಲಿ ಎಡವಿದ ಕಾರಣಕ್ಕಾಗಿಯೇ ಬಂಜಾರ ಸಮುದಾಯದ ವಿರೋಧ ಕಟ್ಟಿಕೊಂಡು ಸೋಲಬೇಕಾಯಿತು. ಈಗಿನ ಕಾಂಗ್ರೆಸ್ ಸರಕಾರ ಕೂಡ ಅದೇ ದಾರಿಯಲ್ಲಿ ಸಾಗಬಾರದು ಎಂದರು. ಒಂದು ವೇಳೆ ತಾವು ಸರಿಪಡಿಸದೇ ಹೋದರೆ ಮುಂದಿನ ಚುನಾವಣೆಯಲ್ಲಿ ಇಡೀ ಬಂಜಾರ ಸಮುದಾಯ ಒಗ್ಗೂಡಿ ಕಾಂಗ್ರೆಸ್ ಪಕ್ಷಕ್ಕೆ ತಕ್ಕ ಪಾಠ ಕಲಿಸಬೇಕಾಗುತ್ತೆ ಎಂದು ಮಾಧ್ಯಮದ ಮೂಲಕ ಸರಕಾರಕ್ಕೆ ಆಗ್ರಹಿಸಿದರು.

# ಹಳೆಯ ಅನುಪಯುಕ್ತ ವಸ್ತುಗಳ ವಿಲೇವಾರಿ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ: ನಗರದ ಸ್ಟೇಷನ್ ರಸ್ತೆಯ ಜನತಾ ಬಜಾರ್ ಕಟ್ಟಡದ ಬಳ್ಳಾರಿ ಉಪವಿಭಾಗದ ಬಳ್ಳಾರಿಯ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿಯಲ್ಲಿ ಸುಮಾರು 40 ವರ್ಷಗಳಿಂದ ಬಳಕೆಗೆ ಬಾರದ ಅನುಪಯುಕ್ತ ಪಿಠೋಪಕರಣ ಹಾಗೂ ಕಡತಗಳಿದ್ದು, ಅವುಗಳ ವಿಲೇವಾರಿಗೆ ಸಂಬಂಧಿಸಿದಂತೆ ವಸ್ತುಗಳ ಖರೀದಿಗಾಗಿ ಮನವಿ ಆಹ್ವಾನಿಸಲಾಗಿದೆ. ಆಸಕ್ತರು ಡಿ.16 ರೊಳಗಾಗಿ ವಸ್ತುಗಳ ಖರೀದಿಗಾಗಿ ಮನವಿಯನ್ನು, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬಳ್ಳಾರಿ ಉಪ-ವಿಭಾಗ, ಬಳ್ಳಾರಿ, ಜನತಾ ಬಜಾರ್ ಕಟ್ಟಡ ಸ್ಟೇಷನ್ ರಸ್ತೆ, ಬಳ್ಳಾರಿ ಇಲ್ಲಿಗೆ ಅಥವಾ ಮೊ.9535151619, 8073013396 ಗೆ ಸಂಪರ್ಕಿಸಬಹುದು ಎಂದು ಸಹಕಾರ ಸಂಘಗಳ ಸಹಾಯಕ ನಿಬಂಧಕರು ತಿಳಿಸಿದ್ದಾರೆ.

# ಅಯ್ಯಪ್ಪ ಸೇವಾ ಸಮಿತಿ ಅಸ್ತಿತ್ವಕ್ಕೆ ಅಧ್ಯಕ್ಷ, ಕಾರ್ಯಾಧ್ಯಕ್ಷ ಆಯ್ಕೆ

ಮಲ್ಲಮ್ಮ ನುಡಿ ವಾರ್ತೆ ಸೇಡಂ: ತಾಲೂಕಿನಲ್ಲಿ ಓಂ ಶ್ರೀ ಧರ್ಮಶಾಸ್ತ ಅಯ್ಯಪ್ಪಸ್ವಾಮಿ ಸೇವಾ ಸಮಿತಿ ಅಸ್ತಿತ್ವಕ್ಕೆ ತರಲಾಗಿದೆ. ನೂತನ ಅಧ್ಯಕ್ಷರನ್ನಾಗಿ ಶರಣಪ್ಪ ಮೆಕ್ಯಾನಿಕ್ ಗುರುಸ್ವಾಮಿ, ಕಾರ್ಯಾಧ್ಯಕ್ಷರನ್ನಾಗಿ ರಂಗಸ್ವಾಮಿ





ಎಸ್.ಎಮ್. ಗುರುಸ್ವಾಮಿ ಅವರನ್ನು ನೇಮಕ ಮಾಡಲಾಗಿದೆ.

ಈ ಕುರಿತು ಧರ್ಮಶಾಸ್ತ ಅಯ್ಯಪ್ಪಸ್ವಾಮಿ ದೇವಾಲಯದಲ್ಲಿ ನಡೆದ ಸಭೆಯಲ್ಲಿ ಸಮಿತಿ ರಚಿಸಿದ್ದು, ಗುರುಸ್ವಾಮಿಗಳಾದ ಗೌರವಾಧ್ಯಕ್ಷರನ್ನಾಗಿ ದೇವಿಂದ್ರ ಸುಣಗಾರ, ಅಧ್ಯಕ್ಷರಾಗಿ ಶರಣಪ್ಪ ಮೆಕ್ಯಾನಿಕ್, ಕಾರ್ಯಾಧ್ಯಕ್ಷರಾಗಿ ರಂಗಸ್ವಾಮಿ ಎಸ್.ಎಮ್, ಉಪಾಧ್ಯಕ್ಷರಾಗಿ ಮಲ್ಲಿಕಾರ್ಜುನ ಭೋವಿ, ಸಿದ್ಧಲಿಂಗ, ಪ್ರಧಾನ ಕಾರ್ಯದರ್ಶಿಯಾಗಿ ವೆಂಕಟೇಶ ಪಾಟೀಲ, ಸಹ ಕಾರ್ಯದರ್ಶಿಯಾಗಿ ಡಾ. ರಮೇಶ ಶಿರೊಳ್ಳಿ, ಗೌತಮ ಕಲಕಂಭ, ಮಲ್ಲಿಕಾರ್ಜುನ ಪೂಜಾರಿ, ಅಭಿಷೇಕ ಬಾಗೋಡಿ, ಖಜಾಂಚಿಯಾಗಿ ಶ್ರೀಕಾಂತ ಬೆಡಸೂರ, ಸದಸ್ಯರಾಗಿ ಶ್ರೀನಿವಾಸ ಪ್ಯಾಟಿ, ವಿಜಯಕುಮಾರ, ಶ್ರೀಧರ ಚಂದನಕೇರಿ, ಪ್ರಭು ನಾಡಗೌಡ ಅವರನ್ನು ಆಯ್ಕೆ ಮಾಡಲಾಗಿದೆ.

# ವಿಶ್ವ ಮಾನವ ಹಕ್ಕುಗಳ ದಿನಾಚರಣೆ: ಮಾನವ ಹಕ್ಕುಗಳ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿ : ನ್ಯಾ.ವಿಜಯ

ಮಲ್ಲಮ್ಮ ನುಡಿ ಬಾಗಲಕೋಟೆ:

ಸಮಾಜದಲ್ಲಿರುವ ಪ್ರತಿಯೊಬ್ಬರು ಬದುಕುವ ಹಕ್ಕಿನೊಂದಿಗೆ ಇತರೆ ಮೂಲಭೂತ ಹಕ್ಕುಗಳನ್ನು ಹೊಂದಿದ್ದು, ಅವುಗಳನ್ನು ರಕ್ಷಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರನ್ಯಾಯಾಧೀಶರಾದ ಎನ್.ವಿ.ವಿಜಯ್ ಹೇಳಿದರು.

ಜಿಲ್ಲಾ ಪಂಚಾಯತ ನೂತನ ಸಭಾಭವನದಲ್ಲಿ ಬುಧವಾರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಪೊಲೀಸ್ ಇಲಾಖೆ ಹಾಗೂ ರಾಜ್ಯ ಮಾನವ ಹಕ್ಕುಗಳ ಆಯೋಗದ ಸಹಯೋಗದಲ್ಲಿ ಹಮ್ಮಿಕೊಂಡ ವಿಶ್ವ ಮಾನವ ಹಕ್ಕುಗಳ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನೈಸರ್ಗಿಕವಾಗಿ ಬಂದಂತಹ ಹಕ್ಕುಗಳನ್ನು ಚಲಾಯಿಸುವದರ ಜೊತೆಗೆ ಅವುಗಳ ಉಲ್ಲಂಘನೆಯಾಗದಂತೆ ನೋಡಿಕೊಳ್ಳಬೇಕಿದೆ ಎಂದು ತಿಳಿಸಿದರು.



ಮಾನವ ಹಕ್ಕುಗಳು ಕೇವಲ ಕಾನೂನಿಗೆ ಸೀಮಿತವಲ್ಲ. ಅವು ನಮ್ಮ ಸಮಾಜದ ಭಾಗವಾಗಿದೆ. ಸಂವಿಧಾನ ಎಂಬುದು ಒಂದು ದೊಡ್ಡ ಗ್ರಂಥವಿದ್ದಂತೆ, ಅದರಲ್ಲಿ ಎಲ್ಲ ರೀತಿಯ ಕಾನೂನುಗಳಿದ್ದು, ಅವುಗಳನ್ನು ಸರಿಯಾಗಿ ಪಾಲಿಸದಿದ್ದರೆ ವ್ಯರ್ಥವಾದಂತೆ. ವಿಶೇಷವಾಗಿ ಭಾಗ ಮೂರರ ಮೂಲಭೂತ ಹಕ್ಕುಗಳು, ಅದರಲ್ಲಿನ ಸಮಾನತೆ ಸೇರಿದಂತೆ ಇತರೆ ಹಕ್ಕುಗಳಿದ್ದರೂ ಇನ್ನು ಸಹ ಪೂರ್ಣ ಪ್ರಮಾಣದ ಸಮಾನತೆ ಕಾಣಿಸುತ್ತಿಲ್ಲ. ಮಾನವ ಹಕ್ಕುಗಳ ನಿಜವಾದ ಅರ್ಥ ತಿಳಿದು ಅವುಗಳ ಅನುಷ್ಠಾನ ತುರುವುದು ಅತೀ ಮುಖ್ಯವಾಗಿದೆ ಎಂದು ಅವರು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಸಂಗಪ್ಪ ಮಾತನಾಡಿ, ಮಾನವೀಯತೆ, ಗೌರವ, ಸಮಾನತೆ, ಸ್ವಾತಂತ್ರ್ಯ, ನ್ಯಾಯ ಈ ಎಲ್ಲ ಮೌಲ್ಯಗಳು ಮಾನವ ಹಕ್ಕುಗಳ ಜೀವಾಳವಾಗಿದೆ. ನಮ್ಮ ಸಂವಿಧಾನದ ಮೂಲಕ ಸಿದ್ದಾಂತ ಎಲ್ಲರೂ ಸಮಾನರಾಗಿದ್ದು, ಮಾತು, ನಂಬಿಕೆ, ಚಿಂತನೆ, ಆಚಾರಗಳಲ್ಲಿ ಸ್ವಾತಂತ್ರ್ಯ,

ಬಾಂಧವ್ಯ ಮತ್ತು ಪರಸ್ಪರ ಗೌರವ ಹೊಂದಿರುತ್ತಾರೆ. ಸಂವಿಧಾನದ ಭೂಮಿಕೆ, ಮೂಲ ಹಕ್ಕುಗಳು, ನ್ಯಾಯಾಂಗದ ರಕ್ಷಣೆ ಮತ್ತು ರಾಜ್ಯದ ಕರ್ತವ್ಯಗಳು ಇವೆಲ್ಲದರ ಗುರಿ ಒಂದೇ ಮಾನವ ಗೌರವದ ಸಂರಕ್ಷಣೆಯಾಗಿದೆ ಎಂದರು.

ಸಮಾನತೆ, ಶೋಷಣೆಯಿಂದ ಮುಕ್ತಿ, ಧಾರ್ಮಿಕ ಸ್ವಾತಂತ್ರ್ಯ, ಸಾಂಸ್ಕೃತಿಕ ಮತ್ತು ಶಿಕ್ಷಣ ಹಕ್ಕು, ಸಂವಿಧಾನಿಕ ಪರಿಹಾರ ಹಕ್ಕು ಸೇರಿದಂತೆ ಇತರೆ ಹಕ್ಕುಗಳು ಮಾನವನಿಗೆ ನೀಡಿದೆ. ಸಾಮಾಜಿಕ ನ್ಯಾಯ ಅಂಬೇಡ್ಕರವರ ಕನಸಾಗಿದ್ದು, ಮಾನವ ಹಕ್ಕುಗಳ ಪುನರುತ್ಥಾನಕ್ಕೆ ಜೀವ ತತ್ವ ನೀಡಿದ್ದಾರೆ ಎಂದರು. ನಾವುಗಳು ಇಂದಿನಿಂದ ಮಾನವ ಹಕ್ಕುಗಳನ್ನು ಜಾರಿಗೊಳಿಸುವ ಸಮಾಜದ ನಿರ್ಮಾಪಕರಾಗಬೇಕಿದೆ. ಸಂವಿಧಾನದ ಬೆಳಕಿನಲ್ಲಿ ನಡೆದು ಮಾನವೀಯತೆ ನಮ್ಮ ಧರ್ಮವಾಗಲಿ, ಸ್ನೇಹ ನಮ್ಮ ನಂಬಿಕೆಯಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಉಪನ್ಯಾಸ ನೀಡಿದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಪ್ರಧಾನ ಕಾನೂನು ಅಭಿರಕ್ಷಕ ಪಿ.ಎಚ್.ಮಾಳೇದ, ಮಾನವ ಹಕ್ಕುಗಳ ಕುರಿತು ಮಾತನಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಚಂದ್ರಶೇಖರ ದಿಡ್ಡಿ ಪ್ರತಿಜ್ಞಾವಿಧಿ ಬೋಧಿಸಿದರು.

ಕಾರ್ಯಕ್ರಮದಲ್ಲಿ ವಕೀಲರ ಸಂಘದ ಅಧ್ಯಕ್ಷ ಬಿ.ಜಿ.ಗದ್ದಿ, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಜಿ.ಪಂ ಉಪಕಾರ್ಯದರ್ಶಿ ಎನ್.ವಾಯ್.ಬಸರಿಗಿಡದ, ತಹಶೀಲ್ದಾರ ವಾಸುದೇವಸ್ವಾಮಿ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ವರ್ಗ ಹಾಗೂ ಶಾಲಾ, ಕಾಲೇಜು ವಿದ್ಯಾರ್ಥಿಗಳು ಇದ್ದರು.

## ಕಬ್ಬು ಸಂಶೋಧನಾ ಕೇಂದ್ರ ಸ್ಥಾಪನೆಗಾಗಿ ರೈತ ಸಂಘದ ಮನವಿ



ಮಲ್ಲಮ್ಮ ನುಡಿ ವಾರ್ತೆ

ಬೀದರ್, ಡಿ 10:– ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಬೀದರ್ ಜಿಲ್ಲಾ ಘಟಕದ ವತಿಯಿಂದ, ಜಿಲ್ಲೆಯ ಅರಣ್ಯ ಪರಿಸರ ಹಾಗೂ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆ ಅವರಿಗೆ ಮಹತ್ವದ ಬೇಡಿಕೆಗಳನ್ನು ಒಳಗೊಂಡ ಮನವಿಯನ್ನು ಜಿಲ್ಲಾಧಿಕಾರಿಗಳ ಮುಖಾಂತರ ಸಲ್ಲಿಸಲಾಯಿತು.

ಬೀದರ್ ಜಿಲ್ಲೆಯಲ್ಲಿ ವರ್ಷಕ್ಕೆ ಸುಮಾರು 30 ಲಕ್ಷ ಮೆಟ್ರಿಕ್ ಟನ್ ಕಬ್ಬು ಉತ್ಪಾದನೆ ನಡೆದರೂ, ಜಿಲ್ಲೆಯಲ್ಲಿ ಕಬ್ಬು ಸಂಶೋಧನಾ ಕೇಂದ್ರದ ಅಭಾವದಿಂದ ರೈತರಿಗೆ ತಳಿ ಮತ್ತು ಉತ್ಪಾದಕತೆ ವಿಷಯದಲ್ಲಿ ತಾಂತ್ರಿಕ ನೆರವು ಲಭ್ಯವಿಲ್ಲದೆ ಸಮಸ್ಯೆ ಉಂಟಾಗುತ್ತಿದೆ ಎಂದು ತಿಳಿಸಲಾಗಿದೆ.

ಬೀದರ್ ನಗರದ ಹಳ್ಳದಕೇರಿ ಬಳಿ ಇರುವ 34 ಎಕರೆ ಜಮೀನಿನಲ್ಲಿ ಕಬ್ಬು ಸಂಶೋಧನಾ ಕೇಂದ್ರ ಸ್ಥಾಪನೆ.

ಜಿಲ್ಲೆಯ ಮಣ್ಣು, ನೀರು, ಹವಾಮಾನಕ್ಕೆ ತಕ್ಕ ಅತ್ಯುತ್ತಮ ಕಬ್ಬು ತಳಿಗಳನ್ನು ವಿಜ್ಞಾನಿಗಳು ಶಿಫಾರಸು ಮಾಡುವ ಅಗತ್ಯವಿದೆ. ವಿಜ್ಞಾನಿಗಳ ಮಾರ್ಗದರ್ಶನದಲ್ಲಿ ರೈತರು ಪ್ರತಿ ಎಕರೆಗೆ 50–70 ಟನ್ ಕಬ್ಬು ಉತ್ಪಾದನೆ ಮಾಡಬಹುದು ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಬೀದರ್ ಜಿಲ್ಲೆಯಲ್ಲಿ ಕೃಷಿ ಮಹಾವಿದ್ಯಾಲಯ ಪ್ರಾರಂಭಿಸುವುದು. ಜಿಲ್ಲೆಯಲ್ಲಿ ಬೆಳೆಯುತ್ತಿರುವ ತೊಗರಿ, ಹೆಸರು, ಉದ್ದು, ಸೋಯಾ, ಹತ್ತಿ, ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದ ವಿಶೇಷ ವಿಜ್ಞಾನಿಗಳನ್ನು ನೇಮಕ ಮಾಡುವುದು. ರೈತರು ಹೊರರಾಜ್ಯಗಳಿಂದ ತಳಿ ತರಲು ಸಕ್ಕರೆ ಕಾರ್ಖಾನೆಗಳ ಅಸ್ಪಷ್ಟ ನೀತಿಗಳಿಂದ "ರಿಕವರಿ ಕಡಿಮೆಯಾಗಿದೆ" ಎಂಬ ನೆಪದಲ್ಲಿ ರೈತರು ನಷ್ಟಕ್ಕೆ ತುತ್ತಾಗುತ್ತಿದ್ದಾರೆ ಎಂದು ಸಂಘವು ಸಚಿವರಿಗೆ ತಿಳಿಸಿದೆ.

ರೈತರ ಅಭಿವೃದ್ಧಿಗಾಗಿಯೇ ಈ ಬೇಡಿಕೆಗಳು ಜಿಲ್ಲೆಯ ಕೃಷಿ ಬೆಳವಣಿಗೆ, ರೈತರ ಲಾಭದಾಯಕತೆ ಮತ್ತು ತಾಂತ್ರಿಕ ಜ್ಞಾನ ವೃದ್ಧಿಗಾಗಿ ಈ ಬೇಡಿಕೆಗಳನ್ನು ತುರ್ತುವಾಗಿ ಅನುಷ್ಠಾನಗೊಳಿಸುವಂತೆ ಸಂಘ ಒತ್ತಾಯಿಸಿದೆ.

ಈ ಸಂದರ್ಭದಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಸಿದ್ರಾಮಪ್ಪಾ ಆಣದೂರೆ, ಜಿಲ್ಲಾ ಕಾರ್ಯಾಧ್ಯಕ್ಷ ಶ್ರೀಮಂತ ಬಿರಾದಾರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಯಾನಂದ ಸ್ವಾಮಿ ಸಿರ್ಸಿ, ಶೇಷರಾವ ಕಣಜಿ, ಬಾಬುರಾವ ಜೋಳದಾಬಕಾ, ಚಂದ್ರಶೇಖರ ಜಮಖಂಡಿ, ಶಂಕರೆಪ್ಪಾ ಪಾರಾ, ಶೋಭಾವತಿ ಕಾರಭಾರಿ, ಪ್ರವೀಣ ಕುಲಕರ್ಣಿ, ಶಿವಾನಂದ ಹುಡಗೆ, ಸುಭಾಷ ರಗಟೆ, ನಾಗಯ್ಯಾ ಸ್ವಾಮಿ, ಪ್ರಕಾಶ ಬಾವಗೆ, ಬಸಪ್ಪಾ ಮರಖಲ್, ವಿಶ್ವನಾಥ ಧರಣೆ, ಮಲ್ಲಿಕಾರ್ಜುನ ಚಕ್ಕಿ ಸೇರಿದಂತೆ ವಿವಿಧ ತಾಲೂಕ ಅಧ್ಯಕ್ಷರು ಮತ್ತು ರೈತ ಮುಖಂಡರು ಉಪಸ್ಥಿತರಿದ್ದರು.

## ಸಮಾನತೆ ಸ್ವಾತಂತ್ರ್ಯದಿಂದ ಗೌರಯುತವಾಗಿ ಬದುಕಬೇಕಾದರೆ ಮಾನವ ಹಕ್ಕುಗಳು ಅವಶ್ಯಕ: ಗೌಡೂರು

ಮಲ್ಲಮ್ಮ ನುಡಿ ವಾರ್ತೆ ಲಿಂಗಸುಗೂರು :

ಪಟ್ಟಣದ ಶ್ರೀ ಉಟಕನೂರು ಬಸವಲಿಂಗ ಶಿಕ್ಷಣ ಟ್ರಸ್ಟ್ ಹಾಗೂ ಶ್ರೀ ಬಸಮ್ಮ ಗುರುಲಿಂಗಪ್ಪ ಕಾನೂನು ಮಹಾ ವಿದ್ಯಾಲಯದಲ್ಲಿ ಮಾನವ ಹಕ್ಕುಗಳ ದಿನಾಚರಣೆ ಕಾರ್ಯ ಕ್ರಮದಲ್ಲಿ ಮಾತನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರ್ ಅವರು ಬರೆದಿರುವ ಭಾರತ ಸಂವಿಧಾನ ಇಡೀ ವಿಶ್ವಕ್ಕೆ ಮಾದರಿಯಾಗಿದ್ದು, ಅದರಲ್ಲಿ ಮಾನವ ಹಕ್ಕುಗಳ ವಿವರಗಳಿವೆ.



ಭಾರತ ಪ್ರಜೆಯಾದ ಪ್ರತಿ ವ್ಯಕ್ತಿಯೂ ಈ ಭೂಮಿ ಮೇಲೆ ಸಮಾನತೆ, ಸ್ವಾತಂತ್ರ್ಯ ದಿಂದ ಗೌರಯುತವಾಗಿ ಬದುಕಬೇಕಾದರೆ ಮಾನವ ಹಕ್ಕುಗಳು ಅವಶ್ಯಕವಾಗಿದೆ ಎಂದರು.

ಮಾನವ ಹಕ್ಕುಗಳು ಮನುಷ್ಯನ ಘನತೆಯನ್ನು, ಸ್ತ್ರೀಯರ ಸಮಾನತೆಯ ಸ್ವಾತಂತ್ರ್ಯವನ್ನು, ಮಕ್ಕಳಿಗೆ ಶಿಕ್ಷಣದ ಹಕ್ಕುಗಳನ್ನು ಒದಗಿಸಿವೆ. ಇವುಗಳ ರಕ್ಷಣೆ ಮಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ವಿಶ್ವಸಂಸ್ಥೆಯು ಡಿಸೆಂಬರ–10,1948ರಂದು 30 ಅಂಶಗಳನ್ನಳಗೊಂಡ ಮಾನವ ಹಕ್ಕುಗಳನ್ನು ಘೋಷಿಸಿತು.

ಈ ಎಲ್ಲಾ ಅಂಶಗಳನ್ನು ಜಗತ್ತಿನ ಎಲ್ಲಾ ರಾಷ್ಟಗಳು ಕಡ್ಡಾಯವಾಗಿ ಪಾಲಿಸಬೇಕು. ನಮ್ಮ ದೇಶ ಹಾಗೂ ರಾಜ್ಯದಲ್ಲಿ 1993ರಲ್ಲಿ

'ಮಾನವ ಹಕ್ಕುಗಳ ಆಯೋಗ' ವನ್ನು ರಚಿಸಲಾಗಿದ್ದು, ಮಾನವ ಹಕ್ಕುಗಳ

ಉಲ್ಲಂ ಘನೆಯಾಗದಂತೆ ಹಾಗೂ ಉಲ್ಲಂಘನೆಯಾದರೆ ಅದಕ್ಕೆ ನ್ಯಾಯಯುತ ಪರಿಹಾರವನ್ನು ನೀಡುವ ಕಾರ್ಯ ಮಾಡುತ್ತಿವೆ ಎಂದರು. ವಿದ್ಯಾರ್ಥಿಗಳು, ಸಾರ್ವಜನಿಕರಲ್ಲಿ ಮಾನವ ಹಕ್ಕುಗಳ ಕುರಿತು ಅರಿವು ಮೂಡಿಸುವುದು ಅವಶ್ಯಕ ಎಂದು ಬಸಮ್ಮ ಗುರುಲಿಂಗಪ್ಪ ಕಾನೂನು ಮಹಾವಿದ್ಯಾಲಯದ ಪ್ರಾಚಾರ್ಯ ಅಮರೇಶ ಗೌಡೂರು ಹೇಳಿದರು.

## ಆಕರ್ಷಕ ತೆರಬಂಡಿ ಸ್ಪರ್ಧೆ: 1 ಲಕ್ಷ ರೂ. ಬಹುಮಾನ ಗೆದ್ದ ಬ್ಯಾಕೋಡದ ಎತ್ತುಗಳು




ಮಲ್ಲಮ್ಮ ನುಡಿ ಬಾಗಲಕೋಟೆ:

ತಾಲೂಕಿನ ಶಿರೂರ ಪಟ್ಟಣದಲ್ಲಿ ಸಿದ್ದಲಿಂಗೇಶ್ವರ ಜಾತ್ರೆ ಹಾಗೂ ಲಿಂ.ಸಿದ್ಧಲಿಂಗೇಶ್ವರ ಸ್ವಾಮೀಜಿ 55 ನೇ ಪುಣ್ಯಾರಾಧನೆ ನಿಮಿತ್ತ ಸ್ಥಳೀಯ ಹಾದಿ ಬಸವೇಶ್ವರ ಗೆಳೆಯರ ಬಳಗ ಆಯೋಜಿಸಿದ್ದ ತೆರಬಂಡಿ ಸ್ಪರ್ಧೆಯಲ್ಲಿ ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲೂಕಿನ ಬ್ಯಾಕೋಡದ ಎತ್ತುಗಳು ಪ್ರಥಮ ಸ್ಥಾನದೊಂದಿಗೆ 1 ಲಕ್ಷ ರೂ. ಗಳ ಬಹುಮಾನ ಪಡೆದುಕೊಂಡವು.ಅತ್ಯಂತ ರೋಚಕವಾಗಿ ನಡೆದ ಈ ಸ್ಪರ್ಧೆಯಲ್ಲಿ 9 ಜೋಡಿ ಎತ್ತುಗಳು ಪಾಲ್ಗೊಂಡಿದ್ದು, ಸ್ಪರ್ಧೆ ರೈತಾಪಿ ಜನರ ಹುಬ್ಬೇರಿಸುವಂತೆ ಮಾಡಿತು. ಸ್ಪರ್ಧೆಯಲ್ಲಿ ಅತಿ ಹೆಚ್ಚು ದೂರ ಕ್ರಮಿಸಿದ ಬ್ಯಾಕೋಡದ ಎತ್ತುಗಳು ಪ್ರಥಮ ಬಹುಮಾನ ಪಡೆದರೆ, ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಇಂಗಳಗಿಯ ಮಂಜು ಹಾಗೂ ಸೂರ್ಯ ಎಂಬ ಹೆಸರಿನ ಎತ್ತುಗಳು ದ್ವಿತೀಯ ಸ್ಥಾನ ಪಡೆದು 75 ಸಾವಿರ ರೂ.ಗಳ ನಗದು ಬಹುಮಾನ ಪಡೆದವು.

ಮಹಾಲಿಂಗಪೂರದ ರೇವಣಸಿದ್ದೇಶ್ವರ ಜೋಡೆತ್ತುಗಳು ತೃತೀಯ ಸ್ಥಾನದೊಂದಿಗೆ 50 ಸಾವಿರ ರೂ. ಹಾಗೂ ವಿಜಯಪುರ ಜಿಲ್ಲೆಯ ಬಬಲಾದಿಯ ಸಿದ್ರಾಮೇಶ್ವರ ಎತ್ತಗಳು ಚತುರ್ಥ 25 ಸಾವಿರ ರೂ.ಗಳ ಬಹುಮಾನ ಪಡೆದುಕೊಂಡವು. ಪ್ರಾರಂಭದಲ್ಲಿ ಶಿವಯೋಗಾಶ್ರಮದ ಸಿದ್ಧಲಿಂಗ ಶ್ರೀಗಳು ಸ್ಪರ್ಧೆಗೆ ಚಾಲನೆ ನೀಡಿದರು. ರೈತ ಭಾರತ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮುತ್ತಪ್ಪ ಹಿರೇಕುಂಬಿ, ಸಿದ್ದಪ್ಪ ಕೋಟಿಕಲ್, ರಂಗಪ್ಪ ಮಳ್ಳಿ, ಎಸ್.ಬಿ.ಮಾಚಾ, ಶರಣಯ್ಯ ಯಡಹಳ್ಳಿ, ಹನಮಂತ ಆಡಿನ, ಸಿದ್ದಪ್ಪ ಗಾಳಿ, ರಾಜಶೇಖರ ಅಂಗಡಿ, ಎಸ್.ಎಫ್.ಬಾರಡ್ಡಿ, ಎಚ್.ಎಸ್.ಗುಲಗಂಜಿ, ಶ್ರೀಶೈಲ ಮಲಘಾಣ, ಸಿದ್ದಪ್ಪ ಮೇಳಿ, ಸಂಜಯ ನಡುವಿನಮನಿ, ಶಿವು ಕಾಮರಡ್ಡಿ ಮತ್ತಿತರರು ಇದ್ದರು.

## ವಾಯುಮಾಲಿನ್ಯ ನಿಯಂತ್ರಣಕ್ಕೆ ಗಮನ ನೀಡಿ



ಯಾದಗಿರಿ: ಪರಿಸರ ಸ್ವಚ್ಛತೆ ಹಾಗೂ ವಾಯುಮಾಲಿನ್ಯ ನಿಯಂತ್ರಣಕ್ಕೆ ನಾಗರಿಕರು ಅವಶ್ಯಕ ಮಾರ್ಗಸೂಚಿಗಳನ್ನು ಪಾಲೀಸುವಂತೆ ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ಅವರು ಕರೆ ನೀಡಿದರು.ನಗರದ ಸುಭಾಷ್ ಸರ್ಕಲ್ ದಲ್ಲಿ ಇಂದು ವಾಯುಮಾಲಿನ್ಯ ನಿಯಂತ್ರಣ ಮಾಸಾಚರಣೆ, ಜಾಗೃತಿ ಜಾಥಾ–ಕ್ಕೆ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.ಸಾರ್ವಜನಿಕರು ಸುಸ್ಥಿತಿಯಲ್ಲಿರುವ, ಹೆಚ್ಚಿನ ಹೊಗೆ ಅಥವಾ ಕಾರ್ಬನ್ ಡೈ ಆಕ್ಸೈಡ್ ಬಿಡದ ವಾಹನಗಳನ್ನು ಬಳಸಬೇಕು. ಪರಿಸರ ಹಾಗೂ ವಾತಾವರಣ ಸ್ವಚ್ಛವಾಗಿಡಲು ಕಾನೂನಿನ ಅನ್ವಯ ತಪಾಸಣೆ ಸಹ ಕೈಗೊಂಡು ಕ್ರಮ ಸಹ ಕೈಗೊಳ್ಳಲಾಗುತ್ತಿದೆ.ಕಾರಣ ಸಾರ್ವಜನಿಕರು ವಾಯುಮಾಲಿನ್ಯ ನಿಯಂತ್ರಣ ನಿಯಮಗಳನ್ನು ಹಾಗೂ ಮಾರ್ಗಸೂಚಿಗಳನ್ನು ತಪ್ಪದೇ ಪಾಲಿಸುವಂತೆ ಅವರು ತಿಳಿಸಿದರು.ಯಾದಗಿರಿ ಅತ್ಯುತ್ತಮ ಹವಾಮಾನ ಹೊಂದಿದೆ. ಇದರ ಸುರಕ್ಷತೆ ಹಾಗೂ ನಿರ್ವಹಣೆ ಮಾಡಿಕೊಂಡು ಹೋಗುವ ಜವಾಬ್ದಾರಿ ತಮ್ಮೆಲ್ಲರ ಮೇಲಿದ್ದು, ಎಲ್ಲಿಂದರಲ್ಲಿ ಕಸ ಚೆಲ್ಲುವುದಾಗಲಿ, ಪ್ಲಾಸ್ಟಿಕ್ ಸುಡುವುದಾಗಲಿ ಮಾಡದಿರಲು ಸಹ ಅವರು ಸಲಹೆ ನೀಡಿದರು. ಜಿಲ್ಲಾಡಳಿತ, ಜಿಲ್ಲಾ ಪೊಲೀಸ್ ಇಲಾಖೆ, ಸಾರಿಗೆ ಇಲಾಖೆ, ಜಿಲ್ಲಾ ಮೋಟಾರ್ ಡ್ರೈ ವಿಂಗ್ ಸ್ಕೂಲ್ ಮಾಲೀಕರ ಅಸೋಸಿಯೇಷನ್, ವಾಯುಮಾಲಿನ್ಯ ತಪಾಸಣಾ ಕೇಂದ್ರ, ಆಟೋರಿಕ್ಷಾ ಮತ್ತು ಕ್ಯಾಬ್ ಮಾಲೀಕರ ಮತ್ತು ಚಾಲಕರ ಸಂಘ ಇವರ ಸಹಯೋಗದಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು. ನಗರದ ಸುಭಾಷ್ ಸರ್ಕಲ್ ದಿಂದ ಆರ್. ಟಿ. ಓ ಸರ್ಕಲ್ ವರೆಗೆ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿತ್ತು. ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಶ್ರೀ ಪೃಥ್ವಿಕ್ ಶಂಕರ್,ಆರ್ ಟಿ ಓ ಮಿಲಿಂದ್ ಕುಮಾರ್ ಎಸ್.ಎಸ್ , ಇನ್ಸಪೆಕ್ಟರ್ ಗಳಾದ ಹಯ್ಯಾಳಪ್ಪ, ಚಂದ್ರ ಕಾಂತ, ಡ್ರೈವಿಂಗ್ ಸ್ಕೂಲ್ ಅಧ್ಯಕ್ಷ ಯಲ್ಲಪ್ಪ ದೊಡ್ಮನಿ, ಜುಬೇರ್ ಅಹ್ಮದ್,ನಿಸಾರ್ ಅಹಮದ್,ದಿಲಿಪ್ ಕುಮಾರ್,ನರಸಯ್ಯ, ಇತರರು ಉಪಸ್ಥಿತರಿದ್ದರು.

## ಮೆಕ್ಕೆಜೋಳ ಖರೀದಿ ಕೇಂದ್ರ ಸ್ಥಾಪನೆ : ಜಿಲ್ಲಾಧಿಕಾರಿ

ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:

2025–26 ನೇ ಸಾಲಿನಲ್ಲಿ ಮುಂಗಾರು ಹಂಗಾಮಿನ ಅವಧಿಯಲ್ಲಿ ಜಿಲ್ಲೆಯಾದ್ಯಂತ ಸರಕಾರದ ಬೆಂಬಲ ಬೆಲೆ ಯೋಜನೆ ಅಡಿಯಲ್ಲಿ ಮೆಕ್ಕೆಜೋಳ ಉತ್ಪನ್ನವನ್ನು ರೈತರಿಂದ ಎಫ್.ಎ.ಕ್ಯೂ ಗುಣಮಟ್ಟದ ಉತ್ಪನ್ನವನ್ನು ಖರೀದಿಸಲು ಖರೀದಿ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗಿದ್ದು, ರೈತರು ಇದರ ಸದುಪಯೋಗವನ್ನು ಪಡೆಬೇಕೆಂದು ಜಿಲ್ಲಾಧಿಕಾರಿಗಳಾದ ಹರ್ಷಲ್ ಭೋಯರ್ ಅವರು ತಿಳಿಸಿದ್ದಾರೆ.

ಮೆಕ್ಕೆಜೋಳ ಉತ್ಪನ್ನವನ್ನು ರಾಜ್ಯದಲ್ಲಿನ ಡಿಸ್ಟಿಲರಿಗಳು ಖರೀದಿಸುವ ಕುರಿತು ಸರ್ಕಾರದಿಂದ ಆದೇಶ ಹೊರಡಿಸಲಾಗಿದ್ದು,

ಯಾದಗಿರಿ ಜಿಲ್ಲೆಯಲ್ಲಿ ಮೆಕ್ಕೆಜೋಳ 166.60 ಹೆಕ್ಟರ್ ಪ್ರದೇಶದಲ್ಲಿ ಬಿತ್ತನೆ ಮಾಡಲಾಗಿದೆ. ಯಾದಗಿರಿ ಜಿಲ್ಲೆಯಲ್ಲಿ ರೈತರು ಬೆಳೆದ ಮೆಕ್ಕೆಜೋಳವನ್ನು 2025–26ನೇ ಸಾಲಿಗೆ ಕೇಂದ್ರ ಸರ್ಕಾರ ನಿಗದಿಪಡಿಸಿರುವ ಬೆಂಬಲ ಬೆಲೆ ಪ್ರತಿ ಕ್ವಿಂಟಲಿಗೆ ಬೆಲೆ 2,400ರೂ. ಗಳಂತೆ ಸರ್ಕಾರದ ಆದೇಶದಲ್ಲಿನ ಷರತ್ತು/ನಿಂಭನೆಗಳನ್ವಯ ಖರೀದಿಸಲು ಕೋರ್ ಗ್ರೀನ್ ಶುಗರ್ & ಫ್ಯೂಯೆಲ್ಸ್ ಪ್ರೈವೇಟ್ ಲಿಮಿಟೆಡ್ ಡಿಸ್ಟಿಲರಿಗಳಿಗೆ ಸಕಾರದಿಂದ ನಿರ್ದೇಶನ ಮಾಡಗಿದೆ.

ಯಾದಗಿರಿ ತಾಲೂಕಿನ ಯಾದಗಿರಿಯ ಟಿಎಪಿಸಿಎಮ್ಎಸ್ ಖರೀದಿ ಕೇಂದ್ರಕ್ಕೆ ಕೃಷಿ ಉತ್ಪನ್ನ ಮಾರಾಟ ಸಮಿತಿಯ ಕಾರ್ಯದರ್ಶಿಯನ್ನು ಖರೀದಿ ಕೇಂದ್ರದ ನೋಡಲ್ ಅಧಿಕಾರಿ ಹಾಗೂ ತಾಲೂಕು ನೋಡಲ್ ಅಧಿಕಾರಿಯಾಗಿ ಯಾದಗಿರಿಯ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರನ್ನು ನೇಮಕ ಮಾಡಲಾಗಿದೆ.

ಶಹಾಪುರ ತಾಲೂಕಿನ ಶಹಾಪುರದ ಟಿಎಪಿಸಿಎಮ್ಎಸ್ ಖರೀದಿ ಕೇಂದ್ರಕ್ಕೆ ಕೃಷಿ ಉತ್ಪನ್ನ ಮಾರಾಟ ಸಮಿತಿಯ ಕಾರ್ಯದರ್ಶಿಯನ್ನು ಖರೀದಿ ಕೇಂದ್ರದ ನೋಡಲ್ ಅಧಿಕಾರಿ ಹಾಗೂ ತಾಲೂಕು ನೋಡಲ್ ಅಧಿಕಾರಿಯಾಗಿ ಶಹಾಪುರದ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರನ್ನು ನೇಮಕ ಮಾಡಲಾಗಿದೆ.

ಶೋರಾಪುರ ತಾಲೂಕಿನ ಶೋರಾಪುರ ಟಿಎಪಿಸಿಎಮ್ಎಸ್ ಹಾಗೂ ಕೆಂಭಾವಿ ಪಿಎಸಿಎಸ್ ಖರೀದಿ ಕೇಂದ್ರಕ್ಕೆ ಕೃಷಿ ಉತ್ಪನ್ನ ಮಾರಾಟ ಸಮಿತಿಯ ಕಾರ್ಯದರ್ಶಿಯನ್ನು ಖರೀದಿ ಕೇಂದ್ರದ ನೋಡಲ್ ಅಧಿಕಾರಿ ಹಾಗೂ ತಾಲೂಕು ನೋಡಲ್ ಅಧಿಕಾರಿಯಾಗಿ ಶೋರಾಪುರ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರನ್ನು ನೇಮಕ ಮಾಡಲಾಗಿದೆ.

ಕೆಂಭಾವಿ ಟಿ ಎ ಸಿ ಎಸ್ ಹಾಗೂ ಹುಣಸಗಿ ತಾಲೂಕಿನ ಹುಣಸಗಿ ಕೃಷ್ಣಾ ಟಿಎಪಿಸಿಎಮ್ಎಸ್ ಖರೀದಿ ಕೇಂದ್ರಕ್ಕೆ ಶೋರಾಪುರ ಕೃಷಿ ಉತ್ಪನ್ನ ಮಾರಾಟ ಸಮಿತಿಯ ಕಾರ್ಯದರ್ಶಿಯನ್ನು ಖರೀದಿ ಕೇಂದ್ರದ ನೋಡಲ್ ಅಧಿಕಾರಿ ಹಾಗೂ ತಾಲೂಕು ನೋಡಲ್ ಅಧಿಕಾರಿಯಾಗಿ ಶೋರಾಪುರ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರನ್ನು ನೇಮಕ ಮಾಡಲಾಗಿದ್ದು,

ಈ ಖರೀದಿ ಕೇಂದ್ರದ ಅಧಿಕಾರಿಗಳಿಗೆ ನಿಯಮಾನುಸಾರವಾಗಿ ಯಾವುದೇ ರೀತಿಯ ಅವ್ಯವಹಾರಕ್ಕೆ ಆಸ್ಪದ ನೀಡದಂತೆ ಕ್ರಮಬದ್ಧವಾಗಿ ಖರೀದಿ ಪ್ರಕ್ರೀಯೆಯನ್ನು ಕೈಗೊಳ್ಳಲು ನೋಡಲ್ ಅಧಿಕಾರಿಗಳಿಗೆ ಆದೇಶಿಸಿ ಉಳಿದಂತೆ ಸರ್ಕಾರದ ಆದೇಶದಂತೆ ಎಲ್ಲಾ ಷರತ್ತುಗಳು ಹಾಗೂ ನಿರ್ದೇಶನಗಳು ಪಾಲಿಸಬೇಕೆಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಸ್ತೆ ಅಪಘಾತ : ಮೂವರ ಸಾವು

ಮಲ್ಲಮ್ಮ ನುಡಿ ಬಾಗಲಕೋಟೆ:

ಜಿಲ್ಲೆಯ ಮುಧೋಳ ತಾಲೂಕಿನ ಭಂಟನೂರ ಕ್ರಾಸ್ ಬಳಿ ಮಂಗಳವಾರ ತಡರಾತ್ರಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಮೂವರು ಸಾವನ್ನಪ್ಪಿದ್ದು, ಇನ್ನೋರ್ವ ವ್ಯಕ್ತಿ ತೀವ್ರವಾಗಿ ಗಾಯಗೊಂಡಿದ್ದಾನೆ.

ಲಾರಿ ಹಾಗೂ ಬೊಲೆರೋ ವಾಹನದ ಮಧ್ಯೆ ಸಂಭವಿಸಿದ ಢಿಕ್ಕಿಯಲ್ಲಿ ಮೂವರು ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ. ಲಾರಿಯಲ್ಲಿದ್ದ ತಾಳಿಕೋಟಿ ತಾಲೂಕಿನ ಮಿಣಜಗಿಯ ರೇವಣಸಿದ್ಧ ವಿಜಯಕುಮಾರ ಕಡೇಮನಿ(20),

ಸುರೇಶ ಶಾಂತಪ್ಪ ಕೊಣ್ಣೂರ(33) ಹಾಗೂ ಬೊಲೆರೋ ಚಾಲಕ ಲಿಂಗಸ್ಗೂರ ತಾಲೂಕಿನ ಕಣಸಾವಿಯ ಶಾಂತಪ್ಪ ಗುರಿಕಾರ(22) ಮೃತಪಟ್ಟವರು. ಗಾಯಗೊಂಡಿರುವ ರಮೇಶ ಮಾದರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಘಟನಾ ಸ್ಥಳಕ್ಕೆ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೊಯೆಲ್ ಭೇಟಿ ನೀಡಿದ್ದರು. ಲೋಕಾಪೂರ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


## ಮೆದಿಕಿನಾಳ ಶ್ರೀ ಚೆನ್ನಮಲ್ಲ ಶಿವಯೋಗಿಗಳ ಜಾತ್ರಾ ಮಹೋತ್ಸವ

ಮಲ್ಲಮ್ಮ ನುಡಿ ವಾರ್ತೆ ಮಸ್ಕಿ:

ತಾಲ್ಲೂಕಿನ ಮೆದಿಕಿನಾಳ ಗ್ರಾಮದ ಸುವರ್ಣಗಿರಿ ಮಠದಲ್ಲಿ ಡಿ.11ರಂದು ಲಿಂ.ಚನ್ನಮಲ್ಲ ಶಿವಯೋಗಿಗಳ 70ನೇ ಜಾತ್ರಾ ಮಹೋತ್ಸವದ ಅಂಗವಾಗಿ ಸಾಮೂಹಿಕ ವಿವಾಹ ಹಾಗೂ 1008 ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ನಡೆಯಲಿದೆ ಎಂದು ಗ್ರಾಮದ ಮುಖಂಡ ಹಾಗೂ ಮಠದ ಭಕ್ತರಾದ ರಾಜಣ್ಣ ಪರಡ್ಡಿ ತಿಳಿಸಿದ್ದಾರೆ.

ಸಮೀಪದ ಮೆದಿಕಿನಾಳ ಗ್ರಾಮದ ಮಠದಲ್ಲಿ ಡಿಸೆಂಬರ್ 11ರಂದು ಜಾತ್ರಾ ಮಹೋತ್ಸವದ ನಿಮಿತ್ತ ಗುರುವಾರ ಬೆಳಿಗ್ಗೆ ಬ್ರಾಹ್ಮ ಮುಹೂರ್ತದಲ್ಲಿ ಲಿಂಗೈಕ್ಯ ಚನ್ನಮಲ್ಲ ಶಿವಯೋಗಿಗಳ ಕರ್ತೃ ಗದ್ದುಗೆಗೆ ಮಹಾರುದ್ರಾಭಿಷೇಕ ಸೇರಿದಂತೆ ವಿವಿಧ ಧಾರ್ಮಿಕ ಪೂಜಾ ಕಾರ್ಯಕ್ರಮಗಳು ನಡೆಯಲಿವೆ. ಬೆಳಿಗ್ಗೆ 9ಗಂಟೆಗೆ 1008 ಮುತ್ತೈದೆಯರಿಗೆ ಉಡಿ ತುಂಬುವುದು ಹಾಗೂ ಒಂಭತ್ತು ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಯಲಿವೆ. ನಂತರ ದಾವಣಗೇರಿ ವಿವಿ ಪ್ರೋಫೆಸರ್ ಡಾ.ಮಲ್ಲಿಕಾರ್ಜುನ ಕೆ, ಅವರು ರಚಿಸಿದ 'ಸುವರ್ಣಗಿರಿ'ಗ್ರಂಥ ಬಿಡುಗಡೆಗೊಳಿಸಲಾಗುವದು. ಸಂಜೆ 3ನೇ ವರ್ಷದ ಭಾವೈಕ್ಯತೆಯ ಮಹಾರಥೋತ್ಸವ ಹಾಗೂ ಪ್ರವಚನ ಮಹಾಮಂಗಲೋತ್ಸವ ಮತ್ತು ಧರ್ಮಸಭೆ ನಡೆಯಲಿದೆ.

ನಾಲವಾರದ ಕೋರಿಸಿದ್ದೇಶ್ವರ ಮಹಾಸಂಸ್ಥಾನಮಠದ ಡಾ.ತೋಟೇಂದ್ರ ಶಿವಾಚಾರ್ಯರು, ಮುಂಡರಗಿ ಅನ್ನದಾನೀಶ್ವರ ಸಂಸ್ಥಾನಮಠದ ಉತ್ತರಾಧಿಕಾರಿ ಡಾ.ಮಲ್ಲಿಕಾರ್ಜುನ ಸ್ವಾಮೀಜಿ, ಗಟ್ಟೂರು ಬೂದಿಬಸವೇಶ್ವರ ಸಂಸ್ಥಾನಮಠದ ಬೂದಿಬಸವೇಶ್ವರ



ಶಿವಾಚಾರ್ಯರು, ಯದ್ದಲದೊಡ್ಡಿ ಸುವರ್ಣಗಿರಿ ವಿರಕ್ತಮಠದ ಮಹಾಲಿಂಗ ಸ್ವಾಮೀಜಿ ಸೇರಿದಂತೆ ನಾಡಿನ ವಿವಿಧ ಮಠಾಧೀಶರು, ಹಾಲಿ, ಮಾಜಿ ಸಚಿವರು, ಸಂಸದರು, ಹಾಲಿ, ಮಾಜಿ ಶಾಸಕರು ಪಾಲ್ಗೊಳ್ಳುವವರು. ಲಿಂ.ಚನ್ನಮಲ್ಲ ಶಿವಯೋಗಿಗಳ 70ನೇ ಜಾತ್ರಾ ಮಹೋತ್ಸವ ಕಾರ್ಯಕ್ರಮಕ್ಕೆ ಸುತ್ತಮುತ್ತಲಿನ ಸದ್ಭಕ್ತರು ಆಗಮಿಸಿ ಪೂಜ್ಯರುಗಳ ಕೃಪೆಗೆ ಪಾತ್ರರಾಗಬೇಕು ಎಂದು ಮನವಿ ಮಾಡಿದ್ದಾರೆ.



ಕೂಡ್ಲಿಗಿ ಶ್ರೀ ಸೊ ಲಮ್ಮ ದೇವಿಯ ಕಾರ್ತಿಕೋತ್ಸವ ದಿನಾಂಕ 9 .12 .2025 ರಂದು ಕಾರ್ಯಕ್ರಮ ಜರುಗಿತು . ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತ್ ಅಧ್ಯಕ್ಷ ಕಾವಲಿ ಶಿವಪ್ಪನಾಯಕ ಕೂಡ್ಲಿಗಿಯ ಚಿದಾನಂದ ಸ್ವಾಮಿ ಊರಮ್ಮ ದೇವಿ ಪೂಜಾರಿ ನಾಗರಾಜ್ ಬಡಿಗೇರ್ ಸಂಜೆವಾಣಿ ವರದಿಗಾರ ನಾಗರಾಜ್ ಬಿ ಮತ್ತು ಜಿಂಕಲ್ ನಾಗರಾಜ್ ಹನುಮಂತಪ್ಪ ಶಿಕ್ಷಕರು ನಿವೃತ್ತ ಹಾಗೂ ಬಣಕಾರ್ ಬಸವರಾಜ್ ಶ್ರೀ ಸೊ ಲಮ್ಮ ದೇವಿಯ ಸಕಲ ಭಕ್ತಾದಿಗಳು ದೇವಿಯ ಕೃಪೆಗೆ ಪಾತ್ರರಾಗಿದ್ದರು.

## ಬೆಂಬಲ ಬೆಲೆ: ಕೃಷಿ ಉತ್ಪನ್ನ ಖರೀದಿ

**ಕಲಬುರಗಿ:** ಡಿ.9(ಕರ್ನಾಟಕ ವಾರ್ತೆ) ಪ್ರಸಕ್ತ 2025-26ನೇ ಸಾಲಿನ ಬೆಂಬಲ ಬೆಲೆ ಯೋಜನೆಯಡಿ ಮುಂಗಾರು ಹಂಗಾಮಿನ



ಎಫ್.ಎ.ಕ್ಯೂ ಗುಣಮಟ್ಟದ ಹೆಸರು, ಉದ್ದು, ಸೂರ್ಯಕಾಂತಿ ಹಾಗೂ ಸೋಯಾಬಿನ್ ಖರೀದಿಗೆ ನಿಗದಿಪಡಿಸಿದ ಗರಿಷ್ಠ ಕ್ವಿಂಟಾಲ್ ಮಿತಿ ಬದಲಾಗಿ ಫ್ರೂಟ್ಸ್ ತಂತ್ರಾಂಶದಲ್ಲಿ ಲಭ್ಯವಿರುವ ರೈತರ ಬೆಳೆಯ ಮಾಹಿತಿ ಆಧಾರದ ಮೇಲೆ ಎಕರೆಗೆ ಅನುಗುಣವಾಗಿ ಖರೀದಿಸಲಾಗುವುದು ಎಂದು ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ತಿಳಿಸಿದ್ದಾರೆ.

ಈ ಹಿಂದೆ ಸರ್ಕಾರದ ಆದೇಶ ದಿ.25-09-2025 ಮತ್ತು 29-09-2025ರಲ್ಲಿ ಹೆಸರು ಕಾಳು ಪ್ರತಿ ಎಕರೆಗೆ 3 ಕ್ವಿಂಟಾಲ್‌ನಂತೆ ಪ್ರತಿ ರೈತನಿಂದ ಗರಿಷ್ಠ 15 ಕ್ವಿಂಟಾಲ್, ಉದ್ದು ಕಾಳು ಪ್ರತಿ ಎಕರೆಗೆ 5 ಕ್ವಿಂಟಾಲ್‌ನಂತೆ ಗರಿಷ್ಠ 30 ಕ್ವಿಂಟಾಲ್, ಸೂರ್ಯಕಾಂತಿ ಪ್ರತಿ ಎಕರೆಗೆ 4 ಕ್ವಿಂಟಾಲ್‌ನಂತೆ ಗರಿಷ್ಠ 20 ಕ್ವಿಂಟಾಲ್ ಹಾಗೂ ಸೋಯಾಬೀನ್ ಪ್ರತಿ ಎಕರೆಗೆ 5 ಕ್ವಿಂಟಾಲ್‌ನಂತೆ ಗರಿಷ್ಠ 20 ಕ್ವಿಂಟಾಲ್ ಖರೀದಿಗೆ ಆದೇಶಿಸಲಾಗಿತು. ಇದೀಗ ಸರ್ಕಾರ ಆದೇಶ ಮಾರ್ಪಡಿಸಿದ್ದು, ಅದರಂತೆ ಫ್ರೂಟ್ಸ್ ತಂತ್ರಾಂಶದಲ್ಲಿ ಲಭ್ಯವಿರುವ ರೈತರ ಬೆಳೆಯ ಮಾಹಿತಿ ಆಧಾರದ ಮೇಲೆ ಎಕರೆಗೆ ಅನುಗುಣವಾಗಿ ಖರೀದಿಸಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಹೆಸರು- 8,768 ರೂ., ಉದ್ದಿನ ಕಾಳು-7,800 ರೂ., ಸೂರ್ಯಕಾಂತಿ-7,721ರೂ. ಹಾಗೂ ಸೋಯಾಬೀನ್-5,328ರೂ. ಪ್ರತಿ ಕ್ವಿಂಟಾಲ್ ದರದಲ್ಲಿ ಖರೀದಿಸಲಾಗುತ್ತದೆ. ಮಾರ್ಪಡಿಸಿದ ಖರೀದಿ ಪ್ರಮಾಣದಂತೆ ರೈತರು ಹೆಸರು, ಉದ್ದು, ಹಾಗೂ ಸೂರ್ಯಕಾಂತಿ ಉತ್ಪನ್ನ ನೋಂದಣಿಯನ್ನು ಡಿಸೆಂಬರ್ 13ರೊಳಗೆ ಮಾಡಿ ಡಿಸೆಂಬರ್ 23 ರೊಳಗೆ ಮಾರಾಟ ಮಾಡಬೇಕು. ಅದೇ ರೀತಿ ಸೋಯಾಬೀನ್ ಉತ್ಪನ್ನ ಬೆಳೆದ ರೈತರು ಡಿಸೆಂಬರ್ 17 ರೊಳಗೆ ನೋಂದಣಿ ಮಾಡಿಕೊಂಡು ಡಿಸೆಂಬರ್ 27 ರೊಳಗೆ ಸಮೀಪದ ಕೃಷಿ ಪತ್ತಿನ ಸಹಕಾರ ಸಂಘ ಮತು ಎಫ್.ಪಿ.ಓ. ಖರೀದಿ ಕೇಂದ್ರದಲ್ಲಿ ಮಾರಾಟ ಮಾಡುವ ಮೂಲಕ ಯೋಜನೆ ಸೌಲಭ್ಯ ಪಡೆಯುವಂತೆ ರೈತ ಬಾಂಧವರಲ್ಲಿ ಡಿ.ಸಿ. ಮನವಿ ಮಾಡಿದ್ದಾರೆ.

ಉದ್ದಿನ ಕಾಳು ಮತ್ತು ಸೋಯಾಬೀನ್ ಖರೀದಿಗೆ ಮೊ. 9449864446, ಹೆಸರು ಕಾಳು ಖರೀದಿಗೆ 9964474444 ಹಾಗೂ ಸೂರ್ಯಕಾಂತಿ ಖರೀದಿಗೆ 9591812142 ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ.

## ವಾಹನಗಳ ಸುಸ್ಥಿತಿ ಕಾಪಾಡಿ ವಾಯು ಮಾಲಿನ್ಯ ತಡೆಗಟ್ಟಿ



**ಕೊಪ್ಪಳ:** ಸಾರ್ವಜನಿಕರು ತಮ್ಮ ವಾಹನಗಳಿಗೆ ಯಾವುದೇ ಕಲಬೆರಿಕೆಯಿಲ್ಲದ ಇಂಧನವನ್ನು ಉಪಯೋಗಿಸಿ ಅವುಗಳ ಸುಸ್ಥಿತಿಯನ್ನು ಕಾಪಾಡಿಕೊಂಡು ವಾಯು ಮಾಲಿನ್ಯವನ್ನು ತಡೆಕಟ್ಟಬೇಕೆಂದು ಕೊಪ್ಪಳ ಪ್ರಾದೇಶಿಕ ಸಾರಿಗೆ ಅಧಿಕಾರಿ ಪ್ರಭುಸ್ವಾಮಿ ಹಿರೇಮಠ ಹೇಳಿದರು.

ಅವರು ಇತ್ತೀಚೆಗೆ ಕೊಪ್ಪಳ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸಾರಿಗೆ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ವಾಯು ಮಾಲಿನ್ಯ ನಿಯಂತ್ರಣಾ ಜಾಗೃತಿ ಮಾಸಾಚರಣೆಯ ಸಮಾರೋಪ ಸಮಾರಂಭದ ಅಧ್ಯಕ್ಷತೆವಹಿಸಿ ಮಾತನಾಡಿದರು. ವಾಹನಗಳು ಹೊರಸೂಸುವ ಹೊಗೆಯಿಂದ ಗಾಳಿಯು ವಿಷಕಾರಿಯಾಗುತ್ತದೆ. ವಾಹನಗಳು ಹೊರಸೂಸುವ ವಿಷಕಾರಿ ಅನಿಲಗಳಾದ ಕಾರ್ಬನ್ ಮಾನಾಕ್ಸೈಡ್, ಕಾರ್ಬನ್ ಡೈ ಆಕ್ಸೈಡ್, ಹೈಡ್ರೋಕಾರ್ಬನ್, ಆಕ್ಸೈಡ್ ಆಫ್ ನೈಟ್ರೋಜನ್, ಸಲ್ಫರ್ ಡೈ ಆಕ್ಸೈಡ್ ಮತ್ತು ಸಸ್ಪೆಂಡೆಡ್ ಪಾರ್ಟಿಕುಲೇಟ್ ಮ್ಯಾಟರ್‌ಗಳಿಂದ ಮಾನವನ ಆರೋಗ್ಯದ ಮೇಲೆ ಬಹಳಷ್ಟು ಕೆಟ್ಟ ಪರಿಣಾಮಗಳು ಆಗುತ್ತವೆ. ಹಾಗಾಗಿ ಹೆಚ್ಚು ಹೊಗೆ ಬಿಡುವ ವಾಹನಗಳ ಬಳಕೆಯನ್ನು ಮಾಡಬಾರದು. ಪರಿಸರ ಸ್ನೇಹಿ ವಾಹನಗಳ ಬಳಕೆಗೆ ಆದ್ಯತೆ ನೀಡಬೇಕು ಎಂದರು.

ವಾಹನಗಳ ಹೊಗೆ ಸೂಸುವ ಪ್ರಮಾಣ ನಿಯಂತ್ರಣದಲ್ಲಿಡಲು ವಾಹನಗಳನ್ನು ಸದಾ ಸುಸ್ಥಿತಿಯಲ್ಲಿಟ್ಟುಕೊಳ್ಳಬೇಕು. ಪ್ರತಿ ಆರು ತಿಂಗಳಿಗೊಮ್ಮೆ ವಾಹನಗಳಿಗೆ ವಾಯು ಮಾಲಿನ್ಯ ತಪಾಸಣೆ ಮಾಡಿಸಬೇಕು. ವಾಹನದ ಏರ್ ಫಿಲ್ಟರ್ ಮತ್ತು ಸ್ಪಾರ್ಕ್ ಪ್ಲಗ್‌ಗಳನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ವಾಹನಗಳಿಗೆ ಕಲಬೆರಕೆ ಇಂಧನವನ್ನು ಮತ್ತು ಕಡಿಮೆ ದರ್ಜೆಯ ಕಳಪೆ ಇಂಜಿನ್ ಆಯಿಲ್ ಉಪಯೋಗಿಸಬಾರದು. ಸಾರ್ವಜನಿಕರಿಗೆ ಮತ್ತು ವಾಹನ ಸವಾರರಿಗೆ ವಾಯು ಮಾಲಿನ್ಯ ನಿಯಂತ್ರಣದ ಬಗ್ಗೆ ಅರಿವು ಮೂಡಿಸಲು ಪ್ರಾದೇಶಿಕ ಸಾರಿಗೆ ಇಲಾಖೆಯಿಂದ ಕೊಪ್ಪಳ ಜಿಲ್ಲೆಯಾದ್ಯಂತ ನವೆಂಬರ್ ಮಾಹೆಯಲ್ಲಿ ವಾಯು ಮಾಲಿನ್ಯ ನಿಯಂತ್ರಣಾ ಜಾಗೃತಿ ಮಾಸಾಚರಣೆಯನ್ನು ಹಮ್ಮಿಕೊಂಡು ಜಾಗೃತಿ ಮೂಡಿಸಲಾಗಿದೆ. ವಿಶೇಷವಾಗಿ ವಿದ್ಯಾರ್ಥಿಗಳಿಗೆ ವಾಯು ಮಾಲಿನ್ಯ ನಿಯಂತ್ರಣ ಕುರಿತಾಗಿ ಪ್ರಬಂಧ ಮತ್ತು ಚಿತ್ರಕಲಾ ಸ್ಪರ್ಧೆಗಳನ್ನು ಹಮ್ಮಿಕೊಂಡು ಅವರಿಗೂ ಸಹ ಪರಿಸರ ಸಂರಕ್ಷಣೆಯ ಅರಿವು ಮೂಡಿಸಲಾಗಿದೆ ಎಂದು ಹೇಳಿದರು.

**ಮಕ್ಕಳಿಗೆ ಪ್ರಶಸ್ತಿ:** ವಾಯು ಮಾಲಿನ್ಯ ನಿಯಂತ್ರಣ ಕುರಿತು ಶಾಲಾ ಮಕ್ಕಳಿಗೆ ಏರ್ಪಡಿಸಲಾಗಿದ್ದ ಪ್ರಬಂಧ ಹಾಗೂ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದ ಶಾಂತಿನಿಕೇತನ ಪಬ್ಲಿಕ್ ಶಾಲೆಯ ಮಕ್ಕಳಿಗೆ ಪ್ರಶಸ್ತಿ ನೀಡಿ, ಪುರಸ್ಕರಿಸಲಾಯಿತು.

ಕೊಪ್ಪಳ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯ ಹಿರಿಯ ಮೋಟಾರು ವಾಹನ ನಿರೀಕ್ಷಕ ಜಿ.ಎಂ ಸುರೇಶ್ ಹಾಗೂ ಮೋಟಾರು ವಾಹನ ನಿರೀಕ್ಷಕ ವಿಜೇಂದ್ರ ಡವಳಗಿ ಸೇರಿದಂತೆ ಕಚೇರಿ ಅಧೀಕ್ಷಕರು ಮತ್ತು ಇತರೆ ಸಿಬ್ಬಂದಿಗಳು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

# ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ

## ಸರ್ಕಾರದ ಮಾರ್ಗಸೂಚಿ ಯಂತೆ ಗ್ಯಾರಂಟಿ ಯೋಜನೆಗಳು ಜನರಿಗೆ ತಲುಪಿಸಿ: ನೀಲಕಂಠ ರಾಠೋಡ

• ಮಲ್ಲಮ್ಮ ನುಡಿ ಬಸವಕಲ್ಯಾಣ

ತಮ್ಮ ತಮ್ಮ ಇಲಾಖೆಯ ಮಾರ್ಗಸೂಚಿ ಮತ್ತು ನಿಯಮಗಳ ಪ್ರಕಾರ ಗ್ಯಾರಂಟಿ ಯೋಜನೆಗಳ ಸೌಲಭ್ಯ ಸಮರ್ಪಕವಾಗಿ ನೀಡುವ ಮೂಲಕ ಗ್ಯಾರಂಟಿ ಯೋಜನೆಗಳು ಯಶಶ್ವಿಗೊಳಿಸಬೇಕೆಂದು ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ನೀಲಕಂಠ ರಾಠೋಡ ಹೇಳಿದರು.

ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಬುಧವಾರ ತಾಲ್ಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿ, ಎಸ್.ಪಿ.ಟಿ.ಪಿ ಯೋಜನೆಯಡಿ ತಾಂಡಾಗಳಲ್ಲಿ ಜೆಸ್ಕಾಂ ಇಲಾಖೆಯಿಂದ ಕೈಗೊಳ್ಳಬೇಕಾದ ಕಾಮಗಾರಿಗಳನ್ನು ಶೀಘ್ರವಾಗಿ ಮುಗಿಸಬೇಕು ಮತ್ತು ಬಟಗೇರಾ ಗ್ರಾಮಕ್ಕೆ ಒಂದು ಲೈನಮ್ಯಾನ ಸಿಬ್ಬಂದಿ ನಿಯೋಜನೆ ಮಾಡಬೇಕು ಎಂದು ತಿಳಿಸಿದರು.

ನಾರಾಯಣಪೂರ ಗ್ರಾಮಕ್ಕೆ ಮಂಜೂರಾದ ಪವರ ಸ್ಟೇಷನ್ ಯಾವುದೇ ಕಾರಣಕ್ಕೂ ಕಳೆದುಕೊಳ್ಳು ಬಾರದು ಅದಕ್ಕೆ ಸಂಬಂಧ ಪಟ್ಟ ತಹಶೀಲ್ದಾರ, ಇಒ ಮತ್ತು ಪಿಡಿಒ ಅವರ ಜೊತೆ ಚರ್ಚಿಸಿ ನಿಮಗೆ ಸರಕಾರಿ ಭೂಮಿಯನ್ನು ಮಂಜೂರು



ಮಾಡಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತವೆ ಎಂದು ಜೇಸ್ಕಾಂ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರು.

ನ್ಯಾಯ ಬೆಲೆ ಅಂಗಡಿಗಳ ಬಗ್ಗೆ ಬಹಳಷ್ಟು ದೂರು ಬರುತ್ತಿವೆ. ಆದರೂ ಸಂಬಂಧ ಪಟ್ಟ ಇಲಾಖೆ ಅಧಿಕಾರಿಗಳು ಗಮನಕ್ಕೆ ಹರಿಸುತ್ತಿಲ್ಲ. ಹೀಗಾಗಿ ಮುಂದಿನ ಗ್ಯಾರಂಟಿ ಸಭೆಗೆ ಬರುವಾಗ ಸಂಪೂರ್ಣ ವರದಿಯೊಂದಿಗೆ ಬರಬೇಕು ಮತ್ತು ಯುವನಿಧಿ ಗಾಗಿ ಸಲ್ಲಸಿಸಿದ ಬಾಕಿ ಇರುವ ಅರ್ಜಿಗಳನ್ನು ಸಂಬಂಧ ಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಬಗೆಹರಿಸಿ ವಿದ್ಯಾರ್ಥಿಗಳ ಇದರ ಲಾಭ ಸಿಗುವಂತೆ ಮಾಡಬೇಕು ಎಂದರು.

ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ರಮೇಶ ಸುಲ್ಪಿ ಅವರು ಮಾತನಾಡಿ, ನ್ಯಾಯ ಬೆಲೆ ಅಂಗಡಿಯಲ್ಲಿ ಕಡ್ಡಾಯವಾಗಿ ಗ್ಯಾರಂಟಿ ಯೋಜನೆಗಳ ಮಾಹಿತಿವುಳ್ಳ ಬೋರ್ಡ್ ಅಳವಡಿಸಬೇಕು ಮತ್ತು ಸಂಬಂಧ ಪಟ್ಟ ಇಲಾಖೆ ಅಧಿಕಾರಿಗಳೂ ಅನುಪಾಲನ ವರದಿಯನ್ನು ಸಲ್ಲಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ತಾ.ಪಂ.ವ್ಯವಸ್ಥಾಪಕ ರಾಜರೆಡ್ಡಿ ಪಾಟೀಲ್, ಪ್ರ.ದ.ಸ.ಶಶಿಕಾಂತ ರಾಸೂರೆ, ಐಇಸಿ ಸಂಯೋಜಕ ವೀರಾರೆಡ್ಡಿ ಹಾಗೂ ಗ್ಯಾರಂಟಿ ಯೋಜನೆ ಸದಸ್ಯರಾದ ಎಂ.ಡಿ.ಖತ್ಬೋದ್ದಿನ್, ದಸರಥ ಶಿವಪ್ಪಾ, ಸಂಜುಕುಮಾರ, ಅನೀಲ ಮನೋಹರ, ದಿನೇಶ, ಮಾಧವ, ಯುವರಾಜ, ಪ್ರೀತೇಶ ಸೇರಿದಂತೆ ಪಂಚ ಗ್ಯಾರಂಟಿ ಯೋಜನೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಇದ್ದರು.

### ವಿಶೇಷ ಸನ್ಮಾನ

ಸಿಡಿಪಿಒ ಗೌತಮ ಶಿಂಧೆ ಅವರಿಗೆ ಭೀಮ ರತ್ನ ಪ್ರಶಸ್ತಿ ಸಭಿಸಿದಕ್ಕೆ ಮತ್ತು ತಾ.ಪಂ.ವ್ಯವಸ್ಥಾಪಕರಾಗಿ ಬಡ್ತಿ ಹೊಂದಿದ ರಾಜರೆಡ್ಡಿ ಪಾಟೀಲ್ ಅವರಿಗೆ ಸಭೆಯಲ್ಲಿ ಗ್ಯಾರಂಟಿ ಯೋಜನೆ ಅಧ್ಯಕ್ಷ ಹಾಗೂ ಇಒ ಅವರು ಸನ್ಮಾನಿಸಿ ಗೌರವಿಸಿದರು.

ಬಸವಕಲ್ಯಾಣ ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಬುಧವಾರ ನಡೆದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ಅಧ್ಯಕ್ಷ ನೀಲಕಂಠ ರಾಠೋಡ ಅಧ್ಯಕ್ಷತೆಯಲ್ಲಿ ನಡೆಯಿತು. ಇಒ ರಮೇಶ ಸುಲ್ಪಿ ಹಾಗೂ ಅಧಿಕಾರಿಗಳು ಇದ್ದರು.

## ಸಿಎಂ ಸ್ಥಾನಕ್ಕೆ ಯಾರು ಎಂಬ ಕಿತ್ತಾಟ

• ಮಲ್ಲಮ್ಮ ನುಡಿ ಹುಣಸೂರು

ರಾಜ್ಯದಲ್ಲಿನ ರಾಜಕಾರಣ ನಗೆಪಾಟಲಿಗೀಡಾಗುಂತಿದೆ. ಈಗಿನ ಸಿಎಂ ಹಿಂದುಳಿದವರ ನೇತಾರ ಎನಿಸಿಕೊಂಡಿದ್ದಾರೆ. ಅವರ ನಂತರ ಸಿಎಂ ಸ್ಥಾನಕ್ಕೆ ಯಾರು ಎಂಬ ಬಗ್ಗೆ ಕಿತ್ತಾಟ ನಡೆದಿದೆ. ಒಂದು ವೇಳೆ ಅವರು ಕೆಳಗಿಳಿದಲ್ಲಿ ದಲಿತರನ್ನೇ ಸಿಎಂ ಸ್ಥಾನಕ್ಕೆ ಕೂರಿಸಬೇಕು.ದೇಶದ ಒಟ್ಟಾರ ಜನಸಂಖ್ಯೆಯಲ್ಲಿ ಅತಿ ಹೆಚ್ಚಿನವರಾಗಿದ್ದರೂ ದಲಿತರಿಗೆ ಅಧಿಕಾರ ವೇಳೆ ವಂಚನೆ ಮಾಡಲಾಗುತ್ತಿದೆ. ಎಂದುಕರ್ನಾಟಕ ದಲಿತ ಚಳವಳಿ ನವನಿರ್ಮಾಣ ವೇದಿಕೆ ಅಧ್ಯಕ್ಷ ಹರಿಹರ ಆನಂದಸ್ವಾಮಿ ತಿಳಿಸಿದ್ದಾರೆ

ನಗರದ ಪತ್ರಕರ್ತರ ಸಂಘದ ಕಚೇರಿಯಲ್ಲಿ ಕರೆಯಲಾಗಿದೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ ಡಾ.ಜಿ. ಪರಮೇಶ್ವರ್ ಅವರು ಎಂದೋ ಸಿಎಂ ಆಗಬೇಕಾಗಿತ್ತು. ಅದನ್ನು ತಪ್ಪಿಸಲಾಗಿದೆ. ಓಟಿಗಾಗಿ ಮಾತ್ರ ದಲಿತರನ್ನು ಬಳಸಿಕೊಳ್ಳಲಾಗುತ್ತಿದೆ. ಆದರೆ ಅಧಿಕಾರದ ವಿಷಯ ಬಂದಾಗ ಅನ್ಯಾಯ ಮಾಡಲಾಗುತ್ತಿದೆ.

ಸ್ವತಂತ್ರ ನಂತರ 78 ವರ್ಷಗಳಿಂದ ದಲಿತರಿಗೆ ಸಿಎಂ ಸ್ಥಾನ ಸಿಕ್ಕಿಲ್ಲ ನಾವೆಲ್ಲರೂ ಒಂದಾಗಿ ನಮಗೆ ರಾಜಕೀಯ ಸ್ಥಾನಮಾನ ಪಡೆಯಬೇಕು ದಲಿತರಲ್ಲಿ



ಒಬ್ಬರು ಸಿಎಂ ಆಗಬೇಕು.ಹೀಗಾಗಿ ದಲಿತರು, ದಲಿತ ಸಂಘಟನೆಗಳು ಒಡಕು ಮರೆತು ರಾಜ್ಯದಲ್ಲಿ ಡಾ.ಜಿ. ಪರಮೇಶ್ವರ್, ಮುನಿಯಪ್ಪ ಅಥವಾ ಡಾ.ಎಚ್.ಸಿ. ಮಹದೇವಪ್ಪ ಅವರನ್ನು ಸಿಎಂ ಆಗಿಸುವ ನಿಟ್ಟಿನಲ್ಲಿ ಸಂಘಟಿತ ಹೋರಾಟ ಮಾಡಬೇಕು.

ಬಹು ಸಂಖ್ಯಾತ ದಲಿತರಿಗೆ ಇಲ್ಲಿಯವರೆಗೂ ಮುಂಚೂಣಿನಾಯಕತ್ವದಕ್ಕದಿರುವುದು ದುರಂತವೇ ಸರಿ. ಎಲ್ಲರಾಜಕೀಯ ಪಕ್ಷಗಳು ಶೋಷಿತ ಸಮುದಾಯಗಳನ್ನು ತಮ್ಮ ಬಳಕೆವಸ್ತುಗಳನ್ನಾಗಿ ಮಾಡಿಕೊಂಡು ಅಧಿಕಾರದ ಲಾಲಸೆ ಯಶಸ್ವಿಗೊಳಿಸಿಕೊಳ್ಳುತ್ತಿವೆ.ಇದನ್ನು ದಲಿತರು ಅರ್ಥಮಾಡಿಕೊಳ್ಳಬೇಕು ಎಂದು. ತಿಳಿಸಿದರು

ಪತ್ರಿಕಾಗೋಷ್ಠಿಯಲ್ಲಿ ಡಿಎಸ್ ಎಸ್ ಜಿಲ್ಲಾ ಸಂಚಾಲಕ ಕೊಳಗಟ್ಟ ಕೃಷ್ಣ, ಡಿಎಸ್ ಎಸ್ ಮುಖಂಡ ದರ್ಶನ್ ಹಾಜರಿದ್ದರು.

## ಮಾನಸಿಕ ಬೆಳವಣಿಗೆ ಮಕ್ಕಳ ಕಲಾಪ್ರತಿಭೆ

• ಮಲ್ಲಮ್ಮ ನುಡಿ ಯಾದಗಿರಿ

ಡಿಸೆಂಬರ್ 10, (ಕ.ವಾ) : ಮಕ್ಕಳ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಮಕ್ಕಳ ಕಲಾಪ್ರತಿಭೆ ಪ್ರೋತ್ಸಾಹಿಸಬೇಕು ಎಂದು ಜಿಲ್ಲಾ ಕಾರ್ಯಕ್ರಮ ಸಂಯೋಜಕರು ಅನಿಲಕುಮಾರ ಹೇಳಿದರು.

ಖಾನಾಪುರ ಗ್ರಾಮದಲ್ಲಿ ಡಿ.9 ರಂದು ಬೆಂಗಳೂರು ರಾಜ್ಯ ಬಾಲ ಭವನ ಸೊಸೈಟಿ, ಯಾದಗಿರಿ ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ ಶಹಾಪೂರ ತಾಲ್ಲೂಕ ಬಾಲ ಭವನ ಸಮಿತಿ ವತಿಯಿಂದ ಸರ್ಕಾರಿ ಪ್ರೌಢಶಾಲೆ ಮಕ್ಕಳ ಕಲಾ ಪ್ರತಿಭೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.5 ರಿಂದ 16 ವರ್ಷ ಒಳಗಿನ ಮಕ್ಕಳಿಗೆ ಅವರ ಪ್ರತಿಭೆಗೆ ವೇದಿಕೆಯನ್ನು ಒದಗಿಸುವ ಅನೇಕ ಕಾರ್ಯಕ್ರಮಗಳ ಸರಣಿ ಇದಾಗಿದೆ. ಶಿಕ್ಷಣ ಆಧುನಿಕ ಕಾಲದಲ್ಲಿ ನಮ್ಮ ವ್ಯಕ್ತಿತ್ವಕ್ಕೆ ಪೂರಕವಾಗಿ ಮಹತ್ವದ ಪಾತ್ರವನ್ನು ವಹಿಸಿದೆ ಮಕ್ಕಳ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಕಲಾಪ್ರತಿಭೆ ಕಾರ್ಯಕ್ರಮ ಪೂರಕವಾಗಿದೆ ಹಾಗೂ ಶಾಲೆಯಲ್ಲಿ ಮಕ್ಕಳಿಗೆ 100 ಮೀಟರ್ ಓಟ, ಮತ್ತು 800 ಮೀಟರ್ ಓಟ, ಕಬ್ಬಡಿ, ಥ್ರೋಬಾಲ್, ಖೋ ಖೋ, ಪ್ರಬಂಧ ಸ್ಪರ್ಧೆ ಚಿತ್ರಕಲೆ, ಪಂಚಗ್ಯಾರಂಟಿ ಯೋಜನೆಗಳಿಂದ ಬಡವರ



ಬದುಕಿನಲ್ಲಿ ಆಗಿರುವ ಸಕರಾತ್ಮಕ ಬದಲಾವಣೆಗಳ ಬಗ್ಗೆ ಭಾಷಣ ಹೀಗೆ ವಿವಿಧ ಸ್ಪರ್ಧೆಗಳನ್ನು ತುಂಬ ಚೆನ್ನಾಗಿ ಭಾಗವಹಿಸಿ ಎಂದು ಉತ್ಸಾಹ ನೀಡಿದರು.

ಶಾಲೆಯ ಮುಖ್ಯಗುರುಗಳಾದ ರವಿಂದ್ರಕುಮಾರ ಅವರು ಮಾತನಾಡಿ, ನಾಡು, ನುಡಿ, ಪರಂಪರೆಯನ್ನು ನಮ್ಮ ಸಂವಿಧಾನದ ಆಶಯಗಳನ್ನು ಭಾರತೀಯ ನೃತ್ಯ, ಸಂಗೀತದ ಪರಿಚಯಾತ್ಮಕ ಕಾರ್ಯಕ್ರಮಗಳು ಸಾಂಸ್ಕೃತಿಕ ಹಿರಿಮೆಯನ್ನು ಹೆಚ್ಚಿಸುವಲ್ಲಿ ಮಕ್ಕಳು ಪ್ರದರ್ಶನ ಮಾಡುತ್ತಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಈ ಸಮಯದಲ್ಲಿ ಸ್ಪರ್ಧೆಯಲ್ಲಿ ವಿಜೇತರಾದ ಎಲ್ಲಾ ಮಕ್ಕಳಿಗೂ ಪ್ರಮಾಣ ಪತ್ರಗಳು, ಬಹುಮಾನ ವಿತರಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷರು, ಶ್ರೀಮತಿ ಸರೋಜಮ್ಮ, ಶಾಲೆಯ ಎಸ್‌ಡಿಎಮ್‌ಸಿ ಅಧ್ಯಕ್ಷರು ರಂಗಪ್ಪ ಕೊಚಟ್ಟಿ, ಖಾನಪೂರ ಗ್ರಾಮ ಪಂಚಾಯತಿ ಸದಸ್ಯರಿದ್ದರು.


## ಕಬ್ಬು ಸಂಶೋಧನಾ ಕೇಂದ್ರ ಸ್ಥಾಪನೆಗಾಗಿ ರೈತ ಸಂಘದ ಮನವಿ

• ಮಲ್ಲಮ್ಮ ನುಡಿ ಬೀದರ್

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಬೀದರ್ ಜಿಲ್ಲಾ ಘಟಕದ ವತಿಯಿಂದ, ಜಿಲ್ಲೆಯ ಅರಣ್ಯ-ಪರಿಸರ ಹಾಗೂ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆ ಅವರಿಗೆ ಮಹತ್ವದ ಬೇಡಿಕೆಗಳನ್ನು ಒಳಗೊಂಡ ಮನವಿಯನ್ನು ಜಿಲ್ಲಾಧಿಕಾರಿಗಳ ಮುಖಾಂತರ ಸಲ್ಲಿಸಲಾಯಿತು.

ಬೀದರ್ ಜಿಲ್ಲೆಯಲ್ಲಿ ವರ್ಷಕ್ಕೆ ಸುಮಾರು 30 ಲಕ್ಷ ಮೆಟ್ರಿಕ್ ಟನ್ ಕಬ್ಬು ಉತ್ಪಾದನೆ ನಡೆದರೂ, ಜಿಲ್ಲೆಯಲ್ಲಿ ಕಬ್ಬು ಸಂಶೋಧನಾ ಕೇಂದ್ರದ ಅಭಾವದಿಂದ ರೈತರಿಗೆ ತಳಿ ಮತ್ತು ಉತ್ಪಾದಕತೆ ವಿಷಯದಲ್ಲಿ ತಾಂತ್ರಿಕ ನೆರವು ಲಭ್ಯವಿಲ್ಲದೆ ಸಮಸ್ಯೆ ಉಂಟಾಗುತ್ತಿದೆ ಎಂದು ತಿಳಿಸಲಾಗಿದೆ.

ಬೀದರ್ ನಗರದ ಹಳ್ಳದಕೇರಿ ಬಳಿ ಇರುವ 34 ಎಕರೆ ಜಮೀನಿನಲ್ಲಿ ಕಬ್ಬು ಸಂಶೋಧನಾ ಕೇಂದ್ರ ಸ್ಥಾಪನೆ.



ಜಿಲ್ಲೆಯ ಮಣ್ಣು, ನೀರು, ಹವಾಮಾನಕ್ಕೆ ತಕ್ಕ ಅತ್ಯುತ್ತಮ ಕಬ್ಬು ತಳಿಗಳನ್ನು ವಿಜ್ಞಾನಿಗಳು ಶಿಫಾರಸು ಮಾಡುವ ಅಗತ್ಯವಿದೆ. ವಿಜ್ಞಾನಿಗಳ ಮಾರ್ಗದರ್ಶನದಲ್ಲಿ ರೈತರು ಪ್ರತಿ ಎಕರೆಗೆ 50-70 ಟನ್ ಕಬ್ಬು ಉತ್ಪಾದನೆ ಮಾಡಬಹುದು ಎಂದು ಮನವಿಯಲ್ಲಿ ತಿಳಿಸಲಾಗಿದೆ.ಬೀದರ್ ಜಿಲ್ಲೆಯಲ್ಲಿ ಕೃಷಿ ಮಹಾವಿದ್ಯಾಲಯ ಪ್ರಾರಂಭಿಸುವುದು. ಜಿಲ್ಲೆಯಲ್ಲಿ ಬೆಳೆಯುತ್ತಿರುವ ತೊಗರಿ, ಹೆಸರು, ಉದ್ದು, ಸೋಯಾ, ಹತ್ತಿ, ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದ ವಿಶೇಷ ವಿಜ್ಞಾನಿಗಳನ್ನು ನೇಮಕ ಮಾಡುವುದು. ರೈತರು ಹೊರರಾಜ್ಯಗಳಿಂದ ತಳಿ ತರಲು ಸಕ್ಕರೆ ಕಾರ್ಖಾನೆಗಳ ಅಸ್ಪಷ್ಟ ನೀತಿಗಳಿಂದ "ರಿಕವರಿ ಕಡಿಮೆಯಾಗಿದೆ" ಎಂಬ ನೆಪದಲ್ಲಿ ರೈತರು ನಷ್ಟಕ್ಕೆ ತುತ್ತಾಗುತ್ತಿದ್ದಾರೆ ಎಂದು ಸಂಘವು ಸಚಿವರಿಗೆ ತಿಳಿಸಿದೆ.

ರೈತರ ಅಭಿವೃದ್ಧಿಗಾಗಿಯೇ ಈ ಬೇಡಿಕೆಗಳು ಜಿಲ್ಲೆಯ ಕೃಷಿ ಬೆಳವಣಿಗೆ, ರೈತರ ಲಾಭದಾಯಕತೆ ಮತ್ತು ತಾಂತ್ರಿಕ ಜ್ಞಾನ ವೃದ್ಧಿಗಾಗಿ ಈ ಬೇಡಿಕೆಗಳನ್ನು ತುರ್ತುವಾಗಿ ಅನುಷ್ಠಾನಗೊಳಿಸುವಂತೆ ಸಂಘ ಒತ್ತಾಯಿಸಿದೆ.

ಈ ಸಂದರ್ಭದಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಸಿದ್ರಾಮಪ್ಪಾ ಆಣದೂರೆ, ಜಿಲ್ಲಾ ಕಾರ್ಯಾಧ್ಯಕ್ಷ ಶ್ರೀಮಂತ ಬಿರಾದಾರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಯಾನಂದ ಸ್ವಾಮಿ ಸಿರ್ಸಿ, ಶೇಷರಾವ ಕಣಜಿ, ಬಾಬುರಾವ ಜೋಳದಾಬಕಾ, ಚಂದ್ರಶೇಖರ ಜಮಖಂಡಿ, ಶಂಕರೆಪ್ಪಾ ಪಾರಾ, ಶೋಭಾವತಿ ಕಾರಭಾರಿ, ಪ್ರವೀಣ ಕುಲಕರ್ಣಿ, ಶಿವಾನಂದ ಹುಡಗೆ, ಸುಭಾಷ ರಗಟೆ, ನಾಗಯ್ಯಾ ಸ್ವಾಮಿ, ಪ್ರಕಾಶ ಬಾವಗೆ, ಬಸಪ್ಪಾ ಮರಖಲ್, ವಿಶ್ವನಾಥ ಧರಣೆ, ಮಲ್ಲಿಕಾರ್ಜುನ ಚಕ್ಕಿ ಸೇರಿದಂತೆ ವಿವಿಧ ತಾಲೂಕ ಅಧ್ಯಕ್ಷರು ಮತ್ತು ರೈತ ಮುಖಂಡರು ಉಪಸ್ಥಿತರಿದ್ದರು.

# ಎಲ್ಲರನ್ನೂ ಏಕತೆಯಿಂದ ಕಾಣುವುದೇ ಗ್ರಾಮೀಣಾಭಿವೃದ್ಧಿ ಯೋಜನೆಯ ಮೂಲ ಉದ್ದೇಶ

• ಮಲ್ಲಮ್ಮ ನುಡಿ ಮುದಗಲ್

ಸರ್ವರನ್ನು ಐಕ್ಯತೆಯಿಂದ ಕಾಣುವುದೇ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ಮೂಲ ಉದ್ದೇಶವಾಗಿದೆ ಎಂದು ಪ್ರಾದೇಶಿಕ ನಿರ್ದೇಶಕ ಜೆ. ಚಂದ್ರಶೇಖರ ಬುಧವಾರ ತಿಳಿಸಿದರು.

ಪಟ್ಟಣದ ಕಿಲ್ಲಾದಲ್ಲಿರುವ ಐತಿಹಾಸಿಕ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಶ್ರೀ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ ಲಿಂಗಸಗೂರು, ಡಾ. ಡಿ. ವೀರೇಂದ್ರ ಹೆಗ್ಗಡೆ ಹಾಗೂ ಮಾತೃ ಡಾ. ಹೇಮಾವತಿ ಹೆಗ್ಗಡೆ ಶುಭಾಶೀರ್ವಾದದಿಂದ ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ ತಾಲೂಕ ಮಟ್ಟದ ಮಹಿಳಾ ವಿಚಾರಗೋಷ್ಠಿ ಕಾರ್ಯಕ್ರಮಕ್ಕೆ ಜ್ಯೋತಿ ಬೆಳಗಿಸಿ ಮಾತನಾಡಿದ ಅವರು ಜ್ಞಾನವಿಕಾಸ ಕೇಂದ್ರಗಳ ಮೂಲಕ ಜ್ಞಾನ ಹಂಚುವ ಕಾರ್ಯವಾಗುತ್ತಿರುವದು ಹೆಮ್ಮೆ ವಿಷಯವಾಗಿದೆ. ನಾವೂ ತಿಳಿದುಕೊಂಡಿರುವ ವಿಚಾರಗಳನ್ನು ಇತರರಿಗೂ ತಿಳಿಸಿ ಜಾಗೃತಿ ಮೂಡುತ್ತದೆ. ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಟ್ರಸ್ಟ ಸರಕಾರಕ್ಕೆ ಪರ್ಯಾಯವಾಗಿ ಕಾರ್ಯ



ನಿರ್ವಹಿಸುತ್ತದೆ. ಜ್ಞಾನ ವಿಕಾಸ ಕಾರ್ಯಕ್ರಮ ಕುಟುಂಬದ ಸರ್ವತೋಮುಖ ಅಭಿವೃದ್ದಿಗಾಗಿ ಹಾಗೂ ಮಹಿಳೆಯರನ್ನು ಸಬಲರನ್ನಾಗಿಸಿ, ಮಕ್ಕಳ ಭವಿಷ್ಯ, ಮತ್ತು ಆರೋಗ್ಯ ಆಧರಿಸಿ ಭವಿಷ್ಯ ಕಂಡು ಕೊಳ್ಳುತ್ತದೆ. ಕಳೆದ 15ವರ್ಷದಿಂದ ಸಮಸ್ಯೆಗೆ ಸಬಲಿಕರಣವಾಗಿರುವರ ಮನೆ ಮನೆ ಬಾಗಿಲಿಗೆ ನಮ್ಮ ಟ್ರಸ್ಟ ಹೋಗಿ ಸ್ಪಂದಿಸುವ ಸೇವೆ ಮಾಡುತ್ತಿದೆ. ಮಂಜುನಾಥ ಸ್ವಾಮಿ ಹುಂಡಿಯಿಂದ ಆರ್ಥಿಕತೆ, ಶೈಕ್ಷಣಿಕ ಪ್ರಗತಿ, ಸೇರಿದಂತೆ ವಿವಿಧ ಸದುದ್ದೇಶಕ್ಕಾಗಿ ಕೈಗೆ ಬೇಕಾದ ಬಂಡವಾಳ ನೀಡಿ ಮಹಿಳೆಯರ ಮನಸ್ಸಿಗೆ ನೆಮ್ಮದಿ ನೀಡುತ್ತದೆ. 17 ಸಾವಿರ ಕುಟುಂಬಗಳಿಗೆ ಪ್ರತಿ ತಿಂಗಳು ಸಾವಿರ ರೂಪಾಯಿ ಹಣ ಮತ್ತು ಆಹಾರದ ಕಿಟ್ ತಲುಪಿಸುತ್ತಿದ್ದೆವೆ.

675 ಮನೆ ನಿರ್ಮಾಣ, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಹಾಗೂ ಜ್ಞಾನ ದೀಪ ಶಿಕ್ಷಕರನ್ನು ಟ್ರಸ್ಟನಿಂದ ನೀಡಲಾಗಿದೆ. ಜನ ಜಾಗೃತಿ ವೇದಿಕೆಯಿಂದ 1ಲಕ್ಷ 80ಸಾವಿರ ಜನರಿಗೆ ಬದುಕು ನೀಡಿದೆ. ಸ್ವಸಹಾಯ ಸಂಘದಿಂದ ಸಾಲ ನೀಡುತ್ತೇವೆ. ಮಹಿಳೆಯರು ತಮ್ಮ ಕೌಶಲಗಳನ್ನು ಪ್ರದರ್ಶಿಸಲು ಜ್ಞಾನ ವಿಕಾಸ ಕಾರ್ಯಕ್ರಮ ಉತ್ತಮ ವೇದಿಕೆ ಮಾಡಿಕೊಟ್ಟಿದೆ ಹಾಗೂ ಸ್ವಉದ್ಯೋಗಕ್ಕೂ ಗಮನ ನೀಡಲಾಗುವುದು ಎಂದು ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ವೇದಿಕೆಯಲ್ಲಿ ಚೆಕ್ ವಿತರಣೆ, ವೀಲಚೇರವಿತರಣೆ, ಆರೋಗ್ಯ ರಕ್ಷಾಕಾರ್ಡ, ಲಾಭಾಂಶ, ವಿದ್ಯಾರ್ಥಿ ವೇತನ ಹಾಗೂ ಸಾಧಕರಿಗೆ ಸನ್ಮಾನ, ಸಾಂಕ್ರತಿಕ ಕಾರ್ಯಕ್ರಮದ ಚಟುವಟಿಕೆಗಳು ಜರುಗಿದವು.

ಈ ವೇಳೆ ರಾಮಲಿಂಗೇಶ್ವರ ದೇವಸ್ಥಾನ ಟ್ರಸ್ಟಅಧ್ಯಕ್ಷ ಸುರೇಶ ಗೌಡ್ರು ಆದಾಪುರ, ಜಿಲ್ಲಾ ಜನ ಜಾಗೃತಿ ಸದಸ್ಯ ಗ್ಯಾನನ ಗೌಡ ನಾಗಲಾಪುರ, ಜವಳಿ ವ್ಯಾಪಾರಿ ಜವರಲಾಲ್ ಶೇಠ, ಜನ ಜಾಗೃತಿ ವೇದಿಕೆ ಸದಸ್ಯೆ ಹಾಗೂ ಶಾಂಭವಿ ಮಹಿಳಾ ಮಂಡಳಿ ಅಧ್ಯಕ್ಷೇ ಡಾ. ಶಶಿಕಲಾ ಭೋವಿ, ಉಪಾಧ್ಯಕ್ಷೇ ತೋಟಮ್ಮ, ಇಲಕಲ್ ಶ್ರೀ ಶಾರದಾ ವಿದ್ಯಾಕೇಂದ್ರ ಸಂಸ್ಥಾಪ ಅಧ್ಯಕ್ಷ ಶರಣ್ಯ ಹರೀಶ ಅಂಗಡಿ, ಸಮನ್ವಅಧಿಕಾರಿ ಅನುರಾಧ, ತಾಲೂಕ ಯೋಜನಾಧಿಕಾರಿ ಅಡಿವಯ್ಯ ಮಾಲಗತ್ತಿ,ಕೃಷಿ ಅಧಿಕಾರಿ ಮೊಹ್ಮದಲಿ, ಆಂಜನೇಯ ಸೇರಿದಂತೆ ಇತರರಿದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)